# ಅಖಿಲ ಭಾರತ ಪತ್ರಿಕೆ

**ಸಂಪಾದಕರು, ಧಾರವಾಡ**
ಡಾ॥ ಕೆ.ಎಸ್. ಆಮೂರ,
ಎಂ.ಎಸ್ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಅಧ್ಯಕ್ಷರು, ಶ್ರೀ ಅರವಿಂದೋ ಸೊಸೈಟಿ
ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ


**"ಭಗವಂತನೊಡನೆ ಏಕತೆ"**

**ಭಾಗ – 1 : ವಿವರಣೆ**

**ಅನು : ಡಾ. ಕೆ.ಎಸ್. ಆಮೂರ**
ಸಾಧಕನ ಕೊನೆಯ ಗುರಿ ಏನಾಗಿರಬೇಕು?
ಭಗವಂತನೊಡನೆ ನಾವು ಏಕತೆಯನ್ನು ಏಕೆ ಪಡೆದಿರಬೇಕು?

**ಅನು : ಶ್ರೀ ಪುರುಷೋತ್ತಮ ಗಲಗಲಿ**
ಭಕ್ತನ ಧರ್ಮ ಯೋಗವಾಗುವುದು ಯಾವಾಗ?

**ಅನು : ಡಾ. ಕೆ.ಎಸ್. ಆಮೂರ**
ಯೋಗದ ಗುರಿ ಏಕತೆ
ವೇದಾಂತದ ಪರಮೋಚ್ಚ ಜ್ಞಾನ: "ನಾನು ಅವನಾಗಿ (ಭಗವಂತನಾಗಿ)ದ್ದೇನೆ"

**ಭಾಗ – 2 : ಮಾರ್ಗದರ್ಶನ**
ಭಗವಂತನೊಡನೆ ಏಕತೆಯನ್ನು ಸಿದ್ಧಿಸಿಕೊಳ್ಳುವುದಕ್ಕೆ ಸಾಧನ
ಸಾಧನೆಯಲ್ಲಿ ಸರಿಯಾದ ಶ್ರೇಣಿಕ್ರಮ
ಯಶಸ್ಸು ಯಾವುದರ ಮೇಲೆ ಅವಲಂಬಿಸಿದೆ?
ದೈವೀ ಪ್ರಜ್ಞೆಯೊಂದಿಗೆ ಏಕತೆ
ದೈವೀ ಸಂಕಲ್ಪದೊಂದಿಗೆ ಏಕತೆ

**ಭಾಗ – 3 : ಇಡಿಯಾದ ಏಕತೆ**
ಪರಿಪೂರ್ಣ, ಆದರೆ ಭಾಗಶಃ ತಾದಾತ್ಮ್ಯ
ಇಡಿಯಾಗಿರುವ ನನ್ನೊಡನೆ ಏಕತೆ
ಏಕತೆಯ ಮೂರು ಗುಣಲಕ್ಷಣಗಳು

**ಭಾಗ – 4 : ಸೃಷ್ಟಿಯ ಉದ್ದೇಶ**

**ಅನು : ಶ್ರೀ ವೀರೇಂದ್ರ ಸಿಂಪಿ**
ಸೃಷ್ಟಿಯ ಪೂರ್ಣ ಸುತ್ತುವಿಕೆ

**ಅನು : ಡಾ. ಕೆ.ಎಸ್. ಆಮೂರ**
ಆತ್ಮ ಜನ್ಮ ತಾಳುವುದರ ಅರ್ಥ
ಮತ್ತು ಈಗ ನಾನು ನಿನಗೆ ಬಹಳ ಹತ್ತಿರದವಳಾದ ಭಾವನೆ ಬರುತ್ತಿದೆ.
ದೈನಂದಿನ ಜೀವನ ಕುರಿತು ಶ್ರೀಮಾತೆಯವರ ಉಪದೇಶ

**ವಾರ್ತಾಪತ್ರ** 43


**ಬೆಲೆ : 15/–**

# "ಭಗವಂತನೊಡನೆ ಏಕತೆ"

## ಸಾಧಕನ ಕೊನೆಯ ಗುರಿ ಏನಾಗಿರಬೇಕು?

(23/508) **ಪ್ರಶ್ನೆ :** *ಸಾಧಕನ ಕೊನೆಯ ಗುರಿ ಏನಾಗಿರಬೇಕು? ಅದು 'ಯೋಗಿ' ಯಾಗುವುದು ಆಗಿದೆಯೆ?*

**ಶ್ರೀ ಅ :** ಭಗವಂತನೊಡನೆ ಪೂರ್ತಿಯಾಗಿ ಏಕತೆಯಲ್ಲಿರುವುದು ಕೊನೆಯ ಗುರಿ. ಮನುಷ್ಯ ಒಂದು ಬಗೆಯ ಏಕತೆಯಲ್ಲಿ ಸತತ ಉಳಿದುಕೊಂಡಿದ್ದರೆ ಅವನನ್ನು 'ಯೋಗಿ' ಎಂದು ಕರೆಯಬಹುದು, ಆದರೆ ಆ ಏಕತೆ ಸಂಪೂರ್ಣವಾಗುವಂತೆ ಮಾಡಬೇಕು. ಯೋಗಿಗಳಾದ ಕೆಲವರಿದ್ದಾರೆ, ಅವರಿಗೆ ಆಧ್ಯಾತ್ಮಿಕ ಸ್ತರದಲ್ಲಷ್ಟೇ ಏಕತೆಯಿರುತ್ತದೆ. ಇನ್ನು ಕೆಲವರಿಗೆ ಮನಸ್ಸು, ಹೃದಯಗಳಿರುವ ಸ್ತರದಲ್ಲಿ ಏಕತೆಯಿರುತ್ತದೆ. ಬೇರೆ ಕೆಲವರು ಪ್ರಾಣಿಕ ಸ್ತರದಲ್ಲಿಯೂ ಏಕತೆ ಪಡೆದಿರುತ್ತಾರೆ. ನಮ್ಮ ಯೋಗದ ಗುರಿ ಭೌತಿಕ ಪ್ರಜ್ಞೆ ಹಾಗೂ ಅತಿಮಾನಸ ಪ್ರಜ್ಞೆಗಳಲ್ಲೂ ಕೂಡ ಏಕತೆ ಪಡೆಯುವುದಾಗಿದೆ.

*

(13/312–13) ಮನುಷ್ಯನಲ್ಲಿ ದೇವನ ಬೆಳವಣಿಗೆಯಾಗುವುದು ಅವನಲ್ಲಿ ನಡೆಯಬೇಕಾದ ಯೋಗ್ಯ ವ್ಯವಹಾರವಾಗಿದೆ. ನಿಮ್ನತರ ಆಸುರೀ ಹಾಗೂ ರಾಕ್ಷಸೀ ಸ್ವಭಾವ ಏಕಪ್ರಕಾರವಾಗಿ ದೈವಿಕವಾಗುವತ್ತ ಹೊರಳುವುದು ಮನುಷ್ಯನ ಜೀವನದಲ್ಲಿ ಗುಪ್ತವಾಗಿರುವ ಅರ್ಥವಾಗಿದೆ. ಆ ಬೆಳವಣಿಗೆ ಹೆಚ್ಚುತ್ತ ಹೋದ ಹಾಗೆ ಪರದೆ ಕಳಚಿ ಬೀಳುತ್ತದೆ ಮತ್ತು ಆತ್ಮ ಅಸ್ತಿತ್ವದ ನಿಜವಾದ ಸತ್ಯವನ್ನು, ಕ್ರಿಯೆಯ ಶ್ರೇಷ್ಠತರ ಪ್ರಾಮುಖ್ಯತೆಯನ್ನು ಕಂಡುಕೊಳ್ಳುತ್ತದೆ. **– ಶ್ರೀ ಅರವಿಂದರು**

*

(16/427) ಭೌತಿಕ ಜಗತ್ತಿನಲ್ಲಿರುವ ವೇದನೆ ಮತ್ತು ದುಸ್ಥಿತಿಗಳು ಅವಚೇತನದ ನಿರಾಶಾವಾದಕ್ಕೆ ಕಾರಣವಾಗಿವೆ, ಇವು ಕೊನೆಗಾಣಬೇಕಾದರೆ ಭಗವಂತನೊಡನೆ ಇಡಿಯಾಗಿ ಏಕತೆಯಲ್ಲಿರುವುದು ಮತ್ತು ಅವನ ಪ್ರಕಟಣೆಯಾಗುವುದು ಮಾತ್ರ ಏಕೈಕ ಸಾಧನವಾಗಿದೆ. ಭಗವಂತನೊಡನಿರುವ ಪರಿಪೂರ್ಣ ಏಕತೆಯಲ್ಲಿ ಮಾತ್ರ ಪ್ರಜ್ಞೆ ಶಾಶ್ವತ ದಿವ್ಯಾನಂದದಲ್ಲಿ ಹೊರಹೊಮ್ಮಲು ಸಾಧ್ಯವಾಗುವುದು. ಈ ಪ್ರಜ್ಞಾಪೂರ್ಣ ಏಕತೆ ಪೃಥ್ವಿಯ ಮೇಲಿನ ಅಸ್ತಿತ್ವದ ನಿಜವಾದ ಗುರಿಯಾಗಿದೆ.

ಡಿಸೆಂಬರ 21, 1971 **– ಶ್ರೀಮಾತೆ**

*



## ಭಗವಂತನೊಡನೆ ನಾವು ಏಕತೆಯನ್ನು ಏಕೆ ಪಡೆದಿರಬೇಕು?

(9/7–8) ವಿಶ್ವವನ್ನು ದಿವ್ಯಾನಂದದಲ್ಲಿ, ದಿವ್ಯಾನಂದಕ್ಕಾಗಿ ಸೃಷ್ಟಿಸಲಾಯಿತು, ಆದರೆ ಸೃಷ್ಟಿಯಾದುದು ಸೃಷ್ಟಿಕರ್ತನೊಡನೆ ಪರಿಪೂರ್ಣ ಏಕತೆಯಲ್ಲಿದ್ದಾಗ ಮಾತ್ರ ಈ ದಿವ್ಯಾನಂದವು ಅಸ್ತಿತ್ವದಲ್ಲಿ ಉಳಿದುಕೊಳ್ಳಬಲ್ಲದು. ಸೃಷ್ಟಿಕರ್ತ ತನ್ನ ಸೃಷ್ಟಿಯ ಒಡೆತನಕ್ಕೆ ಈಡಾಗುವುದೇ ಈ ಏಕತೆ ಎಂದು ಶ್ರೀ ಅರವಿಂದರು ವರ್ಣಿಸಿದ್ದಾರೆ.*

ವಿಭಜನೆ ಪ್ರಾರಂಭವಾದಾಗಿನಿಂದ ಮತ್ತು ಸೃಷ್ಟಿ ಸೃಷ್ಟಿಕರ್ತನೊಡನೆ ನೇರವಾದ ಸಂಬಂಧ ಕಳೆದುಕೊಂಡಂದಿನಿಂದ ಅಜ್ಞಾನ ಆಳಿಕೆ ನಡೆಸುತ್ತ ಬಂದಿದೆ ಮತ್ತು ಅದರ ಪರಿಣಾಮ ಎಲ್ಲ ವೇದನೆಯಾಗಿದೆ.

ಮನುಷ್ಯ ದೈವೀ ಮೂಲದೊಂದಿಗೆ ಏಕತೆಯನ್ನು ಪುನಃ ಸ್ಥಾಪಿಸಿಕೊಂಡ ಕೂಡಲೆ ಎಲ್ಲ ವೇದನೆ ಮಾಯವಾಗುತ್ತದೆ ಎಂಬ ಅನುಭವ ಆಂತರಿಕ ಅನುಭವ ಪಡೆದ ಎಲ್ಲರಿಗೂ ಆಗಿದೆ. ಆದರೆ ಪಟ್ಟು ಹಿಡಿದು ಉಳಿದುಕೊಂಡು ಬಂದಿರುವ ಚಲನೆಯೊಂದಿದೆ, ಅದನ್ನು ಕುರಿತು ಕಳೆದ ವಾರ ನಾನು ಹೇಳಿದ್ದೆ. ಸೃಷ್ಟಿಯ ದಿವ್ಯಾನಂದ, ಸ್ವ–ಪ್ರಕಟಣೆ, ಸ್ವ–ಅಭಿವ್ಯಕ್ತಿ – ಇವನ್ನೆಲ್ಲ ದಿವ್ಯಾನಂದವೆಂದು ಪರಿಗಣಿಸದೆ ಆಸೆಯೆಂದು ಭಾವಿಸಿಕೊಂಡು ಬಂದ ಅನ್ವೇಷಕರ ಹಾಗೂ ಋಷಿಗಳ ಸಾಲೇ ಇದೆ. ಬೌದ್ಧ ಧರ್ಮದ ಇಡೀ ಮಾರ್ಗ ಈ ರೀತಿಯ–ದಾಗಿರುತ್ತದೆ. ಪ್ರಕಟಣೆಯ ಹಾಗೂ ಸಂಭೂತಿ (becoming)ಯ ಸಾರಭೂತ ದಿವ್ಯಾನಂದವನ್ನು ನಮಗೆ ಪುನಃ ತಂದುಕೊಡುವ ದೈವೀ ಏಕತೆಯಲ್ಲಿ ಪರಿಹಾರ ಇರುವುದನ್ನು ನೋಡುವುದರ ಬದಲಾಗಿ ಎಲ್ಲ ಆಸೆಯನ್ನು ತಿರಸ್ಕರಿಸುವುದರಲ್ಲಿ ಹಾಗೂ ನಿರ್ವಾಣಕ್ಕೆ ಮರಳಿ ಹೋಗುವುದರಲ್ಲಿ ತಮ್ಮ ಗುರಿ ಹಾಗೂ ಮಾರ್ಗ ಕಂಡುಕೊಳ್ಳುತ್ತಾರೆ.

---

* (16/382) ಮನುಷ್ಯನಲ್ಲಿ ಜಗತ್ತಿನ ಸ್ವಭಾವ ಪುನಃ ಸ್ವ–ಅರಿವುಳ್ಳದ್ದಾಗುತ್ತದೆ, ಅದರಿಂದಾಗಿ ಅದರ ಸಂತೋಷ ಪಡುವವನೆಡೆಗೆ ಶ್ರೇಷ್ಠತರ ನೆಗೆತ ಮಾಡುತ್ತದೆ, ಈ ಸಂತೋಷ ಪಡುವವನ ಮೇಲೆ ಅದು ತನಗರಿವಿಲ್ಲದೆಯೆ ಒಡೆತನ ಸಾಧಿಸುತ್ತದೆ. ಜೀವನ ಹಾಗೂ ಸಂವೇದನೆಗಳು ಅವನನ್ನು ನಿರಾಕರಿಸುತ್ತ ಅವನನ್ನೇ ಅರಸುತ್ತವೆ. ಜಗತ್ತಿನ ಸ್ವಭಾವ ಭಗವಂತನನ್ನು ಅರಿತಿರುವುದಿಲ್ಲ, ಏಕೆಂದರೆ ಅದು ತನ್ನನ್ನೇ ಅರಿತಿರುವುದಿಲ್ಲ. ಅದು ತನ್ನನ್ನೇ ಅರಿತುಕೊಂಡಾಗ ಸತ್ತೆಯ ಬೆರಕೆಯಿಲ್ಲದ ಶುದ್ಧ ದಿವ್ಯಾನಂದವನ್ನು ಅರಿತುಕೊಳ್ಳುತ್ತದೆ.

ಏಕತೆಯಲ್ಲಿ ಒಡೆತನ ಸಾಧಿಸುವುದು, ಒಡೆತನ ಕಳೆದುಕೊಳ್ಳದೆ ಇರುವುದು, ಇದೇ ರಹಸ್ಯವಾದ ವಿಷಯ. ದೇವ ಮತ್ತು ಮನುಷ್ಯ, ಜಗತ್ತು ಮತ್ತು ಜಗತ್ತಿನಾಚೆಗಿರುವುದು ಪರಸ್ಪರರನ್ನು ಅರಿತುಕೊಂಡಾಗ ಏಕವಾಗುವವು. ವೇದನೆಗೆ ಅಜ್ಞಾನ ಕಾರಣವಾಗಿರುವ ಹಾಗೆ, ವಿಭಜನೆ ಅಜ್ಞಾನಕ್ಕೆ ಕಾರಣವಾಗಿದೆ.

– **ಶ್ರೀ ಅರವಿಂದರು** (Thoughts and Glimpses)

ಈ ಕಲ್ಪನೆ ಸಾರಭೂತವಾಗಿ ತಪ್ಪು ಕಲ್ಪನೆ ಮಾಡಿಕೊಳ್ಳುವುದಕ್ಕೆ ಸಮನಾಗಿದೆ. ಸ್ವ-ವಿಮೋಚನೆಗಾಗಿ ಸಲಹೆ ನೀಡುವ ವಿಧಾನಗಳು ಅಭಿವೃದ್ಧಿಯ ವಿಧಾನ-ಗಳಾಗಿದ್ದು ಹೆಚ್ಚು ಉಪಯುಕ್ತವಾಗಬಲ್ಲವು, ಆದರೆ ಈ ಜಗತ್ತು ಸಾರದಲ್ಲಿ ಕೆಟ್ಟದಾಗಿದೆ, ಏಕೆಂದರೆ ಅದು ಆಸೆಯ ಪರಿಣಾಮ ಮತ್ತು ಯಾವುದೇ ಬೆಲೆ ತೆತ್ತಾದರೂ ಅದರಿಂದ ಸಾಧ್ಯವಿದ್ದಷ್ಟು ಬೇಗ ಪಾರಾಗಿ ಹೋಗಬೇಕು ಎಂಬ ಈ ಕಲ್ಪನೆ ಮಾನವತೆಯ ಇತಿಹಾಸದಲ್ಲಿ, ಅತ್ಯಂತ ಭವ್ಯ ಸ್ವರೂಪದಲ್ಲಿ ಹಾಗೂ ಗಂಭೀರವಾಗಿ ಎಲ್ಲ ಆಧ್ಯಾತ್ಮಿಕ ಜೀವನವನ್ನು ವಿರೂಪಗೊಳಿಸುವುದಾಗಿದೆ.

ಒಂದು ವಿಶಿಷ್ಟ ಕಾಲದಲ್ಲಿ ಅದು ಉಪಯುಕ್ತವಾಗಬಲ್ಲದಾಗಿತ್ತು, ಏಕೆಂದರೆ ಜಗತ್ತಿನ ಇತಿಹಾಸದಲ್ಲಿ ಎಲ್ಲವೂ ಉಪಯುಕ್ತವಾಗಿದೆ, ಆದರೆ ಅದರ ಉಪ-ಯುಕ್ತತೆಯ ಕಾಲ ಕಳೆದು ಹೋಗಿದೆ, ಈ ಕಲ್ಪನೆಯನ್ನು ಮೀರಿ ಹೋಗುವ ಕಾಲ ಬಂದಿದೆ, ಈ ಕಾಲದಲ್ಲಿ ನಾವು ಹೆಚ್ಚು ಸಾರಭೂತವಾದ ದೈವೀ ಸತ್ಯದತ್ತ, ಅಸ್ತಿತ್ವದ ದಿವ್ಯಾನಂದದತ್ತ, ಭಗವಂತನೊಡನೆ ಏಕತೆಯತ್ತ, ಅವನ ಪ್ರಕಟಣೆಯತ್ತ, ಮರಳಿ ಹೋಗಬೇಕು. ಈ ಹೊಸ ನೆಲೆ-ನಿರ್ದೇಶನ – ಪೃಥ್ವಿಯ ಮೇಲಿನ ಅದರ ಸಿದ್ಧಿ-ಯಲ್ಲಿ – ಮೊದಲಿನ ಎಲ್ಲ ಆಧ್ಯಾತ್ಮಿಕ ನೆಲೆ-ನಿರ್ದೇಶನಗಳ ಸ್ಥಾನದಲ್ಲಿ ಬರಬೇಕು ಮತ್ತು ಹೊಸದಾದ ಅತಿಮಾನಸ ಸಿದ್ಧಿಯತ್ತ ಮಾರ್ಗ ತೆರೆದಿರಸಬೇಕು. ಆ ಕಾರಣದಿಂದಾಗಿಯೆ ದಿವ್ಯಾನಂದ, ನಿಜವಾದ ದೈವೀ ದಿವ್ಯಾನಂದ ಮಾತ್ರ ದೈವೀ ವಿಜಯವನ್ನು ತಂದುಕೊಡಬಲ್ಲದು ಎಂದು ನಾನು ಕಳೆದ ವಾರ ಹೇಳಿದ್ದೆ.

ಸ್ವಾಭಾವಿಕವಾಗಿ ಈ ದಿವ್ಯಾನಂದ ಎಂದರೆ ಏನು ಎಂಬುದರ ಬಗ್ಗೆ ಗೊಂದಲವಿರಬಾರದು ಮತ್ತು ಆ ಕಾರಣದಿಂದಾಗಿಯೇ 'ಎಲ್ಲ ಸಾಮಾನ್ಯ ಸಂತೋಷಗಳಾಚೆ ಸಾಗಿ ಹೋದಾಗ ಮಾತ್ರ ಮನುಷ್ಯ ದೈವೀ ದಿವ್ಯಾನಂದದಲ್ಲಿ ಪ್ರವೇಶಿಸಬಹುದು' ಎಂದು ಹೇಳಿ ಶ್ರೀ ಅರವಿಂದರು ಪ್ರಾರಂಭದಿಂದ ನಮ್ಮನ್ನು ಎಚ್ಚರಿಸಿದ್ದಾರೆ. ನಿಖರವಾಗಿ ದಿವ್ಯಾನಂದದ ಪ್ರಕಟಣೆಯಿಂದ ಬರುವ ಸ್ಥಿತಿಯೇ ದೈವೀ ದಿವ್ಯಾನಂದ (Bliss). ಆದರೆ ಈ ದೈವೀ ದಿವ್ಯಾನಂದ ನಾವು ಸಂತೋಷ, ಹರ್ಷ ಎಂದು ಕರೆಯುವುದಕ್ಕೆ ವಿರುದ್ಧವಾದದ್ದು, ಇವುಗಳನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟಾಗ ಮಾತ್ರ ದಿವ್ಯಾನಂದದಲ್ಲಿ ಪ್ರವೇಶಿಸಬಹುದು. **– ಶ್ರೀಮಾತೆ**

*

(12/333) ಅತ್ಯುಚ್ಚವಾದುದರೊಂದಿಗೆ ನಿನ್ನ ಸತ್ತೆಯ ಎಲ್ಲ ರೀತಿಗಳಲ್ಲಿ ಏಕ-ವಾಗಿರುವುದು ಯೋಗ. ಯಾವುದು ಎಲ್ಲವೂ ಆಗಿರುವುದೋ ಅದರೊಂದಿಗೆ ನಿನ್ನ



ಸತ್ತೆಯು ಏಕವಾಗಿರುವುದು ಯೋಗ. ಮಾನವತೆಯಲ್ಲಿರುವ ದೇವನೊಂದಿಗೆ ನಿನ್ನ ಆತ್ಮದಲ್ಲಿ, ತಿಳಿವಳಿಕೆಯಲ್ಲಿ, ಹೃದಯದಲ್ಲಿ ಮತ್ತು ನಿನ್ನ ಎಲ್ಲ ಅಂಗಗಳೊಂದಿಗೆ ಏಕವಾಗಿರುವುದು ಯೋಗ. ಎಲ್ಲ ಪ್ರಕೃತಿಯೊಂದಿಗೆ, ಎಲ್ಲ ಸತ್ತೆಗಳೊಂದಿಗೆ ಏಕ-ವಾಗಿರುವುದು ಯೋಗ. ಇದೆಲ್ಲವೂ ಭಗವಂತನೊಡನೆ ಅವನ ವಿಶ್ವಾತೀತತೆಯಲ್ಲಿ, ವಿಶ್ವವ್ಯಾಪಕತೆಯಲ್ಲಿ ಮತ್ತು ತನ್ನೊಳಗೆ ಸೃಷ್ಟಿಸಿದುದೆಲ್ಲದರೊಡನೆ ಏಕವಾಗುವು-ದಾಗಿದೆ. ಏಕೆಂದರೆ ಎಲ್ಲವೂ ಅವನಿಂದ ಇದೆ ಮತ್ತು ಎಲ್ಲವೂ ಅವನಲ್ಲಿದೆ, ಅವನು ಎಲ್ಲದರಲ್ಲಿ ಎಲ್ಲವೂ ಆಗಿದ್ದಾನೆ ಮತ್ತು ಏಕೆಂದರೆ ಅವನು ನಿನ್ನ ಸ್ವಭಾವದಲ್ಲಿ ಲೀಲೆಯಲ್ಲಿರುವುದರಿಂದ ಮತ್ತು ಏಕೆಂದರೆ ಈ ಜಗತ್ತು ಅವನ ಸತ್ತೆಯ ಒಂದು ದೃಶ್ಯವಾಗಿರುವುದರಿಂದ, ಆ ದೃಶ್ಯದಲ್ಲಿ ಅವನು ನಿನ್ನ ರಹಸ್ಯ ಪ್ರೇಮಿ ಹಾಗೂ ಮಿತ್ರನಾಗಿರುವುದರಿಂದ ಮತ್ತು ಪ್ರಭು ಹಾಗೂ ಪೋಷಕನಾಗಿರುವುದರಿಂದ ಮತ್ತು ನೀನಿರುವುದೆಲ್ಲದರ ಗುರಿಯಾಗಿರುವುದರಿಂದ ಅವನೊಂದಿಗೆ ಏಕತೆ ಹೊಂದಿರು-ವುದು ನಿನ್ನ ಸತ್ತೆ ಪರಿಪೂರ್ಣವಾಗುವ ರೀತಿಯಾಗಿದೆ. **– ಶ್ರೀ ಅರವಿಂದರು**

*

## ಭಕ್ತನ ಧರ್ಮ ಯೋಗವಾಗುವುದು ಯಾವಾಗ?

(23/552) ಎಲ್ಲ ಧರ್ಮ ದೈವೀ ಸಾಮರ್ಥ್ಯವೊಂದರ ಕಲ್ಪನೆಯೊಂದಿಗೆ ಇಲ್ಲವೆ ನಮ್ಮ ಸತ್ತೆಗಳಿಗಿಂತ ಶ್ರೇಷ್ಠವಾದ, ಉಚ್ಚತರವಾದ ಸಾಮರ್ಥ್ಯದ ಕಲ್ಪನೆಯೊಂದಿಗೆ ಪ್ರಾರಂಭವಾಗುತ್ತದೆ, ಆ ಸಾಮರ್ಥ್ಯ ಕುರಿತು ಯೋಚನೆಯನ್ನು, ಪೂಜೆಯ ಕಾರ್ಯವನ್ನು ಮಾಡಲಾಗುತ್ತದೆ, ಅದರ ಸಂಕಲ್ಪಕ್ಕೆ, ನಿಯಮಗಳಿಗೆ ಇಲ್ಲವೆ ಬೇಡಿಕೆಗಳಿಗೆ ವಿಧೇಯತೆಯನ್ನು ಅರ್ಪಿಸಲಾಗುತ್ತದೆ. ಈ ರೀತಿ ಕಲ್ಪಿಸಿಕೊಂಡ, ಪೂಜಿಸಲಾದ ಹಾಗೂ ವಿಧೇಯತೆ ತೋರಿಸಲಾದ ದೈವೀ ಸಾಮರ್ಥ್ಯ ಹಾಗೂ ಪೂಜಿಸುವವನ ನಡುವೆ ಧರ್ಮ ಅಳತೆಗೆ ಸಿಗಲಾರದ ಕಂದರವನ್ನು ಇರಿಸುತ್ತದೆ. ಯೋಗ, ಅದರ ಪರಾಕಾಷ್ಠೆಯಲ್ಲಿ, ಈ ಕಂದರವನ್ನು ನಾಶಗೊಳಿಸುತ್ತದೆ, ಏಕೆಂದರೆ ಯೋಗ ಏಕತೆಯಾಗಿರುತ್ತದೆ.

*

(23/571–72) ಮಾನವ ಮನಸ್ಸನ್ನು ಹಾಗೂ ಆತ್ಮವನ್ನು (ಭಗವಂತನತ್ತ) ಹೊರಳಿಸುವುದೇ ಯೋಗ, ಅದಿನ್ನೂ ದೈವೀ ಸ್ಥಿತಿಯಲ್ಲಿರುವುದಿಲ್ಲ, ಆದರೆ ದೈವೀ ಪ್ರಚೋದನೆ ಹಾಗೂ ಆಕರ್ಷಣೆ ಅದರಲ್ಲಿರುತ್ತದೆ, ಆ ಹೊರಳುವಿಕೆ ಯಾವುದರಲ್ಲಿ

ತನ್ನ ಶ್ರೇಷ್ಠತರ ಸತ್ತೆಯನ್ನು ಕಂಡುಕೊಳ್ಳುವುದಿದೆಯೋ ಅದರತ್ತ ಇರುತ್ತದೆ. ಈ ಹೊರಳುವಿಕೆಯ ಮೊದಲ ರೂಪ ಭಾವನಾತ್ಮಕವಾಗಿ ಆರಾಧನಾ ಸ್ವರೂಪ–ದ್ದಾಗಿರಬೇಕು. ಸಾಮಾನ್ಯ ಧರ್ಮದಲ್ಲಿ ಈ ಆರಾಧನೆ ಬಾಹ್ಯ ಪೂಜೆಯ ರೂಪ–ದಲ್ಲಿರುತ್ತದೆ, ಮತ್ತು ಅದು ಅತ್ಯಂತ ಬಾಹ್ಯದಲ್ಲಿ ಕಂಡುಬರುವ ವೃತಾಚರಣೆಗಳಿಂದ ಕೂಡಿದ ಪೂಜೆಯಲ್ಲಿ ಅಭಿವೃದ್ಧಿ ಹೊಂದುತ್ತದೆ. ಸಾಮಾನ್ಯವಾಗಿ ಈ ಅಂಶ ಆವಶ್ಯಕವಾಗಿರುತ್ತದೆ, ಏಕೆಂದರೆ ಬಹಳಷ್ಟು ಜನರು ತಮ್ಮ ಭೌತಿಕ ಮನಸ್ಸುಗಳಲ್ಲಿ ಜೀವಿಸುತ್ತಾರೆ, ಭೌತಿಕ ಸಂಕೇತವೊಂದರ ಮೂಲಕವಲ್ಲದೆ ಅವರು ಏನನ್ನೂ ಸಿದ್ಧಿಸಿಕೊಳ್ಳಲಾರರು, ಭೌತಿಕ ಕ್ರಿಯೆಯ ಶಕ್ತಿಯ ಮೂಲಕವಲ್ಲದೆ ಬೇರೆ ಬಗೆಯ ಜೀವನವನ್ನು ನಡೆಸುತ್ತಿರುವುದು ಅವರ ಭಾವನೆಗೆ ಬರುವುದಿಲ್ಲ. ಇಲ್ಲಿ ನಾವು ಸಾಧನೆಯ ಪದ್ಧತಿಗೆ ತಾಂತ್ರಿಕ ವರ್ಗ ಶ್ರೇಣಿಯನ್ನು ಅನ್ವಯಿಸಬಹುದು. ಅದು ತನ್ನ ಶಿಸ್ತುಪಾಲನೆಯಲ್ಲಿ ಪಶುವಿನ, ಹಿಂಡಿನ ಇಲ್ಲವೆ ಭೌತಿಕ ಸತ್ತೆಯ ಮಾರ್ಗಕ್ಕೆ ಅನುವು ಮಾಡಿಕೊಡುತ್ತದೆ. ಅದು ಸಾಧನೆಗಿರುವ ಶಿಸ್ತುಪಾಲನೆಯಲ್ಲಿ ಅತ್ಯಂತ ಕೆಳಗಿನ ಹಂತದ್ದಾಗಿರುತ್ತದೆ. ಈ ಮಾರ್ಗದ ಕನಿಷ್ಠ ಮಟ್ಟದ ಮೊದಲ ಹೆಜ್ಜೆಯು ಕೇವಲ ಇಲ್ಲವೆ ಪ್ರಬಲತರವಾಗಿ ಕರ್ಮಾಚರಣೆಗಳಿಂದ ಕೂಡಿದ ಆರಾಧನೆಯಾಗಿರುತ್ತದೆ. ಯೋಗ ಧರ್ಮಕ್ಕಿಂತ ಹೆಚ್ಚಿನದಾದ ಏನೋ ಒಂದಾಗಿರುತ್ತದೆ, ನಿಜವಾದ ಧರ್ಮ ಬಹಳ ಬಾಹ್ಯದಲ್ಲಿರುವ ಈ ಪೂಜಾ ವಿಧಾನ ಮನಸ್ಸಿನೊಳಗೆ ನಿಜವಾಗಿ ಭಾವನೆ ತಂದುಕೊಂಡ ಏನೋ ಒಂದಕ್ಕೆ ಅನುರೂಪವಾದಾಗ, ಯಥಾರ್ಥ ಅಧೀನತೆ–ಗೊಳಗಾದಾಗ, ಭಯಮಿಶ್ರಿತ ಗೌರವ ಇಲ್ಲವೆ ಆಧ್ಯಾತ್ಮಿಕ ಅಭೀಪ್ಸೆಯಿದ್ದಾಗ ಮಾತ್ರ ನಿಜವಾಗಿ ಪ್ರಾರಂಭವಾಗುತ್ತದೆ, ಅಂತಹ ಅಭೀಪ್ಸೆಗೆ ಸಹಾಯಕವಾಗುತ್ತದೆ, ಬಾಹ್ಯ ಅಭಿವ್ಯಕ್ತಿಯಾಗುತ್ತದೆ ಹಾಗೆಯೇ, ಒಂದು ರೀತಿಯಲ್ಲಿ ಆಗಾಗ ಇಲ್ಲವೆ ಸತತವಾಗಿ ನೆನಪಿಗೆ ತಂದುಕೊಳ್ಳುವುದಕ್ಕೆ, ಸಾಮಾನ್ಯ ಜೀವನದಲ್ಲಿ ಮಗ್ನವಾಗಿರುವಿಕೆಗಳಿಂದ ಅದರತ್ತ ಹಿಂದೆಗೆದುಕೊಳ್ಳುವುದಕ್ಕೆ ಕೂಡ ಸಹಾಯಕವಾಗುತ್ತದೆ. ಆದರೆ ಅದು ದೇವನೊಬ್ಬನಿಗೆ ಸ್ವಾಮಿನಿಷ್ಠೆಯನ್ನು ಇಲ್ಲವೆ ಗೌರವವನ್ನು ತೋರಿಸುತ್ತಿರುವವರೆಗೆ ಕೇವಲ ಒಂದು ವಿಚಾರವಾಗಿರುತ್ತದೆ, ಯೋಗವಾಗಿರುವುದಿಲ್ಲ. ಯೋಗದ ಗುರಿ ಏಕತೆ ಪಡೆಯುವುದಾಗಿರುವುದರಿಂದ ಅದರ ಪ್ರಾರಂಭ ಭಗವಂತನನ್ನು ಅರಸು–ವುದರಿಂದ, ಒಂದು ಬಗೆಯ ಸ್ಪರ್ಶ ಪಡೆಯುವ, ಹತ್ತಿರವಾಗುವ, ವಶಪಡಿಸಿ–ಕೊಳ್ಳುವ ಹಂಬಲದಿಂದ ಆಗಬೇಕು. ಇದು ನಮಗೆ ಎದುರಾದಾಗ, ಆರಾಧನೆ ಯಾವಾಗಲೂ, ಪ್ರಾಥಮಿಕವಾಗಿ, ಆಂತರಿಕ ಪೂಜೆಯಾಗಿರುತ್ತದೆ, ನಮ್ಮನ್ನು ಭಗವಂತನಿಗಾಗಿರುವ ಒಂದು ದೇವಾಲಯವನ್ನಾಗಿ, ನಮ್ಮ ಆಲೋಚನೆಗಳನ್ನು,



ಭಾವನೆಗಳನ್ನು ಸತತ ಅಭೀಪ್ಸೆ ಪಡುತ್ತಿರುವ, ಅರಸುತ್ತಿರುವ ಪ್ರಾರ್ಥನೆಯನ್ನಾಗಿ, ನಮ್ಮ ಇಡೀ ಜೀವನವನ್ನು ಬಾಹ್ಯ ಸೇವೆ ಹಾಗೂ ಪೂಜೆಯನ್ನಾಗಿ ಮಾಡಲು ಪ್ರಾರಂಭಿಸುತ್ತೇವೆ. ಈ ಬದಲಾವಣೆ, ಆತ್ಮದ ಈ ಪ್ರವೃತ್ತಿ ಬೆಳೆಯುತ್ತಿದ್ದ ಹಾಗೆ ಭಕ್ತನ ಧರ್ಮ ಒಂದು ಯೋಗವಾಗುತ್ತದೆ, ಭಗವಂತನೊಡನೆ ಸಂಪರ್ಕ ಹಾಗೂ ಏಕತೆ ಬೆಳೆಯುತ್ತದೆ. ಇದರರ್ಥ ಬಾಹ್ಯ ಪೂಜೆಯನ್ನು ಅವಶ್ಯವಾಗಿ ಬಿಟ್ಟುಕೊಡ–ಬೇಕಾಗುತ್ತದೆ ಎಂದಾಗುವುದಿಲ್ಲ, ಆದರೆ ಅದು ಹೆಚ್ಚು ಹೆಚ್ಚಾಗಿ ಕೇವಲ ಭೌತಿಕ ಅಭಿವ್ಯಕ್ತಿ ಇಲ್ಲವೆ ಆಂತರಿಕ ಭಕ್ತಿ ಹಾಗೂ ಆರಾಧನೆ ಇವು ಬಾಹ್ಯದಲ್ಲಿ ಹೊರ–ಹರಿಯುವಿಕೆ ಇಲ್ಲವೆ ಮಾತಿನಲ್ಲಿ ಹಾಗೂ ಸಾಂಕೇತಿಕ ಕ್ರಿಯೆಯಲ್ಲಿ ತೊಡಗಿ–ಕೊಳ್ಳುವುದಕ್ಕೆ ಆತ್ಮ ಚೆಲ್ಲಿಕೊಡುವ ತರಂಗವಾಗುವಿಕೆ ಇವುಗಳ ರೂಪ ತಾಳುತ್ತದೆ.

*

(23/546/47) ತತ್ವಜ್ಞಾನ ಇಲ್ಲವೆ ಪ್ರಚಲಿತ ಧರ್ಮವಿದ್ದ ಹಾಗೆ ಯೋಗ ಒಂದು ಸಿದ್ಧಾಂತದ ಇಲ್ಲವೆ ಮತತತ್ವದ ವಿಷಯವಲ್ಲ, ಆದರೆ ಅದು ಅನುಭವದ ವಿಷಯವಾಗಿದೆ. ಯೋಗದ ಅನುಭವ ಪ್ರಜ್ಞಾಪೂರ್ಣ, ವಿಶ್ವಂಭರ ದೈವೀ ಶಕ್ತಿಯೊಂದಿಗೆ ಆಗುವ ಏಕತೆಯನ್ನು ಕುರಿತಾದದ್ದು, ದೈವೀ ಅಗೋಚರನಾದವ–ನೊಂದಿಗೆ ಇರುವ ಈ ಏಕತೆಯ ಅನುಭವವನ್ನು ಯಾವಾಗಲೂ ನವೀಕರಿಸ–ಬಹುದು, ಪ್ರಮಾಣಗಳಿಂದ ಸತ್ಯವೆಂದು ದೃಢೀಕರಿಸಬಹುದು. ಈ ಅನುಭವ ಭೌತಿಕ ಜಗತ್ತು ಹಾಗೂ ಗೋಚರ ವಸ್ತುಗಳು, ನಾವು ಸಂಪರ್ಕದಲ್ಲಿರುವ ಅವುಗಳ ಮನಸ್ಸುಗಳು ಇವುಗಳನ್ನು ಕುರಿತಾದ ಅನುಭವದಷ್ಟೇ ಸಮಂಜಸವಾದದ್ದು, ಯೋಗವು ಪ್ರಜ್ಞಾಪೂರ್ಣ ಏಕತೆಯ ಮೂಲಕ ಪ್ರಾರಂಭವಾಗುತ್ತದೆ, ಪ್ರಜ್ಞಾ–ಪೂರ್ಣ ಮಾನವ ಸತ್ತೆ ಅದರ ಉಪಕರಣವಾಗಿರುತ್ತದೆ. **– ಶ್ರೀ ಅರವಿಂದರು**

*

## ಯೋಗದ ಗುರಿ : ಏಕತೆ

ಯೋಗವೆಂದರೆ ಏಕತೆ, ಯೋಗದ ಇಡೀ ಉದ್ದೇಶ ಮಾನವ ಆತ್ಮ ಪರಮೋಚ್ಚ ದೈವೀ ಸತ್ತೆಯೊಂದಿಗೆ ಮತ್ತು ಸದ್ಯದ ಮಾನವತೆಯ ಸ್ವಭಾವ ಪರಮೋಚ್ಚ ದೈವೀ ಪ್ರಕೃತಿಯೊಂದಿಗೆ ಏಕತೆ ಪಡೆಯುವುದಾಗಿದೆ.

*

ಎಲ್ಲ ಯೋಗದ ಗುರಿ, ಪ್ರಜ್ಞೆಯಲ್ಲಿ ಬದಲಾವಣೆ ತಂದುಕೊಳ್ಳುವುದರ ಮೂಲಕ, ದೈವೀ ನೈಜತೆಯಲ್ಲಿ ಸಾಗಿ ಹೋಗುವುದಾಗಿದೆ, ಆ ನೈಜತೆ ವಸ್ತು–

ವಿಷಯಗಳ ಹಿಂದಿದೆ ಮತ್ತು ಇನ್ನು ಮುಂದೆ ಅವುಗಳ ತೋರಿಕೆಗಳಲ್ಲಿ ಜೀವಿಸುವುದಿಲ್ಲ. ಯಾವುದೇ ಬಗೆಯ ಏಕತೆಯಲ್ಲಿ, ಸಂಸರ್ಗದಲ್ಲಿ ಇಲ್ಲವೆ ಪಾಲುಗೊಳ್ಳುವಿಕೆಯಲ್ಲಿ ಪ್ರವೇಶಿಸುವುದು ಎಲ್ಲ ಯೋಗದ ಸಾಮಾನ್ಯ ಗುರಿಯಾಗಿದೆ.

*

ಏಕೈಕ ಸನಾತನ ಹಾಗೂ ಅನಂತನಾದ, ಅತ್ಯುಚ್ಚನಾದ, ದಿವ್ಯಾತ್ಮನಾದ ಭಗವಂತ, ಅವನನ್ನು ಬೇರೆ ಯಾವುದೇ ಹೆಸರಿನಿಂದ ಕರೆಯಲಿ, ಇಲ್ಲವೆ ಅವನ ಯಾವುದೇ ಮುಖಕ್ಕೆ ನಾವು ಪ್ರಾಧಾನ್ಯ ನೀಡಿರಲಿ ಅವನೊಡನೆ ಏಕತೆ ಪಡೆಯಲು ಎಲ್ಲ ಯೋಗವು ಹೆಣಗುತ್ತದೆ.

ಏಕತೆಯ ಅರ್ಥ, ಮೊದಲಿಗೆ, ಭಗವಂತನೊಡನೆ ಸತತ ಸಂಪರ್ಕ ಮತ್ತು ಅವನ ಬಗ್ಗೆ ಹೆಚ್ಚುತ್ತಿರುವ ಪ್ರಜ್ಞೆ ಹೊಂದಿರುವುದಾಗಿದೆ, ನಂತರ ಅದನ್ನು ನಾವು ಅರಗಿಸಿಕೊಳ್ಳಬೇಕು ಇಲ್ಲವೆ ನಮ್ಮನ್ನೇ ಅದು ಅರಗಿಸಿಕೊಳ್ಳುವಂತಾಗಬೇಕು, ನಂತರ ಅದರ ಹಾಗೆ ಆಗುವುದು, ಅದನ್ನು ತುಂಬಿಕೊಳ್ಳುವುದು ಇದೆ, ಅಷ್ಟನ್ನೇ ಮಾಡುವುದಿರುವುದಿಲ್ಲ, ಆದರೆ ಅದರಲ್ಲಿ ಪ್ರವೇಶಿಸಬೇಕು ಮತ್ತು ನೆಲೆಸಬೇಕು, ಆ ದೈವೀ ಪ್ರಜ್ಞೆ ಹಾಗೂ ಸತ್ತೆಯಾಗಬೇಕು, ಅದರ ಸಾರದ ಸಾರವಾಗಬೇಕು ಮತ್ತು ನಾವು ಯಾವ ದೈವೀ ಮೂಲದೊಂದಿಗೆ ಬಂದಿರುವೆವೋ ಅದರಿಂದ ಪ್ರತ್ಯೇಕಗೊಳಿಸುವುದೆಲ್ಲವನ್ನು ತೊಡೆದುಹಾಕಬೇಕು.

*

ಯೋಗದ ಉದ್ದೇಶ ಸನಾತನನೊಂದಿಗೆ ಏಕವಾಗುವುದಾಗಿದೆ, ಬೇರೆ ಯಾವ ಉದ್ದೇಶವೂ ಇಲ್ಲ, ಏಕೆಂದರೆ ಇತರ ಎಲ್ಲ ಉದ್ದೇಶಗಳು ಈ ಒಂದು ದೈವೀ ಪರಿಪೂರ್ಣತೆಯಲ್ಲಿ ಒಳಗೊಂಡಿವೆ.

ಸನಾತನನೊಂದಿಗೆ ಏಕವಾಗುವುದೆಂದರೆ ಅವನ ಸತ್ತೆಯಲ್ಲಿ, ಪ್ರಜ್ಞೆಯಲ್ಲಿ, ಸಾಮರ್ಥ್ಯದಲ್ಲಿ ಮತ್ತು ದಿವ್ಯಾನಂದದಲ್ಲಿ ಏಕವಾಗುವುದಾಗಿದೆ. ಅದೆಲ್ಲವನ್ನೂ ಅವನ ಬಗೆಗಿನ ನಾಲ್ಕು ಶಬ್ದಗಳಲ್ಲಿ ಹೇಳಲಾಗಿದೆ, ಏಕೆಂದರೆ ಉಳಿದದ್ದೆಲ್ಲವೂ ಅವುಗಳ ಕಾರ್ಯಗತಿಯಾಗಿದೆ.

ಸನಾತನನೊಂದಿಗೆ ಏಕವಾಗುವುದೆಂದರೆ ಅವನಲ್ಲಿ, ಅವನ ಸಾನ್ನಿಧ್ಯದಲ್ಲಿ ಮತ್ತು ಅವನ ಅನಂತ ಸ್ವಭಾವದೊಂದಿಗೆ ಜೀವಿಸುವುದಾಗಿದೆ: ಸಾಯುಜ್ಯ, ಸಾಲೋಕ್ಯ, ಸಾಮೀಪ್ಯ, ಸಾದೃಶ್ಯ. ಈ ನಾಲ್ಕು ಒಟ್ಟಿಗೆ ಒಂದು ಬಗೆಯಲ್ಲಿರುವ ಸತ್ತೆ ಮತ್ತು ಒಂದು ಬಗೆಯ ಪರಿಪೂರ್ಣತೆ.



ಸನಾತನನಲ್ಲಿ ಜೀವಿಸುವುದೆಂದರೆ ನಮ್ಮೊಳಗಿರುವ ಸನಾತನನೊಂದಿಗೆ ಜೀವಿಸುವುದಾಗಿದೆ: ಯಾರು ತನ್ನ ಸತ್ತೆಯಲ್ಲಿ ಪ್ರಜ್ಞಾಪೂರ್ವಕವಾಗಿ ಜೀವಿಸುತ್ತಾರೋ ಅವನ ಪ್ರಜ್ಞಾಪೂರ್ವಕ ಸಾನ್ನಿಧ್ಯ ಅಲ್ಲಿ ವಾಸಿಸುತ್ತದೆ. ನಾವು ಭಗವಂತನಲ್ಲಿ ಜೀವಿಸಿದಾಗ, ಚಲಿಸಿದಾಗ ಮತ್ತು ಅವನಲ್ಲಿ ಕ್ರಿಯೆ ಕೈಕೊಂಡಾಗ, ಅವನು ನಮ್ಮಲ್ಲಿ ಜೀವಿಸುತ್ತಾನೆ, ಚಲಿಸುತ್ತಾನೆ ಮತ್ತು ಕಾರ್ಯ ಕೈಕೊಳ್ಳುತ್ತಾನೆ.

*

ನಮ್ಮ ಸತ್ತೆಯ ಹಾಗೂ ಎಲ್ಲ ಸತ್ತೆಯ ದೈವೀ ನೈಜತೆಯೊಂದಿಗೆ ಏಕತೆ ಯೋಗದ ಒಂದು ಸಾರಭೂತ ಉದ್ದೇಶವಾಗಿದೆ, ನೆನಪಿನಲ್ಲಿಟ್ಟುಕೊಳ್ಳಬೇಕಾದ ವಿಷಯ ಇದು: ನಮ್ಮ ಯೋಗವಿರುವುದು ಅತಿಮನಸ್ಸನ್ನು ದೊರಕಿಸುವುದಕ್ಕಾಗಿ ಅಲ್ಲ, ಆದರೆ ಅದನ್ನು ಭಗವಂತನಿಗಾಗಿ ಕೈಕೊಳ್ಳಬೇಕಾಗಿದೆ. ನಾವು ಅತಿಮನಸ್ಸನ್ನು ಅರಸುತ್ತಿರುವುದು ಅದನ್ನು ದೊರಕಿಸುವ ಸಂತೋಷಕ್ಕಾಗಿ, ಶ್ರೇಷ್ಠತೆಗಾಗಿ ಅಲ್ಲ, ಆದರೆ ಭಗವಂತನೊಡನಿರುವ ಏಕತೆಯನ್ನು ಪರಿಪೂರ್ಣ ಹಾಗೂ ಸಂಪೂರ್ಣಗೊಳಿಸುವುದಕ್ಕಾಗಿ, ಅದರ ಭಾವನೆ ತಂದುಕೊಳ್ಳುವುದಕ್ಕಾಗಿ, ಅದನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತು ನಮ್ಮ ಸ್ವಭಾವದ ಪ್ರತಿಯೊಂದು ವ್ಯಾಪ್ತಿ, ಹೊರಳುವಿಕೆ, ಮೂಲೆ, ಗೂಡುಗಳಲ್ಲಿ ಅದನ್ನು ಸಾಧ್ಯವಿರುವ ಎಲ್ಲ ರೀತಿಗಳಲ್ಲಿ ಕ್ರಿಯಾಶೀಲವನ್ನಾಗಿ ಮಾಡುವುದಕ್ಕಾಗಿದೆ. ಅತಿಮಾನಸ ಯೋಗದ ಉದ್ದೇಶ ಅತಿಮಾನುಷತ್ವ (super manhood)ದ ಬಲವತ್ತರವಾದ ಪ್ರಾಮುಖ್ಯತೆಯನ್ನು, ದೈವೀ ಸಾಮರ್ಥ್ಯ ಹಾಗೂ ಶ್ರೇಷ್ಠತೆಯನ್ನು, ಭವ್ಯವಾಗಿರಿಸಿದ ವ್ಯಕ್ತಿವಿಶಿಷ್ಟತೆಯ ಸ್ವ–ನೆರವೇರಿಕೆಯನ್ನು ಪಡೆಯುವತ್ತ ಸಾಗುವುದಕ್ಕಾಗಿ ಇದೆ ಎಂದು ಯೋಚಿಸುವ ಪ್ರವೃತ್ತಿಯಿರುವ ಬಹಳ ಜನರಿರುತ್ತಾರೆ, ಆದರೆ ಆ ರೀತಿ ಯೋಚಿಸುವುದು ತಪ್ಪು. ಇದು ಮಿಥ್ಯೆಯಿಂದ ಕೂಡಿದ ವಿನಾಶಕಾರಕ ಕಲ್ಪನೆ – ವಿನಾಶಕಾರಕ ಏಕೆಂದರೆ ಅದು ನಮ್ಮಲ್ಲಿ ರಾಜಸಿಕ ಪ್ರಾಣಿಕ ಮನಸ್ಸಿನಲ್ಲಿ ಅಭಿಮಾನ, ಗರ್ವ ಮತ್ತು ಮಹತ್ವಾಕಾಂಕ್ಷೆ ಇವುಗಳನ್ನು ಮೇಲಕ್ಕೆತ್ತಿ ಹಿಡಿಯಬಹುದು, ಅದನ್ನು ದಾಟಿಕೊಂಡು ಹೋಗಲಾಗದಿದ್ದರೆ, ಅದರ ಮೇಲೆ ಜಯ ಸಾಧಿಸದಿದ್ದರೆ ಅದು ಆಧ್ಯಾತ್ಮಿಕ ಪತನದತ್ತ ಕೊಂಡೊಯ್ಯುತ್ತದೆ, ಮಿಥ್ಯೆಯಾದದ್ದು ಏಕೆಂದರೆ ಅದು ಅಹಂಕಾರದಿಂದ ತುಂಬಿಕೊಂಡ ಕಲ್ಪನೆ ಮತ್ತು ಅತಿಮಾನಸ ಬದಲಾವಣೆಯ ಮೊದಲ ಷರತ್ತೆಂದರೆ ಅಹಂಕಾರವನ್ನು ತೊಡೆದು ಹಾಕುವುದಾಗಿರುತ್ತದೆ. ಅದು ಮನುಷ್ಯನ ಸಂಕಲ್ಪದಿಂದ, ಕರ್ಮಗಳಿಂದ ಕೂಡಿದ ಚಟುವಟಿಕೆಯ ಹಾಗೂ ಕ್ರಿಯಾಶೀಲ ಸ್ವಭಾವಕ್ಕೆ ಬಹಳ ಅಪಾಯಕಾರಿಯಾದದ್ದು, ಸಾಮರ್ಥ್ಯವನ್ನು ಬೆಂಬತ್ತುವ ಅದನ್ನು ಮಾರ್ಗದಿಂದ ಬೇರೆಡೆ ಬಹಳ ಸುಲಭವಾಗಿ ಕೊಂಡೊಯ್ಯಬಹುದು. ಅತಿಮಾನಸ ಬದಲಾವಣೆಯಿಂದ ಸಾಮರ್ಥ್ಯ ಅನಿವಾರ್ಯವೆಂಬಂತೆ ಬರುತ್ತದೆ, ಪರಿಪೂರ್ಣ ಕ್ರಿಯೆಗಾಗಿ ಅದಿರುವುದು ಅತ್ಯ–

ವಶ್ಯವಾದ ಸ್ಥಿತಿ, ಜೀವನದ ಸ್ವಭಾವವನ್ನು ಕೈಗೆತ್ತಿಕೊಳ್ಳಲು ಅದು ಬರುತ್ತದೆ, ಅದು ಆಧ್ಯಾತ್ಮಿಕ ವ್ಯಕ್ತಿಯ ಮೂಲಕ ಕಾರ್ಯಮಾಡುವ ಏಕೈಕನಾದವನ ದೈವೀಶಕ್ತಿ. ಅದು ವೈಯಕ್ತಿಕ ಶಕ್ತಿಯ ಹೆಚ್ಚಳವಲ್ಲ, ಪ್ರತ್ಯೇಕಗೊಳಿಸುವ ಮಾನಸಿಕ ಹಾಗೂ ಪ್ರಾಣಿಕ ಅಹಂಕಾರ ನೆರವೇರಿಕೆ ಕಂಡುಕೊಳ್ಳುವ ಕೊನೆಯ ಕಿರೀಟಪ್ರಾಯ ಸ್ಥಿತಿಯಲ್ಲ. ಸ್ವ-ನೆರವೇರಿಕೆ ಯೋಗದ ಪರಿಣಾಮವೆಂದು ಬರುತ್ತದೆ, ಆದರೆ ಅದರ ಗುರಿ ವ್ಯಕ್ತಿ ಶ್ರೇಷ್ಠತೆ ಪಡೆಯುವುದಾಗಿರುವುದಿಲ್ಲ. ಏಕೈಕ ಗುರಿಯೆಂದರೆ ಆಧ್ಯಾತ್ಮಿಕ ಪರಿಪೂರ್ಣತೆ, ನಿಜವಾದ ಆತ್ಮವನ್ನು ಕಂಡುಕೊಳ್ಳುವಿಕೆ ಮತ್ತು ಭಗವಂತನ ಪ್ರಜ್ಞೆ ಹಾಗೂ ಸ್ವಭಾವಗಳನ್ನು ಧಾರಣಮಾಡಿ ಅವನೊಡನೆ ಏಕತೆ ಪಡೆಯುವಿಕೆ ಇವುಗಳನ್ನು ಸಾಧಿಸುವುದಾಗಿರುತ್ತದೆ. ಅಹಂಕಾರದಿಂದ ಕೂಡಿದ ಪ್ರಚೋದನೆಗಳು, ಮಹತ್ವಾಕಾಂಕ್ಷೆ, ಸಾಮರ್ಥ್ಯ ಹಾಗೂ ಶ್ರೇಷ್ಠತೆಗಳನ್ನು ಪಡೆಯುವ ಆಸೆ, ಸ್ವ-ದೃಢೀಕರಣದ ಉದ್ದೇಶಗಳು ಇವೆಲ್ಲ ಈ ಶ್ರೇಷ್ಠತರ ಪ್ರಜ್ಞೆಗೆ ಪರಕೀಯವಾದವುಗಳು, ಅತಿಮಾನಸ ಬದಲಾವಣೆಯನ್ನು ದೂರದಿಂದಾಗಲಿ ಸಮೀಪಿಸುವ ಯಾವುದೇ ಬಗೆಯ ಸಾಧ್ಯತೆಗೆ ದಾಟಲಾಗದ ಅಡೆತಡೆಗಳಾಗಿರುತ್ತವೆ. ಮನುಷ್ಯ ತನ್ನ ಶ್ರೇಷ್ಠತರ ಆತ್ಮವನ್ನು ಕಂಡುಕೊಳ್ಳುವುದಕ್ಕಾಗಿ ನಿಮ್ನತರ ಆತ್ಮವನ್ನು ಕಳೆದುಕೊಳ್ಳಬೇಕು. ಭಗವಂತನೊಡನೆ ಏಕತೆ ಪ್ರಮುಖ ಉದ್ದೇಶವಾಗಿರಬೇಕು, ಮನುಷ್ಯ ತನ್ನದೇ ಸತ್ತೆಯ ಹಾಗೂ ಎಲ್ಲ ಸತ್ತೆಯ ಸತ್ಯವನ್ನು ಶೋಧಿಸಬೇಕು. ಆ ಸತ್ಯದಲ್ಲಿರುವ ಜೀವನ, ಅದರ ಶ್ರೇಷ್ಠತರ ಪ್ರಜ್ಞೆ, ಸ್ವಭಾವದ ಪರಿಪೂರ್ಣತೆ ಇವೆಲ್ಲ ಆ ಚಲನೆಯ ಪರಿಣಾಮಗಳು. ಅದರ ಇಡೀ ಪರಕಾಷ್ಠೆಗೆ ಅತ್ಯಗತ್ಯ ನಿಬಂಧನೆಗಳೆಂದಾಗಿ ಅವು ಪ್ರಮುಖ ಗುರಿಯ ಭಾಗಗಳಾಗಿರುತ್ತವೆ, ಕಾರಣವೇನೆಂದರೆ ಅವು ಅಭಿವೃದ್ಧಿಗೆ ಅವಶ್ಯವಾದವುಗಳು ಮತ್ತು ಪ್ರಧಾನ ಪರಿಣಾಮಗಳನ್ನು ಹೊಂದಿರುವಂತಹವು ಆಗಿರುತ್ತವೆ.

ಅತಿಮಾನಸ ಬದಲಾವಣೆ ಕಠಿಣವಾದದ್ದು, ದೂರದಲ್ಲಿರುವಂತಹದು ಕೊನೆಯ ಹಂತದ್ದು ಎಂಬುದನ್ನು ಕೂಡ ಲಕ್ಷ್ಯದಲ್ಲಿಟ್ಟುಕೊಂಡಿರಬೇಕು, ಅದನ್ನು ಅತಿದೂರದಲ್ಲಿರುವ ನೀಳನೋಟದ ಕೊನೆಯೆಂದು ಪರಿಗಣಿಸಬೇಕು, ಅದನ್ನು ಮೊದಲ ಗುರಿಯೆಂದು ಅದರತ್ತ ಹೊರಳಬಾರದು, ಅದನ್ನು ಹಾಗೆ ಮಾಡಲಾಗದು, ಸತತ ಕಲ್ಪನೆಮಾಡಿಕೊಳ್ಳಬಹುದಾದ ಗುರಿ ಇಲ್ಲವೆ ಕೂಡಲೆ ದೊರಕಿಸಬಹುದಾದ ಉದ್ದಿಷ್ಟ ಗುರಿ ಎಂದು ಅದನ್ನು ಪರಿಗಣಿಸಬಾರದು.

(Essays Divine and Human : 12/334-35; 331-32; 332-33; 280-81)

– ಶ್ರೀ ಅರವಿಂದರು

*



## ವೇದಾಂತದ ಪರಮೋಚ್ಚ ಜ್ಞಾನ: "ನಾನು ಅವನಾಗಿ (ಭಗವಂತನಾಗಿ)ದ್ದೇನೆ"

ಯೋಗವು ಸತ್ಯ ಕುರಿತು ಕೇವಲ ಬೌದ್ಧಿಕ ಕಲ್ಪನೆ, ಸ್ಪಷ್ಟ ವಿವೇಚನೆ ಅಥವಾ ನಮ್ಮ ಸತ್ತೆಯ ರೀತಿಗಳ ಜ್ಞಾನೋದಯ ಪಡೆದ, ಮನಶ್ಶಾಸ್ತ್ರೀಯ ಅನುಭವ ಇವುಗಳನ್ನಷ್ಟೇ ಎದುರಿಸುವುದಿಲ್ಲ. ಅದು ಸಿದ್ಧಿಯನ್ನು, ಆ ಶಬ್ದದ ಪೂರ್ಣ ಅರ್ಥದಲ್ಲಿ ಗಮನದಲ್ಲಿರಿಸಿಕೊಂಡಿರುತ್ತದೆ. ಅದು ದಿವ್ಯಾತ್ಮವನ್ನು, ವಿಶ್ವಾತೀತ ಹಾಗೂ ವಿಶ್ವಂಭರ ಭಗವಂತನನ್ನು ನಮ್ಮ ಸಲುವಾಗಿ ನಮ್ಮಲ್ಲಿ ನೈಜವಾಗಿರುವಂತೆ ಮಾಡುವುದಾಗಿರುತ್ತದೆ. ಅನಂತರ ದಿವ್ಯಾತ್ಮನ ಪ್ರಕಾಶದಲ್ಲಿ, ಹಾಗೂ ಅವನ ಸಂಭೂತಿಯ ನಿರಂತರ ಚಲನೆಯಲ್ಲಿ ಜಗತ್ತಿನಲ್ಲಿಯ ನಮ್ಮ ಅಸ್ತಿತ್ವದ ಮನಶ್ಶಾಸ್ತ್ರೀಯ ಹಾಗೂ ಭೌತಿಕ ಪರಿಸ್ಥಿತಿಗಳಡಿಯಲ್ಲಿ ಮಾತ್ರ ಆ ರೀತಿಗಳನ್ನು ನೋಡಬಹುದಾಗಿದೆ, ಇನ್ನಿತರ ರೀತಿಗಳಲ್ಲಿ ನೋಡುವುದು ಸಾಧ್ಯವಾಗುವುದಿಲ್ಲ. ಈ ಸಿದ್ಧಿಗೆ ಆಂತರಿಕ ದರ್ಶನ, ಸಂಪೂರ್ಣ ಆಂತರಿಕ ಅನುಭವ ಮತ್ತು ತಾದಾತ್ಮ್ಯ ಎಂಬ ಒಂದರ ನಂತರ ಒಂದರಂತೆ ಬರುವ ಮೂರು ಚಲನೆಗಳಿವೆ.

ಈ ಎಲ್ಲ ಜ್ಞಾನ ಮತ್ತು ಅನುಭವ ತಾದಾತ್ಮ್ಯವನ್ನು ತಲುಪಿಸುವ ಮತ್ತು ವಶಪಡಿಸಿಕೊಳ್ಳುವ ಪ್ರಾಥಮಿಕ ಸಾಧನಗಳು. ನಾವು ನಮ್ಮದೇ ಆತ್ಮವನ್ನು ನೋಡುತ್ತೇವೆ ಮತ್ತು ಅದರ ಅನುಭವ ಪಡೆಯುತ್ತೇವೆ. ಆದ್ದರಿಂದ ನಮ್ಮ ದರ್ಶನ ಮತ್ತು ಅನುಭವ ತಾದಾತ್ಮ್ಯದಲ್ಲಿ ಪರಾಕಾಷ್ಠೆ ಪಡೆಯದಿದ್ದರೆ, ನಮ್ಮ ಎಲ್ಲ ಸತ್ತೆಯಲ್ಲಿ "ನಾನು ಅವನಾಗಿ (ಭಗವಂತನಾಗಿ)ದ್ದೇನೆ" ಎಂಬ ಪರಮೋಚ್ಚ ವೇದಾಂತದ ಜ್ಞಾನದಿಂದ ಜೀವಿಸದಿದ್ದರೆ ಆ ದರ್ಶನ ಮತ್ತು ಅನುಭವ ಅಪರಿಪೂರ್ಣವಾಗುತ್ತವೆ. ನಾವು ಭಗವಂತನನ್ನು ನೋಡುವುದನ್ನು ಮತ್ತು ಅಪ್ಪಿಕೊಳ್ಳುವುದನ್ನು ಮಾಡುವುದಷ್ಟೇ ಅಲ್ಲದೆ ಅವನ ಆ ನೈಜತೆಯಾಗಬೇಕು. ಮನೋದಾರ್ಢ್ಯ, ಉದಾತ್ತೀಕರಣ ಇವುಗಳ ಮೂಲಕ ಹಾಗೂ ಅಹಂಕಾರ, ಅದಕ್ಕೆ ಸೇರಿದ ಎಲ್ಲ ವಿಷಯಗಳಿಂದ ಪಾರಾಗಿ 'ತತ್'ನಲ್ಲಿ ಹೋಗುವುದರ ಮೂಲಕ ನಾವು ದಿವ್ಯಾತ್ಮನ ವಿಶ್ವಾತೀತತೆಯಲ್ಲಿ ಏಕವಾಗಬೇಕು. ಅಹಂಕಾರ ಇತ್ಯಾದಿ ಆ 'ತತ್'ದಿಂದಲೇ ಹೊರಹೊಮ್ಮಿ ಬರುತ್ತವೆ. ಹಾಗೆಯೇ ಪ್ರಕಟವಾದ ಅಸ್ತಿತ್ವಗಳಲ್ಲಿ, ಸಂಭೂತಿಗಳಲ್ಲಿ ನಾವು ದಿವ್ಯಾತ್ಮವಾಗಬೇಕು, ದಿವ್ಯಾತ್ಮದ ಅನಂತ ಅಸ್ತಿತ್ವ, ಪ್ರಜ್ಞೆ, ಶಾಂತಿ, ತನ್ನನ್ನು ನಮಗೆ ತೆರೆದು ತೋರಿಸುವ ದಿವ್ಯಾನಂದ ಇವುಗಳಲ್ಲಿ ನಾವು ಅದರೊಂದಿಗೆ ಏಕವಾಗಬೇಕು, ಜಗತ್ತಿನಲ್ಲಿ ಕ್ರಿಯೆ, ರೂಪತಾಳುವಿಕೆ, ಸ್ವ-ಕಲ್ಪನೆಯ ಲೀಲೆ ಇವುಗಳ ಉಡುಪನ್ನು ಮಾಡಿಕೊಂಡಿರುವ ದಿವ್ಯಾತ್ಮದೊಂದಿಗೆ ಏಕವಾಗಬೇಕು.

ದಿವ್ಯಾತ್ಮ ಅಥವಾ ದೇವರನ್ನು ಕುರಿತು ಬೌದ್ಧಿಕವಾಗಿ ಕಲ್ಪನೆ ಮಾಡಿಕೊಳ್ಳು–ವುದಕ್ಕಿಂತ ಹೆಚ್ಚಿನದೇನನ್ನು ಮಾಡಬಹುದು ಎಂಬುದನ್ನು ತಿಳಿದುಕೊಳ್ಳಲು ಆಧುನಿಕ ಮನಸ್ಸಿಗೆ ಕಠಿಣವಾಗುತ್ತದೆ, ಆದರೆ ಪ್ರಕೃತಿಯನ್ನು ಕುರಿತು ಈ ದರ್ಶನದ, ಅನುಭವದ ಹಾಗೂ ಸಂಭೂತಿಯ ಆಂತರಿಕ ಎಚ್ಚತ್ತುಕೊಳ್ಳುವಿಕೆಯ ಸ್ವಲ್ಪ ಮಟ್ಟಿಗಿನ ಛಾಯೆಯನ್ನು ಕಡತೆಗೆದುಕೊಳ್ಳಬಹುದು. ಇದನ್ನು ಶ್ರೇಷ್ಠ ಆಂಗ್ಲಕವಿ ಯುರೋಪಿಯನ್‌ರ ಕಲ್ಪನೆಗೆ ನೈಜವಾದದ್ದನ್ನಾಗಿ ಮಾಡಿದ್ದಾನೆ. ವರ್ಡ್ಸ್‌ವರ್ಥ ಕವಿ ಪ್ರಕೃತಿಯನ್ನು ಕುರಿತು ಸಿದ್ಧಿಸಿಕೊಂಡದ್ದು ಏನಾಗಿತ್ತು ಎಂಬುದರ ಬಗ್ಗೆ ಅವನ ಕವನಗಳನ್ನು ಓದಿದಾಗ, ನಮಗೆ ಸ್ವಲ್ಪ ಮಟ್ಟಿಗಿನ ವಿಚಾರ ಹೊಳೆಯಬಹುದು. ಏಕೆಂದರೆ, ಮೊದಲನೆಯದಾಗಿ, ಜಗತ್ತಿನಲ್ಲಿರುವ ಏನೋ ಒಂದರ ದರ್ಶನ ಅವನಿಗಾಗಿತ್ತು, ಅದು ಎಲ್ಲ ವಸ್ತು–ವಿಷಯಗಳನ್ನು ತನ್ನಲ್ಲಿ ಒಳಗೊಳ್ಳುವ ದಿವ್ಯಾತ್ಮನ ದರ್ಶನವಾಗಿತ್ತು, ಅದರ ರೂಪಗಳಿಗೆ ಹೊರತಾದ ಪ್ರಜ್ಞಾಪೂರ್ಣ ಶಕ್ತಿ ಹಾಗೂ ಸಾನ್ನಿಧ್ಯವಾಗಿತ್ತು, ಆದಾಗ್ಯೂ ಅದರಲ್ಲಿ ಪ್ರಕಟಗೊಂಡವುಗಳ ರೂಪಗಳಿಗೆ ಕಾರಣವಾಗಿತ್ತು. ಅವನಿಗೆ ಇದರ ದರ್ಶನವಾಗಿತ್ತು ಮತ್ತು ಇದರ ಸಾನ್ನಿಧ್ಯ ತರುವ ಸಂತೋಷ, ಶಾಂತಿ, ಮತ್ತು ವಿಶ್ವಂಭರತೆ ಇವುಗಳು ಇದ್ದವು ಎಂಬುದಷ್ಟೇ ಅಲ್ಲ, ಆದರೆ ಅದರ ಮಾನಸಿಕ, ಸೌಂದರ್ಯಾಭಿರುಚಿಯ, ಪ್ರಾಣಿಕ, ಭೌತಿಕ ಇವುಗಳನ್ನು ಕುರಿತಾದ ಭಾವನೆಯನ್ನೂ ತಂದುಕೊಂಡಿದ್ದ ಎಂಬುದನ್ನು ನಾವು ಗ್ರಹಿಸುತ್ತೇವೆ. ಈ ಭಾವನೆಯನ್ನು ಹಾಗೂ ದರ್ಶನವನ್ನು ಅದರದೇ ಸತ್ತೆಯಲ್ಲಷ್ಟೇ ಅಲ್ಲ, ಆದರೆ ಹತ್ತಿರವಿರುವ ಹೂವು, ಅತಿ ಸರಳ ಮನುಷ್ಯ, ಚಲಿಸಲಾರದ ಬಂಡೆ ಇವುಗಳಲ್ಲೂ ಕೂಡ ತಂದುಕೊಳ್ಳುತ್ತಿದ್ದ. ಮತ್ತು ಕೊನೆಗೆ ಅವನು ಆಗಾಗ್ಗೆ ಆ ಏಕತೆಯನ್ನು ಸಿದ್ಧಿಸಿಗೊಳ್ಳುತ್ತಿದ್ದ, ಅದು ಅವನ ಧ್ಯಾನದ ವಸ್ತುವಾಗಿತ್ತು. ಅದರ ಒಂದು ಹಂತವು "A slumber did my spirit seal ಒಂದು ನಿದ್ರಾವಸ್ಥೆ ನನ್ನ ಆತ್ಮದ ಮೇಲೆ ಮುದ್ರೆಯನ್ನೊತ್ತಿತು" ಎಂಬ ಕವನದಲ್ಲಿ ಸಾಮರ್ಥ್ಯಪೂರ್ಣವಾಗಿ ಅಭಿವ್ಯಕ್ತ–ಗೊಂಡಿದೆ. ಆ ಕವನದಲ್ಲಿ "ನಾನು ಪೃಥ್ವಿಯೊಡನೆ ಏಕವಾಗಿದ್ದೆ, ಅದರ ದೈನಂದಿನ ಕ್ರಮದೊಂದಿಗೆ ನಾನೂ ಸುತ್ತಿ ಬಂದೆ" ಎಂದು ಹೇಳಿದ್ದಾನೆ. ಭೌತಿಕ ಪ್ರಕೃತಿಗೆ ಅನ್ವಯವಾದ ಈ ಸಿದ್ಧಿಯನ್ನು ಗಾಢವಾದ ದಿವ್ಯಾತ್ಮನ ಔನ್ನತ್ಯಕ್ಕೇರಿಸಿದಾಗ ನಮಗೆ ಯೌಗಿಕ ಜ್ಞಾನದ ಅಂಶಗಳು ದೊರಕುತ್ತವೆ. ಆದರೆ ಈ ಎಲ್ಲ ಅನುಭವ ದಿವ್ಯಾತ್ಮನ ಎಲ್ಲ ಮುಖಗಳಾಚೆಗಿರುವ ವಿಶ್ವಾತೀತನ ಅತೀಂದ್ರಿಯ, ಅತಿಮಾನಸ ಸಿದ್ಧಿಗೆ ಒಳಕೋಣೆಯಿದ್ದ ಹಾಗೆ, ಅತಿಪ್ರಜ್ಞೆಯಲ್ಲಿ (super-conscient) ಪ್ರವೇಶಿಸುವುದರ ಮೂಲಕ ಮತ್ತು ಅಲ್ಲಿ ಉಳಿದೆಲ್ಲ ಅನುಭವವನ್ನು ಅವರ್ಣನೀಯನಾದವನೊಡನೆ ದಿವ್ಯ ಏಕತೆಯಲ್ಲಿ ಮುಳುಗಿಸುವುದರ ಮೂಲಕ ಜ್ಞಾನದ ಕೊನೆಯ ಶಿಖರವನ್ನು



ಸಿದ್ಧಿಸಿಕೊಳ್ಳಬಹುದು. ಅದು ಎಲ್ಲ ದೈವೀ ಜ್ಞಾನದ ಪರಾಕಾಷ್ಠೆ, ಹಾಗೆಯೇ ಅದು ಎಲ್ಲ ದಿವ್ಯಾನಂದದ ಹಾಗೂ ದಿವ್ಯ ಜೀವನದ ಮೂಲವಾಗಿದೆ.

**(20–21/290, 293)** – ಶ್ರೀ ಅರವಿಂದರು

*

## ಭಗವಂತನೊಡನೆ ಏಕತೆಯನ್ನು ಸಿದ್ಧಿಸಿಕೊಳ್ಳುವುದಕ್ಕೆ ಸಾಧನ

ನಿಜವಾಗಿ ಏಕತೆಯನ್ನು ಸಿದ್ಧಿಸಿಕೊಳ್ಳುವುದಕ್ಕೆ ಹಲವಾರು ಸಾಧನಗಳಿವೆ. ಅದನ್ನು ಅಭೀಪ್ಸೆ, ಸಮರ್ಪಣೆ ಇಲ್ಲವೆ ಇನ್ನಿತರ ಸಾಧನದ ಮೂಲಕ ಮಾಡ–ಬಹುದು. ಪ್ರತಿಯೊಂದು ಸಾಧನವನ್ನು ಪಟ್ಟು ಹಿಡಿಯುವಿಕೆ ಹಾಗೂ ನಿಷ್ಕಾ–ಪಟ್ಯಗಳ ಮೂಲಕ ಕೈಕೊಳ್ಳುವುದರಿಂದ ಅದು ಗುರಿಯತ್ತ ಕೊಂಡೊಯ್ಯುತ್ತದೆ. ಭಗವಂತನನ್ನು ತಲುಪುವ ನಿರ್ಧಾರದ ಹಿಂದೆ ಇರುವ ಅಭೀಪ್ಸೆ ನಿಮ್ಮ ಇಡೀ ಸ್ವಭಾವವನ್ನು ಕ್ರಿಯಾಶೀಲವಾಗಿ ಮುನ್ನೂಡುತ್ತದೆ. ಇನ್ನೊಂದೆಡೆಗೆ ಸಮರ್ಪಣೆಗೆ ನಿಮ್ಮ ಅಹಂಕಾರದಿಂದ ಉಂಟಾಗುವ ಮಿತಿಗಳನ್ನು ಕೈಬಿಡುವುದಾಗಿದೆ ಎಂದು ವ್ಯಾಖ್ಯೆ ಕೊಡಬಹುದು. ಭಗವಂತನಿಗೆ ನಿಮ್ಮನ್ನು ಸಮರ್ಪಣೆ ಮಾಡಿಕೊಳ್ಳು–ವುದೆಂದರೆ ನಿಮ್ಮ ಸಂಕುಚಿತ ಮಿತಿಗಳನ್ನು ತ್ಯಾಗಮಾಡುವುದಾಗಿದೆ ಮತ್ತು ಅವನು ನಿಮ್ಮ ಮೇಲೆ ಮುತ್ತಿಗೆ ಹಾಕಲು ಹಾಗೂ ತನ್ನ ಲೀಲೆಗೆ ನಿಮ್ಮನ್ನು ಕೇಂದ್ರ–ವೊಂದನ್ನಾಗಿ ಮಾಡಿಕೊಳ್ಳಲು ಅನುವು ಮಾಡಿಕೊಡುವುದಾಗಿದೆ. ಆದರೆ ಯೋಗಿಗಳಿಗೆ ಅತ್ಯಂತ ಪ್ರಿಯವಾದ ವಿಶ್ವಂಭರ ಪ್ರಜ್ಞೆ ಭಗವಂತನಲ್ಲ ಎಂಬುದನ್ನು ನೀವು ಲಕ್ಷ್ಯದಲ್ಲಿಟ್ಟುಕೊಂಡಿರಬೇಕು ನಿಮಗೆ ಇಷ್ಟವಾದರೆ ವಿಶ್ವದಲ್ಲಿ ಸಮಪಾತಳಿ (horizontal)ಯ ಮಟ್ಟದಲ್ಲಿರುವ ಮಿತಿಗಳನ್ನು ಮುರಿದು ಹಾಕಬಹುದು, ಆದರೆ ವಿಸ್ತಾರದ ಹಾಗೂ ವಿಶ್ವಂಭರ ಅನೇಕತೆಯ ಈ ಅರ್ಥವನ್ನು ಭಗವಂತನೆಂದು ಭಾವಿಸಿದರೆ ನೀವು ದೊಡ್ಡ ತಪ್ಪು ಮಾಡುವಿರಿ. ವಿಶ್ವಂಭರ ಚಲನೆ, ಒಟ್ಟಿನಲ್ಲಿ, ಸತ್ಯ ಹಾಗೂ ಮಿಥ್ಯೆಗಳ ಮಿಶ್ರಣವಾಗಿದೆ, ಹಾಗಾಗಿ ಅಲ್ಲಿಯೇ ನಿಂತುಬಿಟ್ಟರೆ ಅಪರಿ–ಪೂರ್ಣತೆಯಿರುತ್ತದೆ, ಏಕೆಂದರೆ ನೀವು ವಿಶ್ವಾತೀತ ಪ್ರಜ್ಞೆಯನ್ನು ಸಿದ್ಧಿಸಿಕೊಳ್ಳದೆ ಸರಿಯಾಗಿಯೇ ವಿಶ್ವಂಭರ ಪ್ರಜ್ಞೆಯಲ್ಲಿ ಪಾಲುಗೊಳ್ಳಬಹುದು. ಇನ್ನೊಂದೆಡೆಗೆ ಭಗವಂತನೆಡೆಗೆ ಸಾಗುವುದು ವಿಶ್ವಂಭರ ಸಿದ್ಧಿಯನ್ನು ಪಡೆದ ಹಾಗೆ, ಆದಾಗ್ಯೂ ಮಿಥ್ಯೆಯಿಂದ ಮುಕ್ತರಾಗಿ ಉಳಿದುಕೊಳ್ಳುವಿರಿ.

ವ್ಯಕ್ತಿ ತನ್ನದೇ ಮಿತಿಗಳನ್ನು ಮೆಚ್ಚಿಕೊಂಡಿರುವುದರಿಂದ ಸ್ವ–ಸಮರ್ಪಣೆಗೆ ಅಡೆತಡೆಯುಂಟಾಗುತ್ತದೆ. ಆ ಮೆಚ್ಚಿಕೊಳ್ಳುವಿಕೆ ಸ್ವಾಭಾವಿಕವಾದದ್ದು, ಏಕೆಂದರೆ ವ್ಯಕ್ತಿ

ಸತ್ತೆ ರೂಪುಗೊಳ್ಳುವಂತೆ ಮಾಡುವುದರಲ್ಲಿ ಮಿತಿಗಳ ಮೇಲೆ ಕೇಂದ್ರೀಕರಿಸುವ ಪ್ರವೃತ್ತಿಯಿರುತ್ತದೆ. ಅದಿಲ್ಲದೆ ಪ್ರತ್ಯೇಕವಾಗಿರುವ ಭಾವನೆ ಬರುವುದಿಲ್ಲ, ಅದಿಲ್ಲದೆ ಮಾನಸಿಕ ಹಾಗೂ ಪ್ರಾಣಿಕ ಪ್ರಜ್ಞೆಯಲ್ಲಾಗುವಂತೆ ಎಲ್ಲವೂ ಮಿಶ್ರಣಕ್ಕೊಳಗಾಗುತ್ತದೆ. ಅಷ್ಟೊಂದು ದ್ರವರೂಪದಲ್ಲಿ ಇರದೆ ಇರುವ ದೇಹ ಪ್ರತ್ಯೇಕ ವ್ಯಕ್ತಿವಿಶಿಷ್ಟತೆಯನ್ನು ಕಾಪಾಡಿಕೊಂಡು ಬರುತ್ತದೆ. ಆದರೆ ಒಮ್ಮೆ ಈ ಪ್ರತ್ಯೇಕತೆ ಸ್ಥಾಪಿತಗೊಂಡ ನಂತರ, ಅಲ್ಲಿ ಅದನ್ನು ಕಳೆದುಕೊಳ್ಳುವ ಭಯ ನುಸುಳಿ ಬರುತ್ತದೆ. – ಅದು ಬಹಳಷ್ಟು ರೀತಿಯಲ್ಲಿ ಆರೋಗ್ಯಕರ ಹುಟ್ಟುಗುಣ, ಆದರೆ ಭಗವಂತನನ್ನು ಕುರಿತು ಅದನ್ನು ತಪ್ಪಾಗಿ ಅನ್ವಯಿಸಲಾಗುತ್ತದೆ, ಏಕೆಂದರೆ ಭಗವಂತನಲ್ಲಿ ನಿಮ್ಮ ವ್ಯಕ್ತಿತ್ವವನ್ನು ಕಳೆದುಕೊಳ್ಳುವುದಿಲ್ಲ, ಕೇವಲ ಅಹಂಮನ್ಯತೆಯನ್ನು ಬಿಟ್ಟುಕೊಡುತ್ತೀರಿ ಮತ್ತು ನಿಜವಾದ ವ್ಯಕ್ತಿಯಾಗುತ್ತೀರಿ, ದೈವೀ ವ್ಯಕ್ತಿವಿಶಿಷ್ಟತೆ ನಿಮ್ಮದಾಗುತ್ತದೆ. ನೀವೇ ಅದು ಎಂದು ಭಾವಿಸಿರುವ ಭೌತಿಕ ಪ್ರಜ್ಞೆಯ ಹಾಗೆ ದೈವೀ ವ್ಯಕ್ತಿವಿಶಿಷ್ಟತೆ ತಾತ್ಕಾಲಿಕ–ವಾಗಿರುವುದಿಲ್ಲ. ದೈವೀ ಪ್ರಜ್ಞೆಯ ಒಂದು ಸ್ಪರ್ಶವಾದಾಗ ಅದರಿಂದ ನೀವು ಏನನ್ನೂ ಕಳೆದುಕೊಳ್ಳುವುದಿಲ್ಲ ಎಂಬುದನ್ನು ಕೂಡಲೆ ಕಂಡುಕೊಳ್ಳುವಿರಿ. ತದ್ವಿರುದ್ಧವಾಗಿ ನೀವು ನಿಜವಾದ ವ್ಯಕ್ತಿಯ ಶಾಶ್ವತತೆಯನ್ನು ದೊರಕಿಸುತ್ತೀರಿ. ಆ ಶಾಶ್ವತ ವ್ಯಕ್ತಿತ್ವ ನೂರಾರು ದೇಹಗಳ ಸಾವನ್ನು, ಮಾನಸಿಕ – ಪ್ರಾಣಿಕ ಬದಲಾವಣೆಗಳನ್ನು ಕಂಡಾಗಲೂ ಉಳಿದುಕೊಳ್ಳುತ್ತದೆ.

*

'ಮಾರ್ಗದಲ್ಲಿರುವುದು' ಎಂದು ನಾನು ಕರೆಯುವುದು ಪ್ರಜ್ಞೆಯ ಒಂದು ಸ್ಥಿತಿಯಲ್ಲಿರುವುದಾಗಿದೆ, ಆ ಸ್ಥಿತಿಯಲ್ಲಿ ಭಗವಂತೊಡನೆ ಏಕತೆಗಷ್ಟೇ ಮೌಲ್ಯ–ವಿರುತ್ತದೆ. – ಜೀವಿಸುವುದಕ್ಕೆ, ಅಭೀಪ್ಸೆಪಡುವುದಕ್ಕೆ ಯೋಗ್ಯವಾದ ಒಂದೇ ವಿಷಯವೆಂದರೆ ಆ ಏಕತೆಯಾಗಿದೆ. ಉಳಿದದ್ದೆಲ್ಲ ಮೌಲ್ಯವನ್ನು ಕಳೆದುಕೊಂಡಿದೆ, ಅದನ್ನು ಅರಸುವುದು ವ್ಯರ್ಥ, ಹಾಗಾಗಿ ಇನ್ನು ಮುಂದೆ ಅದನ್ನು ತ್ಯಾಗ ಮಾಡುವ ಪ್ರಶ್ನೆ ಇಲ್ಲ, ಏಕೆಂದರೆ ಅದು ಆಸೆಪಡಬೇಕಾದ ವಿಷಯವಲ್ಲ. ಭಗವಂತನೊಡನೆ ಏಕತೆಯನ್ನು ಪಡೆಯುವುದಕ್ಕಾಗಿ ಮನುಷ್ಯ ಜೀವಿಸಿರದಿದ್ದರೆ, ಅವನು ಮಾರ್ಗದ ಮೇಲಿರುವುದಿಲ್ಲ.

(3/168–69, 16/317) **– ಶ್ರೀಮಾತೆ**

*

ಭಗವಂತ, ಮಹತ್ವದ್ದಾದ, ಗಣನೆಗೆ ತೆಗೆದುಕೊಳ್ಳಬೇಕಾದ ಒಂದೇ



ವಿಷಯವೆಂದರೆ ಹೆಚ್ಚು, ಹೆಚ್ಚಾಗಿ ನಿನ್ನೊಡನೆ ತಾದಾತ್ಮ್ಯ ಪಡೆಯುವುದಾಗಿದೆ, ನಿನ್ನ ಪರಿಪೂರ್ಣ ಪ್ರಜ್ಞೆಯೊಂದಿಗೆ ನಮ್ಮ ಪ್ರಜ್ಞೆಯನ್ನು ಏಕಗೊಳಿಸುವುದಾಗಿದೆ, ನಿನ್ನ ಸಾರ್ವಭೌಮ ನಿಯಮ, ನಿನ್ನ ಪ್ರೇಮಪೂರ್ವಕ ಸಂಕಲ್ಪ ಇವುಗಳಿಗೆ ಹೆಚ್ಚು ಶಾಂತಿಪೂರ್ಣ, ಸ್ಥಿರ, ನಿಸ್ವಾರ್ಥ ಹಾಗೂ ಬಲಿಷ್ಠ ಸೇವಕನಾಗುವುದಾಗಿದೆ.

(1/79) **– ಶ್ರೀಮಾತೆ**

*

## ಸಾಧನೆಯಲ್ಲಿ ಸರಿಯಾದ ಶ್ರೇಣಿಯ ಕ್ರಮ

ಆಧ್ಯಾತ್ಮಿಕ ಸತ್ಯವನ್ನು ಹಾಗೂ ಜೀವನವನ್ನು ಅರಸುವುದಕ್ಕೆ ಮೊದಲ ಕಾರಣ ನಿಜವಾಗಿ ಭಗವಂತನನ್ನು ಕಂಡುಕೊಳ್ಳುವುದಾಗಿರುತ್ತದೆ. ಅತ್ಯಗತ್ಯವಾದ ವಿಷಯ ಅದೊಂದೇ, ಅದಿಲ್ಲದೆ ಉಳಿದದ್ದೇನೂ ಅಲ್ಲ. ಭಗವಂತನನ್ನು ಒಮ್ಮೆ ಕಂಡುಕೊಂಡ ನಂತರ ಅವನನ್ನು ಪ್ರಕಟಿಸುವುದು – ಎಂದರೆ ಮೊಟ್ಟಮೊದಲಿಗೆ ತನ್ನ ಸೀಮಿತ ಪ್ರಜ್ಞೆಯನ್ನು ದೈವೀ ಪ್ರಜ್ಞೆಯನ್ನಾಗಿ ಪರಿವರ್ತಿಸಬೇಕು, ಅನಂತ ದೈವೀ ಶಾಂತಿ, ದೈವೀ ಪ್ರಕಾಶ, ಪ್ರೇಮ, ಬಲ, ದಿವ್ಯಾನಂದ ಇವುಗಳಲ್ಲಿ ಜೀವಿಸಬೇಕು ಮತ್ತು ಅದೆಲ್ಲ ತನ್ನ ಸಾರಭೂತ ಸ್ವಭಾವದಲ್ಲಿ ಆಗಬೇಕು ಮತ್ತು ಪರಿಣಾಮವಾಗಿ ಮನುಷ್ಯ ತನ್ನ ಕ್ರಿಯಾಶೀಲ ಸ್ವಭಾವದ ಪಾತ್ರೆ, ವಾಹಿನಿ ಹಾಗೂ ಉಪಕರಣವಾಗಬೇಕು.

ಭೌತಿಕ ಸ್ತರದ ಮೇಲೆ ಏಕತೆಯ ತತ್ವವನ್ನು ಚಟುವಟಿಕೆಯ ರೂಪದಲ್ಲಿ ತರುವುದು ಇಲ್ಲವೆ ಮಾನವತೆಯ ಸಲುವಾಗಿ ಕಾರ್ಯಮಾಡುವುದು ದೈವೀ ಸತ್ಯವನ್ನು ತಪ್ಪಾಗಿ ಅರ್ಥಮಾಡಿಕೊಂಡಿರುವುದಾಗಿರುತ್ತದೆ. – ಈ ವಿಷಯಗಳು ಮೊದಲ ನಿಜವಾದ ಆಧ್ಯಾತ್ಮಿಕ ಅರಸುವಿಕೆಯ ಉದ್ದೇಶವಾಗಿರಲು ಸಾಧ್ಯವಿಲ್ಲ. ಮೊದಲು ದಿವ್ಯಾತ್ಮನನ್ನು, ಭಗವಂತನನ್ನು ಕಂಡುಕೊಳ್ಳಬೇಕು, ನಂತರವಷ್ಟೆ ದಿವ್ಯಾತ್ಮ ಇಲ್ಲವೆ ಭಗವಂತ ನಮ್ಮಿಂದ ಯಾವ ಕಾರ್ಯವಾಗಲಿ ಎಂದು ಬಯಸುತ್ತಾನೆ ಎಂಬುದನ್ನು ನಾವು ತಿಳಿದುಕೊಳ್ಳಬಲ್ಲೆವು. ಅಲ್ಲಿಯವರೆಗೆ ನಮ್ಮ ಜೀವನ ಹಾಗೂ ಕ್ರಿಯೆ ಭಗವಂತನನ್ನು ಕಂಡುಕೊಳ್ಳುವುದಕ್ಕೆ ಸಾಧನ ಹಾಗೂ ಸಹಾಯಕ–ವಾಗಬೇಕು, ಅವುಗಳಿಗೆ ಮತ್ತಾವ ಉದ್ದೇಶ ಇರಬಾರದು. ನಾವು ಆಂತರಿಕ ಪ್ರಜ್ಞೆಯಲ್ಲಿ ಬೆಳೆಯುತ್ತಿದ್ದ ಹಾಗೆ ಇಲ್ಲವೆ ಭಗವಂತನ ಆಧ್ಯಾತ್ಮಿಕ ಸತ್ಯ ನಮ್ಮಲ್ಲಿ ಬೆಳೆಯುತ್ತಿದ್ದ ಹಾಗೆ ನಮ್ಮ ಜೀವನ ಮತ್ತು ಕ್ರಿಯೆ ಅದರಿಂದ ಹೊರಹೊಮ್ಮಬೇಕು, ಅದರೊಡನೆ ಏಕವಾಗಬೇಕು, ಆದರೆ ಅದಕ್ಕೆ ಮೊದಲು ನಮ್ಮ ಸೀಮಿತ ಮಾನಸಿಕ

ಕಲ್ಪನೆಗಳಿಂದ ಅವು ಏನಾಗಿರಬೇಕು ಎಂದು ನಿರ್ಧರಿಸುವುದು ನಮ್ಮೊಳಗಿನ ದೈವೀ ಸತ್ಯದ ಬೆಳವಣಿಗೆಗೆ ಅಡೆತಡೆ ಉಂಟುಮಾಡಿದಂತೆ. ಆಂತರಿಕ ಆಧ್ಯಾತ್ಮಿಕ ಸತ್ಯ ಬೆಳೆದ ಹಾಗೆ ನಾವು ಭಗವಂತನ ದೈವೀ ಪ್ರಕಾಶ ಹಾಗೂ ಸತ್ಯ, ದೈವೀ ಸಾಮರ್ಥ್ಯ ಹಾಗೂ ಶಕ್ತಿ, ದೈವೀ ಪರಿಶುದ್ಧತೆ ಹಾಗೂ ಶಾಂತಿ ಇವು ನಮ್ಮೊಳಗೆ ಕಾರ್ಯ ಮಾಡುತ್ತಿರುವ ಭಾವನೆ ಮತ್ತು ನಮ್ಮ ಕ್ರಿಯೆ ಹಾಗೂ ಪ್ರಜ್ಞೆಗಳೊಡನೆ ವ್ಯವಹರಿಸಿ ನಮ್ಮನ್ನು ದೈವೀ ಪ್ರತೀಕವನ್ನಾಗಿ ಮಾಡಲು ಮರು ಆಕಾರಕೊಡಲು ಅವುಗಳನ್ನು ಉಪಯೋಗಿಸುತ್ತಿರುವ, ಕಶ್ಮಲವನ್ನು ತೆಗೆದು ಹಾಕಿ ಅದರ ಸ್ಥಾನದಲ್ಲಿ ಚೊಕ್ಕಬಂಗಾರವನ್ನು ಇರಿಸುತ್ತಿರುವ ಭಾವನೆ ನಮಗೆ ಬರುತ್ತದೆ.

ಭಗವಂತನ ದೈವೀ ಸಾನ್ನಿಧ್ಯ ನಮ್ಮೊಳಗೆ ಯಾವಾಗಲೂ ಇರತೊಡಗಿದಾಗ ಮತ್ತು ಪ್ರಜ್ಞೆ ಪರಿವರ್ತನೆ ಹೊಂದಿದಾಗ ಮಾತ್ರ ಭೌತಿಕ ಸ್ತರದ ಮೇಲೆ ಭಗವಂತನನ್ನು ಪ್ರಕಟಿಸಲು ಸಿದ್ಧರಾಗಿದ್ದೇವೆ ಎಂದು ಹೇಳಲು ನಮಗೆ ಹಕ್ಕಿರುತ್ತದೆ. ಮಾನಸಿಕ ಆದರ್ಶ ಇಲ್ಲವೆ ತತ್ವಕ್ಕೆ ಪ್ರಾಧಾನ್ಯತೆ ನೀಡುವುದು ಮತ್ತು ಅದನ್ನು ಆಂತರಿಕ ಕಾರ್ಯಗತಿಯ ಮೇಲೆ ಹೇರುವುದು ಮಾನಸಿಕ ಸಿದ್ಧಿಯನ್ನು ದೊರಕಿಸುವ ಅಪಾಯ ತರುತ್ತದೆ. ಇಲ್ಲವೆ ಅರ್ಧ ಮಾತ್ರ ರೂಪುಗೊಳ್ಳುವುದರ ಕಾರಣದಿಂದಾಗಿ ನಿಜವಾದ ಬೆಳವಣಿಗೆಗೆ ಅಡೆತಡೆಯುಂಟಾಗುತ್ತದೆ ಇಲ್ಲವೆ ಅದು ಮಿಥ್ಯಾರೂಪ ತಾಳುತ್ತದೆ. ಈ ನಿಜವಾದ ಬೆಳವಣಿಗೆ ಭಗವಂತನೊಡನಿರುವ ಪೂರ್ಣ ಸಂಸರ್ಗ ಹಾಗೂ ಏಕತೆಗಳಿಂದ ಹಾಗೂ ನಮ್ಮ ಜೀವನದಲ್ಲಿ ಅವನ ಸಂಕಲ್ಪದ ಮುಕ್ತ ಹಾಗೂ ಆತ್ಮೀಯ ಹೊರಹರಿತದಿಂದಾಗುತ್ತದೆ. ಇತ್ತೀಚಿನ ಮನಸ್ಸಿನ ಹೊಂದಾಣಿಕೆಯ ದೃಷ್ಟಿ ಇಂತಹ ತಪ್ಪು ಮಾಡುವತ್ತ ಒಲವು ಹೊಂದಿದೆ. ಅವಶ್ಯವಾದ ಒಂದು ವಿಷಯದಿಂದ ನಮ್ಮನ್ನು ಬೇರೆಡೆ ಹೊರಳಿಸುವ ಈ ಚಿಕ್ಕಪುಟ್ಟ ವಿಷಯಗಳನ್ನು ಒಳತರುವುದರ ಬದಲಾಗಿ ದೈವೀ ಶಾಂತಿ ಇಲ್ಲವೆ ದೈವೀ ಪ್ರಕಾಶ ಇಲ್ಲವೆ ದಿವ್ಯಾನಂದಕ್ಕಾಗಿ ಭಗವಂತನನ್ನು ಸಮೀಪಿಸುವುದು ಬಹಳ ಒಳ್ಳೆಯದು. ಭೌತಿಕ ಜೀವನದ ಹಾಗೆಯೇ ಆಂತರಿಕ ಜೀವನದ ದೈವೀಕರಣವು ಭಗವಂತನ ದೈವೀ ಯೋಜನೆಯೆಂಬುದನ್ನು ನಾವು ಕಂಡುಕೊಳ್ಳುತ್ತೇವೆ, ಆದರೆ ಅದು ಆಂತರಿಕ ಸಿದ್ಧಿಯ ಹೊರಹರಿತದಿಂದ ಮಾತ್ರ ನೆರವೇರಿಕೆ ಕಂಡುಕೊಳ್ಳಬಹುದು, ಅದು ಅಂತರಂಗದಿಂದ ಬಾಹ್ಯದಲ್ಲಿ ಬೆಳೆಯುವಂತಹದು, ಆದರೆ ಅದು ಮಾನಸಿಕ ತತ್ವದಿಂದ ಆಗುವುದು ಸಾಧ್ಯವಿಲ್ಲ. (23/516–17)

*



ನಮ್ಮನ್ನು ಅಹಂಕಾರದಿಂದ ಮುಕ್ತಗೊಳಿಸಿಕೊಳ್ಳುವುದು ಮತ್ತು ನಾವು ನಿಜವಾಗಿ ಏನಾಗಿದ್ದೇವೆ ಎಂಬುದನ್ನು ತಿಳಿದುಕೊಳ್ಳುವುದು ಮೊದಲ ಆವಶ್ಯಕತೆ, ಉಳಿದಿದ್ದೆಲ್ಲವನ್ನು ಪ್ರಕಾಶಮಯ ಹಾಗೂ ಅವಶ್ಯವಾದ ಪರಿಣಾಮ ಎಂದು ಸಿದ್ಧಿಸಿಕೊಳ್ಳಬಹುದು. ಆ ಕಾರಣದಿಂದಾಗಿಯೆ ಆಧ್ಯಾತ್ಮಿಕ ಕರೆಯನ್ನು ಆಜ್ಞಾರ್ಥಕ ಎಂದು ಭಾವಿಸಿ ಒಪ್ಪಿಕೊಳ್ಳಬೇಕು, ಅವಿದ್ಯೆಗೆ ಸೇರಿದ ಉಳಿದೆಲ್ಲ ಬೌದ್ಧಿಕ, ನೈತಿಕ, ಸಾಮಾಜಿಕ ಕರೆಗಳಿಗಿಂತ ಆ ಕರೆಗೆ ಆದ್ಯತೆ ನೀಡಬೇಕು. . . .

ಮೊದಲನೆಯದಾಗಿ ಆತ್ಮವನ್ನು ಶೋಧಿಸಬೇಕು, ಯೋಚನೆ, ಭಾವನೆ ಹಾಗೂ ಆಸೆಗಳ ಆತ್ಮವನ್ನಲ್ಲ, ಆದರೆ ರಹಸ್ಯ ಚೈತ್ಯ ಅಸ್ತಿತ್ವ ಎಂದರೆ ನಮ್ಮೊಳಗಿರುವ ದೈವೀ ಅಂಶವನ್ನು ಶೋಧಿಸಬೇಕು. ಅದು ನಮ್ಮ ಸ್ವಭಾವದ ಮೇಲೆ ಪ್ರಬಲವಾದಾಗ, ನಾವು ಪ್ರಜ್ಞಾಪೂರ್ವಕವಾಗಿ ಆತ್ಮವಾದಾಗ, ಮನಸ್ಸು ಪ್ರಾಣ ಹಾಗೂ ದೇಹ ಇವು ಉಪಕರಣಗಳ ರೂಪದಲ್ಲಿ ತಮ್ಮ ಸ್ಥಾನದಲ್ಲಿದ್ದಾಗ, ಸತ್ಯ, ಒಳ್ಳೆಯದು, ನಿಜವಾದ ದಿವ್ಯಾನಂದ ಹಾಗೂ ಅಸ್ತಿತ್ವದ ಸೌಂದರ್ಯ ಇವುಗಳನ್ನು ಅರಿತುಕೊಂಡ, ಹೃದಯವನ್ನು ಹಾಗೂ ಬುದ್ಧಿಯನ್ನು ತನ್ನ ಪ್ರಕಾಶಮಯ ನಿಯಮದಿಂದ ನಿಯಂತ್ರಿಸುವ ಮತ್ತು ನಮ್ಮ ಜೀವನವನ್ನು ಹಾಗೂ ಸತ್ತೆಯನ್ನು ಆಧ್ಯಾತ್ಮಿಕ ಪೂರ್ಣತೆಯತ್ತ ಮುನ್ನಡೆಸುವ ಮಾರ್ಗದರ್ಶಕನ ಬಗ್ಗೆ ಅರಿವುಳ್ಳವರಾಗುತ್ತೇವೆ.

(18/630–31) –ಶ್ರೀ ಅರವಿಂದರು

*

## ಯಶಸ್ಸು ಯಾವುದರ ಮೇಲೆ ಅವಲಂಬಿಸಿದೆ?

ಮನುಷ್ಯ ತನ್ನ ಜೀವನದಲ್ಲಿ ಯಾವುದು ಅತ್ಯಂತ ಮಹತ್ವದ್ದೆಂದು ಭಾವಿಸುವನೋ ಅದರ ಮೇಲೆ ಯಶಸ್ಸು ಅವಲಂಬಿಸಿರುತ್ತದೆ, ಅಷ್ಟೆ.

ಅದು ಮನುಷ್ಯನ ಜೀವನದಲ್ಲಿ ಅತ್ಯಂತ ಮಹತ್ವದ್ದಾದಾಗ, ಉಳಿದೆಲ್ಲವೂ ರುಚಿ ಕಳೆದುಕೊಂಡಾಗ, ಎಲ್ಲ ಮಹತ್ವವನ್ನು, ಸ್ವಾರಸ್ಯವನ್ನು ಕಳೆದುಕೊಂಡಾಗ, ಅಂತರಂಗದಲ್ಲಿ ಅವನು ಅದಕ್ಕಾಗಿ ಜನಿಸಿದ್ದೇನೆ ಎಂಬ ಭಾವನೆ ತಂದುಕೊಂಡಾಗ, ಅದಕ್ಕಾಗಿ ಅವನು ಪೃಥ್ವಿಯ ಮೇಲಿದ್ದಾಗ, ಮತ್ತು ಗಣನೆಗೆ ತಂದುಕೊಳ್ಳಬೇಕಾದುದು ಅದೊಂದೇ ಆದಾಗ ಅದಷ್ಟೇ ಸಾಕಾಗುತ್ತದೆ.

ಮನುಷ್ಯ ಬೇರೆ ಬೇರೆ ಕೇಂದ್ರಗಳ ಮೇಲೆ ಏಕಾಗ್ರತೆ ಕೈಕೊಳ್ಳಬಹುದು, ಆದರೆ ಕೆಲವೊಮ್ಮೆ ಅಷ್ಟೊಂದು ದೀರ್ಘಕಾಲ, ಅಷ್ಟೊಂದು ಪ್ರಯತ್ನದೊಂದಿಗೆ

ಏಕಾಗ್ರತೆಯಲ್ಲಿದ್ದಾಗಲೂ ಪರಿಣಾಮ ಶೂನ್ಯವಾಗಿರುತ್ತದೆ. ನಂತರ ಒಂದು ದಿನ ಏನೋ ಒಂದು ನಿಮ್ಮನ್ನು ಅಲುಗಾಡಿಸುತ್ತದೆ, ನಿಮ್ಮ ಸುರಕ್ಷಿತ ಸ್ಥಾನವನ್ನು ಕಳೆದುಕೊಳ್ಳುತ್ತಿದ್ದೀರಿ ಎಂಬ ಭಾವನೆ ನಿಮಗೆ ಬರುತ್ತದೆ, ನೀವು ಯಾವುದೋ ಒಂದು ಆಸರೆಗೆ ಅಂಟಿಕೊಳ್ಳಬೇಕಾಗಿರುತ್ತದೆ, ಆಗ ನಿಮ್ಮ ಅಂತರಂಗದೊಳಗೆ ಭಗವಂತನೊಡನೆ ಏಕತೆ ಪಡೆಯುವ ವಿಚಾರಕ್ಕೆ, ದೈವೀ ಸಾನ್ನಿಧ್ಯದ ವಿಚಾರಕ್ಕೆ, ಪ್ರಜ್ಞೆಯನ್ನು ಪರಿವರ್ತಿಸುವ ವಿಚಾರಕ್ಕೆ ಅಂಟಿಕೊಳ್ಳುತ್ತೀರಿ, ಮತ್ತು ನೀವು ಅಭೀಪ್ಸೆ–ಪಡುತ್ತೀರಿ, ಬಯಸುತ್ತೀರಿ, ನಿಮ್ಮ ಭಾವನೆಗಳನ್ನು, ಚಲನೆಗಳನ್ನು, ಪ್ರಚೋದನೆ–ಗಳನ್ನು ಸಂಘಟಿಸುತ್ತೀರಿ. ಮತ್ತು ಅದು ಬರುತ್ತದೆ.

ಕೆಲವರು ಹಲವಾರು ವಿಧಾನಗಳನ್ನು ಕುರಿತು ಸಲಹೆ ನೀಡಿದ್ದಾರೆ, ಬಹುಶಃ ಈ ವಿಧಾನಗಳು ಅವರ ಸಂದರ್ಭದಲ್ಲಿ ಯಶಸ್ವಿಯಾಗಿರಬಹುದು, ಸತ್ಯ ಹೇಳುವುದಾದರೆ ಮನುಷ್ಯ ತನ್ನದೇ ವಿಧಾನವನ್ನು ಕಂಡುಹಿಡಿಯಬೇಕು, ಅದನ್ನು ಕೈಕೊಂಡ ನಂತರ ಅವನಿಗೆ ಅದನ್ನು ಹೇಗೆ ಮಾಡಬೇಕು ಎಂಬುದು ತಿಳಿಯುತ್ತದೆ, ಅದಕ್ಕಿಂತ ಮೊದಲಲ್ಲ.

ಅವನು ಅದನ್ನು ಮೊದಲೇ ತಿಳಿದುಕೊಂಡಿದ್ದರೆ, ಮಾನಸಿಕ ರಚನೆ ಮಾಡಿಕೊಂಡಿರುತ್ತಾನೆ ಮತ್ತು ಮಾನಸಿಕ ರಚನೆಯಲ್ಲೇ ಉಳಿದುಕೊಂಡು ಬಿಡುವ ಅಪಾಯವಿರುತ್ತದೆ, ಆ ರಚನೆ ಒಂದು ಭ್ರಮೆಯಾಗಿರುತ್ತದೆ, ಏಕೆಂದರೆ ಮನಸ್ಸು ಕೆಲವೊಂದು ಸ್ಥಿತಿಗಳನ್ನು ನಿರ್ಮಿಸಿದಾಗ ಅವುಗಳನ್ನು ಸಿದ್ಧಿಸಿಕೊಳ್ಳಲಾಗುತ್ತದೆ. ಅವು ಹೆಚ್ಚಾಗಿ ಮಾನಸಿಕ ರಚನೆಗಳಾಗಿರುವ ಸಾಧ್ಯತೆಗಳಿರುವುದರಿಂದ ನಿಜವಾದ ಅನುಭವ ಅಲ್ಲಿರದೆ, ಅದರ ಪ್ರತೀಕವಿರುತ್ತದೆ. ಹಾಗಾಗಿ ತಿಳಿದುಕೊಳ್ಳುವುದಕ್ಕಿಂತ ಮೊದಲೇ ಈ ಎಲ್ಲ ನಿಜವಾದ ಆಧ್ಯಾತ್ಮಿಕ ಅನುಭವಗಳನ್ನು ಪಡೆದರೆ ಅದು ಹೆಚ್ಚು ಜಾಣತನದ ವಿಷಯವಾಗುತ್ತದೆ, ಅವುಗಳನ್ನು ಮನುಷ್ಯ ಮೊದಲೇ ತಿಳಿದು–ಕೊಂಡಿದ್ದರೆ ಅವುಗಳ ಅನುಕರಣೆ ಮಾಡುತ್ತಾನೆ, ಅವುಗಳನ್ನು ದೊರಕಿಸುವುದಿಲ್ಲ, ತನಗೆ ಅವು ದೊರಕಿವೆ ಎಂದು ಕಲ್ಪನೆ ಮಾಡಿಕೊಳ್ಳುತ್ತಾನೆ. ಅದು ಹಾಗಿರುವಾಗ ಮನುಷ್ಯ ಅದನ್ನು ತಿಳಿದುಕೊಂಡಿರದೆ ಇದ್ದರೆ – ವಿಷಯಗಳು ಹೇಗಿವೆ, ಅವು ಯಾವ ರೀತಿಯಲ್ಲಿ ಸಂಭವಿಸಬೇಕು, ಅದು ಆಗುವುದು ಹೇಗೆ – ಇದೆಲ್ಲದರ ಬಗ್ಗೆ ಅವನು ಏನನ್ನೂ ತಿಳಿದುಕೊಂಡಿರದೆ ಇದ್ದರೆ, ಆಗ ನಿಶ್ಚಲವಾಗಿ ಉಳಿದುಕೊಂಡು ತನ್ನ ಅಂತರಂಗದಲ್ಲಿ ಒಂದು ಬಗೆಯ ವಿಂಗಡನೆ ಮಾಡುತ್ತ ಇದ್ದಕ್ಕಿದ್ದಂತೆ ಅನುಭವ ಪಡೆಯಬಹುದು, ನಂತರ ತನಗೆ ಆದದ್ದೇನು ಎಂಬುದನ್ನು ತಿಳಿದು–ಕೊಳ್ಳುತ್ತಾನೆ. ಅದು ಮುಗಿದಿರುತ್ತದೆ ಮತ್ತು ಮನುಷ್ಯ ಅದನ್ನು ಮಾಡಿದಾಗ, ಮತ್ತೆ



ಹೇಗೆ ಮಾಡಬೇಕು ಎಂಬುದನ್ನು ತಿಳಿದುಕೊಂಡಿರುತ್ತಾನೆ ಅದು ನಂತರ ಆಗು–ವಂತಹದು. ಆ ರೀತಿ ಅದು ನಿಶ್ಚಿತ ಅನುಭವವಾಗಿರುತ್ತದೆ.

*

**ಪ್ರಶ್ನೆ :** *ಶ್ರೀಮಾತೆಯವರೆ ಇಲ್ಲಿ (ಯೋಗ ಸಮನ್ವಯ ಗ್ರಂಥದಲ್ಲಿ) "ಅನಂತನನ್ನು ಆಯ್ದುಕೊಂಡವನನ್ನು ಅನಂತನೇ ಆಯ್ದುಕೊಂಡಿರುತ್ತಾನೆ" ಎಂದು ಹೇಳಲಾಗಿದೆ.*

**ಶ್ರೀಮಾತೆ :** ಅದು ಅತ್ಯದ್ಭುತ ವಾಕ್ಯ!

ಅದು ಸಂಪೂರ್ಣ ಸತ್ಯ. "ಯೋಚನೆಗಳು, ಹಾಗೂ ಮಿಣುಕು ನೋಟಗಳು" ಗ್ರಂಥದಲ್ಲಿ ಅಂತಹದೇ ಒಂದು ವಾಕ್ಯವಿದೆ. ಅಲ್ಲಿ ಶ್ರೀ ಅರವಿಂದರು 'ಅನಂತ' ಶಬ್ದದ ಬದಲಾಗಿ 'ದೇವ' ಶಬ್ದವನ್ನು ಉಪಯೋಗಿಸಿದ್ದಾರೆ. ಆದರೆ ವಿಚಾರ ಅದೇ ಆಗಿದೆ – "ದೇವನೇ ನಿಮ್ಮನ್ನು ಆಯ್ದುಕೊಳ್ಳುತ್ತಾನೆ, ಭಗವಂತನೇ ನಿಮ್ಮನ್ನು ಆಯ್ದುಕೊಳ್ಳುತ್ತಾನೆ." ಆದ್ದರಿಂದ ನೀವು ಅವನ ಹಿಂದೆ ಓಡುತ್ತೀರಿ.

ಇದನ್ನು ಅದು ಕೊಡುವುದು – ಅದನ್ನೇ ಅವರು ಹೇಳಿದ್ದಾರೆ, ಅಲ್ಲವೆ? – ಅದು ನಿಖರವಾಗಿ ಮನುಷ್ಯ ದೈವ ನಿಯತಿಗೊಳಪಟ್ಟಿದ್ದಾನೆ ಎಂಬ ಆ ಬಗೆಯ ಗಾಢ ನಂಬಿಕೆಯನ್ನು, ನಿಶ್ಚಿತತೆಯನ್ನು ಕೊಡುತ್ತದೆ. ಮನುಷ್ಯ ದೈವ ನಿಯತಿ–ಗೊಳಪಟ್ಟಿದ್ದರೆ ಗುಡ್ಡದಷ್ಟು ತೊಂದರೆಗಳಿದ್ದಾಗ್ಯೂ ಅದರಿಂದ ಏನೂ ಆಗದು, ಅವನು ಯಶಸ್ಸು ಕಂಡುಕೊಳ್ಳುವುದು ನಿಶ್ಚಿತ! ಅದು ಎಲ್ಲ ತೊಂದರೆಗಳನ್ನು ಮತ್ತು ಪರೀಕ್ಷೆಗಳನ್ನು ಸಹನೆಯಿಂದ ಎದುರಿಸುವ ಅದಮ್ಯ ಧೈರ್ಯ ಕೊಡುತ್ತದೆ. ನೀವು ಯಶಸ್ಸು ಪಡೆಯುವುದು ನಿಶ್ಚಿತ.

ಇದು ವಾಸ್ತವ ಸಂಗತಿ – ವಾಸ್ತವದಲ್ಲಿ ಅದು ಹಾಗಿದೆ, ನೀವು ಯೋಚಿಸಿದ ಕ್ಷಣ, ಸರಿ, ನೀವು ಅದನ್ನು ಯೋಚಿಸುತ್ತೀರಿ ಏಕೆಂದರೆ ಯಾರೋ ಒಬ್ಬರು ನಿಮ್ಮ ಬಗ್ಗೆ ಯೋಚಿಸಿರುತ್ತಾರೆ, ನೀವು ಆಯ್ದುಕೊಳ್ಳುತ್ತೀರಿ, ಏಕೆಂದರೆ ನಿಮ್ಮನ್ನು ಆಯ್ದುಕೊಳ್ಳಲಾಗಿತ್ತು.

ಮನುಷ್ಯ ಕೇವಲ ಒಂದು ಸಲ ತನ್ನಂತರಂಗದಲ್ಲಿ 'ಅಹಾ! ನನಗೆ ಇದೇ ಸತ್ಯ' ಎಂದು ಭಾವನೆ ತಂದುಕೊಂಡ ಕ್ಷಣ ಅದು ಮುಗಿದು ಹೋಗುತ್ತದೆ, ದೃಢ–ವಾಗಿರುತ್ತದೆ. ಯಾರೂ ಪ್ರವೇಶಿಸಿರದ ಅರಣ್ಯದಲ್ಲಿ ನೀವು ದಾರಿ ಮಾಡಿಕೊಳ್ಳುತ್ತ ಹಲವಾರು ವರ್ಷಗಳನ್ನು ಕಳೆದರೂ ಅದೇನೂ ಅಲ್ಲ, ಅದಕ್ಕೆ ಯಾವ ಮಹತ್ವವೂ ಇಲ್ಲ – ಅದು ಮುಗಿದು ಹೋಗಿರುತ್ತದೆ, ದೃಢವಾಗಿರುತ್ತದೆ.

ಹಾಗಾಗಿ ಕೆಲವರಿದ್ದಾರೆ, ಅವರು ಬಹಳ ಸರಳ ಮಾರ್ಗ ಅನುಸರಿಸುತ್ತಾರೆ ಮತ್ತು ಗುರಿಯತ್ತ ಬೇಗ ತಲುಪುತ್ತಾರೆ, ಇನ್ನುಳಿದವರಿದ್ದಾರೆ, ಅವರಿಗೆ ಚಕ್ರವ್ಯೂಹ ಇಷ್ಟವಾಗಿರುತ್ತದೆ, ಗುರಿ ತಲುಪಲು ಅವರಿಗೆ ಹೆಚ್ಚಿನ ಸಮಯ ಬೇಕಾಗುತ್ತದೆ, ಆದರೆ ಅದಕ್ಕೆ ಕೊನೆ ಇದೆ, ಗುರಿ ಇದೆ. ತನ್ನ ಜೀವನದಲ್ಲಿ ಭಗವಂತನತ್ತ ಸಾಗಲು (ಭಾಷೆಯ ಅನುಕೂಲಕ್ಕಾಗಿ ಭಗವಂತ ಎಂದು ಕರೆಯಲಾಗಿದೆ, ಅವನನ್ನು ಬೇರೆ ಯಾವ ಹೆಸರಿನಿಂದಲೂ ಕರೆಯಬಹುದು) ಭವ್ಯ ರೀತಿಯಲ್ಲಿ ಒತ್ತಡಕ್ಕೊಳಗಾದ ಮನುಷ್ಯ ನಿಶ್ಚಿತವಾಗಿ ಅವನನ್ನು ತಲುಪುತ್ತಾನೆ ಎಂಬುದನ್ನು ನಾನು ಅನುಭವ-ದಿಂದ ಕಂಡುಕೊಂಡಿದ್ದೇನೆ. ಅವನು ಹೆಚ್ಚು ಕಡಿಮೆ ರೀತಿಯ ಹೋರಾಟ ನಡೆಸ-ಬೇಕಾಗುತ್ತದೆ, ಅವನಿಗೆ ಹೆಚ್ಚು ಕಡಿಮೆ ರೀತಿಯ ತೊಂದರೆಗಳಿರುತ್ತವೆ, ಕೆಲ-ವೊಂದು ಸಮಯದಲ್ಲಿ ಭಗವಂತನಿಗೆ ಅವನು ಬೆನ್ನು ತಿರುಗಿಸಿದ್ದರೂ ಕೂಡ ಅದು ಮಹತ್ವದ್ದಾಗಿರುವುದಿಲ್ಲ, ಒಂದು ದಿನ ಅವನು ಯಶಸ್ವಿಯಾಗುವುದು ನಿಶ್ಚಿತ. ಭಗವಂತ ಆಯ್ದುಕೊಂಡದ್ದು ಒಂದು ಆತ್ಮ, ಅದು ಅರಿವನ್ನು ಪಡೆದಿರುತ್ತದೆ, ಏಕೆಂದರೆ ಅರಿವನ್ನು ಪಡೆಯುವ ಗಳಿಗೆ ಬಂದೊದಗಿರುತ್ತದೆ. – ಒಮ್ಮೆ ಆ ಗಳಿಗೆ ಬಂದೊದಗಿದಾಗ, ಸರಿ, ಹೆಚ್ಚು ಕಡಿಮೆ ಶೀಘ್ರವಾಗಿ ಪರಿಣಾಮ ಅನುಸರಿಸುತ್ತದೆ. ಇದನ್ನು ಸಾಧಿಸಲು ಕೆಲವು ತಿಂಗಳುಗಳು, ಇಲ್ಲವೆ ಕೆಲವು ವರ್ಷಗಳು ಇಲ್ಲವೆ ಕೆಲವು ಜನ್ಮಗಳು ಬೇಕಾಗಬಹುದು – ಆದರೆ ಅದನ್ನು ನೀವು ಸಾಧಿಸುವಿರಿ.

ಗಮನಾರ್ಹವಾದ ವಿಷಯವೆಂದರೆ ಆಯ್ಕೆಯ ಈ ಸ್ವಾತಂತ್ರ್ಯವನ್ನು ನಿಮಗೆ ಬಿಟ್ಟುಕೊಡಲಾಗಿದೆ, ಮತ್ತು ನಿಮ್ಮೊಳಗೆ ನೀವು ಇದೇ ಜೀವನಾವಧಿಯಲ್ಲಿ ಅದನ್ನು ಮಾಡಬೇಕೆಂದು ನಿರ್ಧರಿಸಿದ್ದರೆ, ಅದನ್ನು ಮಾಡುವಿರಿ. ನಾನಿಲ್ಲಿ ಶಾಶ್ವತ ಮತ್ತು ಸತತ ಮುಂದುವರಿದುಕೊಂಡು ಹೋಗುವ ನಿರ್ಧಾರ ಕುರಿತು ಹೇಳುತ್ತಿಲ್ಲ. ಅಂತಹ ನಿರ್ಧಾರ ನಿಮ್ಮದಾಗಿದ್ದರೆ ಹನ್ನೆರಡು ತಿಂಗಳುಗಳಲ್ಲಿ ಅದನ್ನು ಸಾಧಿಸುವಿರಿ. ನಾನು ಹೇಳುತ್ತಿರುವುದು ಅದಲ್ಲ. ಕೇವಲ ಒಮ್ಮೆ ಇದ್ದಕ್ಕಿದ್ದಂತೆ "ನನಗೆ ಇದು ಬೇಕಾಗಿದೆ" ಎಂಬುದು ನಿಮ್ಮನ್ನು ಹಿಡಿದುಕೊಂಡರೆ, ಅದರ ಮೇಲೆ ಮುದ್ರೆಯನ್ನಿರಿಸಲಾಗುತ್ತದೆ. ಅದಿರುವುದುಹಾಗೆ.

ವಿಷಯಗಳಿರುವ ರೀತಿ ಹೀಗಿದೆ.

ಸಮಯವನ್ನು ಹಾಳು ಮಾಡುವುದಕ್ಕೆ ಅದು ಕಾರಣವಾಗಬಾರದು, ಚಕ್ರವ್ಯೂಹದ ಎಲ್ಲ ಬಗೆಯ ವಕ್ರದಾರಿಗಳನ್ನು ಅನುಸರಿಸಿ ಹೋಗಲು, ಕೊನೆಗೆ ಅದರೊಂದಿಗೆ ಅಸಾಧಾರಣವಾದ ಹುಚ್ಚು ಭಾವನೆಗಳೊಂದಿಗೆ ಗುರಿ ತಲುಪಲು



ಅದು ಕಾರಣವಾಗಬಾರದು. ಸಂದರ್ಭ ಯಾವುದೇ ಇರಲಿ, ತೊಂದರೆಗಳೇನೇ ಇರಲಿ, ಅದು ನಿರಾಶೆಗೊಳಗಾಗದಿರುವುದಕ್ಕೆ ಕಾರಣವಾಗಿರುತ್ತದೆ.

ಏನನ್ನಾದರೂ ಕೈಕೊಳ್ಳುವುದಿದ್ದರೆ, ಅದನ್ನು ಸಾಧ್ಯವಿದ್ದಷ್ಟು ಬೇಗ ಕೈಕೊಳ್ಳ-ಬೇಕೆಂಬುದು ನನ್ನ ಅಭಿಪ್ರಾಯ. ಆದಾಗ್ಯೂ ಸಮಯವನ್ನು ಹಾಳುಮಾಡಲು ಇಷ್ಟ ಪಡುವ ಜನರಿದ್ದಾರೆ.

(7/208–09, 338–39) **– ಶ್ರೀಮಾತೆ**

*

**ಯಶಸ್ವಿನ ಮಂತ್ರ :**

ನಂಬಿಕೆಗಾಗಿ ಅಭೀಪ್ಸೆಪಡುವುದನ್ನಲ್ಲದೆ ನಾನು ನಿಮ್ಮಿಂದ ಬಯಸುವುದೇನು? ಸರಿ, ಅದು ವಿಧಾನದಲ್ಲಿ ಸ್ವಲ್ಪ ಮಟ್ಟಿಗಿನ ಕೂಲಂಕಷತೆ ಮತ್ತು ಪಟ್ಟುಹಿಡಿಯುವು-ದಾಗಿರುತ್ತದೆ. ಎರಡು ದಿನ ಅಭೀಪ್ಸೆಪಟ್ಟು ನಂತರ ನಿರುತ್ಸಾಹದಲ್ಲಿ ಇಳಿದು ಹೋಗುವುದು ಬೇಡ. ಭೂಕಂಪದ, ಶೋಪೆನಹಾವರನ (Schopenhauer), ಅದಕ್ಕಿಂತಲೂ ಅಧಿಕವಾಗಿ ಉಳಿದೆಲ್ಲ ಮಬ್ಬುತನದ ವೇದವಾಕ್ಯವನ್ನು ವಿಕಸನ ಪಡಿಸುತ್ತ ಹೋಗುವುದು ಬೇಡ. ಭಗವಂತನಿಗೆ ಲೀಲೆ ನಡೆಸಲು ಪೂರ್ಣ ಅವಕಾಶ ಕೊಡಬೇಕು. ಅವನು ನಿಮ್ಮಲ್ಲಿ ಪ್ರಕಾಶವೊಂದನ್ನು ಬೆಳಗಿದರೆ ಇಲ್ಲವೆ ಬೆಳಗುವ ತಯಾರಿ ಮಾಡಿಕೊಳ್ಳುತ್ತಿದ್ದರೆ ಅದರ ಮೇಲೆ ನಿರಾಶೆಯ ಹಸಿಕಂಬಳಿ-ಯನ್ನು ತಂದು ಹೊದಿಸುವುದು ಬೇಡ. "ಅದು ಹೊತ್ತಿಸಿದ ಕೇವಲ ಮೇಣಬತ್ತಿಯ ದೀಪ, ಮತ್ತೇನೂ ಅಲ್ಲ" ಎಂದು ಹೇಳುವುದು ಬೇಡ. ಆದರೆ ಈ ಎಲ್ಲ ಸಂಗತಿ-ಗಳಲ್ಲಿ ಮಾನವನ ಮನಸ್ಸು, ಪ್ರಾಣ ಹಾಗೂ ದೇಹಗಳ ಅಂಧಕಾರವನ್ನು ಚೆದುರಿಸಬೇಕಾದರೆ ಮೇಣಬತ್ತಿಯ ದೀಪ ಪ್ರಾರಂಭದಲ್ಲಿ ಇರುತ್ತದೆ, ಅದನ್ನು ಅನುಸರಿಸಿ ಕಂದೀಲು ದೀಪದಂತಹದು ಬರಬಹುದು ಮತ್ತು ನಂತರ ಸೂರ್ಯನೇ ಬರಬಹುದು, ಆದರೆ ನಂತರದ್ದು ಬರುವುದಕ್ಕಾಗಿ ಪ್ರಾರಂಭಕ್ಕೆ ಅನುವು ಮಾಡಿಕೊಡಬೇಕು ಮತ್ತು ವಿಷಾದ, ಸಂಶಯ ಮತ್ತು ನಿರಾಶೆಗಳ ದೊಡ್ಡ ಪಾಲುಗಳ ಮೂಲಕ ಅದರ ಸ್ವಾಭಾವಿಕ ಉತ್ತರ ಭಾಗಗಳಿಂದ ಕಡಿದುಕೊಳ್ಳ-ಬಾರದು.

ಸರಳ ಗಾಂಭೀರ್ಯದಿಂದ ಅದನ್ನು ಹೀಗೆ ಹೇಳಬಹುದು – ಒಮ್ಮೆ ಮತ್ತು ಎಲ್ಲ ಕಾಲಕ್ಕೆ ಈ ಕಾರ್ಯವನ್ನು ಮಾಡಲೇಬೇಕು, ಪೃಥ್ವಿಯ ಮೇಲೆ ನಿಮಗೆ

ಉಳಿದ ಕಾರ್ಯ ಇದೊಂದೇ. ಅದು ಕಠಿಣವಾದದ್ದು ಮತ್ತು ಮಾರ್ಗ ದೀರ್ಘ-ವಾಗಿರುತ್ತದೆ ಮತ್ತು ಅದಕ್ಕೆ ದೊರೆಯುವ ಪ್ರೋತ್ಸಾಹ ಅತ್ಯಲ್ಪವಾದದ್ದು. ಹಾಗಿದ್ದರೇನು? ಅಷ್ಟೊಂದು ಭವ್ಯವಾದ ಕಾರ್ಯ ಸುಲಭವಾಗಿರಲಿ, ತೀವ್ರಗತಿಯಲ್ಲಿ ಯಶಸ್ಸು ಬರಲಿ ಇಲ್ಲವಾದರೆ ಅದು ಬೇಡವೇ ಬೇಡ, ಎಂದು ನೀವು ನಿರೀಕ್ಷಿಸುವುದೇಕೆ? ತೊಂದರೆಗಳನ್ನು ಎದುರಿಸಬೇಕಾಗಿದೆ. ಅವುಗಳನ್ನು ಪ್ರಸನ್ನಚಿತ್ತದಿಂದ ಎದುರಿಸಿದಾಗ ಅವುಗಳ ಮೇಲೆ ವಿಜಯವನ್ನು ಬೇಗ ಸಾಧಿಸಬಹುದು. ಮಾಡಬೇಕಾದ ಒಂದು ಕಾರ್ಯವೆಂದರೆ ಯಶಸ್ಸಿನ, ಜಯ-ದೊರಕಿಸುವ ನಿರ್ಧಾರದ, ಸ್ಥಿರಪಡಿಸಿದ, ದೃಢ ನಿಶ್ಚಯದ ಒಂದು ಮಂತ್ರವನ್ನು ಇಟ್ಟುಕೊಳ್ಳುವುದಾಗಿದೆ, "ನಾನು ಅದನ್ನು ದೊರಕಿಸಲೇಬೇಕು, ಅದನ್ನು ದೊರಕಿಸಿಯೇ ಬಿಡುವೆ" ಎಂಬುದೇ ಆ ಮಂತ್ರ. ಅಸಾಧ್ಯವಾದದ್ದೇ? ಅಸಾಧ್ಯ-ವಾಗಿರುವ ವಿಷಯವೇ ಇಲ್ಲ - ತೊಂದರೆಗಳಿರುತ್ತವೆ, ಬಹಳ ಶ್ರಮಪಡುವು-ದಿರುತ್ತದೆ, ಆದರೆ ಅಸಾಧ್ಯತೆಗಳಿರುವುದಿಲ್ಲ. ಕೈಕೊಳ್ಳಬೇಕೆಂದು ಮನುಷ್ಯ ಸ್ಥಿರ-ಮನಸ್ಸಿನಿಂದ ನಿರ್ಧರಿಸಿದ್ದನ್ನು ಇಂದು ಅಥವಾ ನಂತರ ಕೈಕೊಳ್ಳಲು ಸಾಧ್ಯವಾಗು-ತ್ತದೆ - ಅದು ಸಾಧ್ಯವಾಗುತ್ತದೆ. ಅಂಧಕಾರವನ್ನುಂಟು ಮಾಡುವ ನಿರಾಶೆಯನ್ನು ಹೊಡೆದೋಡಿಸಿರಿ, ಧೈರ್ಯದಿಂದ ಯೋಗವನ್ನು ಮುಂದುವರಿಸಿಕೊಂಡು ಹೋಗಿರಿ. ಅಂಧಕಾರ ಮಾಯವಾಗುತ್ತಿದ್ದಂತೆ ಆಂತರಿಕ ದ್ವಾರಗಳು ತೆರೆದು-ಕೊಳ್ಳುವವು.

(23/628-29) **- ಶ್ರೀ ಅರವಿಂದರು**

*

## ದೈವೀ ಪ್ರಜ್ಞೆಯೊಂದಿಗೆ ಏಕತೆ

ಅವಿದ್ಯೆಯಲ್ಲಿ ಹೀರಿಕೊಂಡಾಗ ಪ್ರಾಣಿಕ ಆಸೆಗಳ ರೂಪವನ್ನು ತಾಳುವ ಶಕ್ತಿಯೇ ಅದರ ಶುದ್ಧ ರೂಪದಲ್ಲಿ ಪರಿವರ್ತನೆಯತ್ತ ಮುಂದೂಡಲು ಚಲನ-ಶೀಲವಾಗಿರುತ್ತದೆ. ಹಾಗಾಗಿ ನಿಮ್ಮ ಆವಶ್ಯಕತೆಗಳೆಂದು ನೀವು ತೃಪ್ತಿಪಡಿಸಬೇಕಾದ ಆಸೆಗಳಲ್ಲಿ ಮುಕ್ತವಾಗಿ ಲೋಲರಾಗುವುದನ್ನು, ಪ್ರಾಣಿಕ ಶಕ್ತಿ ದುಷ್ಟವಾದದ್ದೆಂದು ತಿರಸ್ಕರಿಸುವುದನ್ನು ಕುರಿತು ಜಾಗರೂಕರಾಗಿರಬೇಕು.

ಭಗವಂತನಿಗೆ ನಿಮ್ಮ ಸತ್ತೆಯ ದ್ವಾರಗಳನ್ನು ವಿಶಾಲವಾಗಿ ತೆರೆದಿರಿಸಬೇಕು. ನೀವು ಏನನ್ನೊ ಮುಚ್ಚಿಟ್ಟ ತಕ್ಷಣ ನೇರವಾಗಿ ಮಿಥ್ಯೆಯಲ್ಲಿ ಪ್ರವೇಶಿಸುತ್ತೀರಿ. ನಿಮ್ಮ



ವತಿಯಿಂದ ಕನಿಷ್ಠ ಪಕ್ಷದ ದಮನ ನಿಮ್ಮನ್ನು ಕೂಡಲೆ ಅಪ್ರಜ್ಞೆಯಲ್ಲಿ ಎಳೆದು ತರುತ್ತದೆ. ನೀವು ಸಂಪೂರ್ಣವಾಗಿ ಪ್ರಜ್ಞೆಯುಳ್ಳವರು ಆಗಬೇಕಾದರೆ ಯಾವಾಗಲೂ ದೈವೀ ಸತ್ಯದ ಸಮ್ಮುಖದಲ್ಲಿರಿ. ನಿಮ್ಮನ್ನು ಸಂಪೂರ್ಣವಾಗಿ ತೆರೆದಿರಿಸಿಕೊಳ್ಳಿರಿ. ಆ ದೈವೀ ಸತ್ಯ ನಿಮ್ಮ ಆಳದೊಳಗೆ ಇಳಿದು ನೋಡಲು ಅನುವು ಮಾಡಿಕೊಡಿರಿ. ಅದು ಮಾತ್ರ ನಿಮ್ಮನ್ನು ಪ್ರಕಾಶ, ಪ್ರಜ್ಞೆ ಹಾಗೂ ಅತ್ಯಂತ ಸತ್ಯವಾದುದರಲ್ಲಿ ಕರೆತರುವುದು. ಸಂಪೂರ್ಣವಾಗಿ ವಿನಮ್ರರಾಗಿರಿ - ಎಂದರೆ ನೀವೇನಾಗಬೇಕಾಗಿದೆಯೋ ಹಾಗೂ ನೀವು ಏನಾಗಿರುವಿರೋ ಅವುಗಳ ನಡು-ವಿರುವ ಅಂತರದತ್ತ ನೋಡಿರಿ. ಒರಟಾದ ಭೌತಿಕ ಮನೋವೃತ್ತಿ ತಾನರಿತು-ಕೊಂಡಿರದೆ ಇದ್ದುದನ್ನು ಅರಿತುಕೊಂಡಿದೆ ಎಂದು ಯೋಚಿಸುತ್ತದೆ, ತಾನು ತೀರ್ಮಾನಿಸಲಾಗದ್ದನ್ನು ಕುರಿತು ತೀರ್ಮಾನ ನೀಡುತ್ತದೆ. ಈ ಪ್ರಾಣಿಕ ಮನೋ-ವೃತ್ತಿಗೆ ಅನುವು ಮಾಡಿಕೊಡಬೇಡಿರಿ. ಭಗವಂತನಿಗೆ ನಿಮ್ಮನ್ನು ಹೃತ್ಪೂರ್ವಕವಾಗಿ ಒಪ್ಪಿಸಿಬಿಡಬೇಕೆಂದು ಮತ್ತು ಅವನ ಸಹಾಯ ಯಾಚಿಸಬೇಕು, ಅವನ ಅಧೀನತೆಗೆ ಒಳಗಾಗಿ ಸ್ವಾತಂತ್ರ್ಯಗಳಿಸಬೇಕು, ಜವಾಬ್ದಾರಿ ಕಳೆದುಕೊಳ್ಳಬೇಕು ಎಂದು ವಿನಮ್ರತೆ ಸೂಚಿಸುತ್ತದೆ. ಅದು ಮನಸ್ಸಿಗೆ ಅತ್ಯಂತ ಅಂಚಚಲತೆಯನ್ನು ತಂದು-ಕೊಡುತ್ತದೆ. ಹಾಗೆ ಮಾಡದೆ ಹೋದರೆ ಭಗವಂತನ ಪ್ರಜ್ಞೆಯೊಡನೆ, ಸಂಕಲ್ಪ-ದೊಡನೆ ಏಕತೆಯನ್ನು ಸಿದ್ಧಿಸಿಕೊಳ್ಳುವ ಭರವಸೆ ಹೊಂದಲಾರಿರಿ.

ನಿಮ್ಮ ಯೋಚನೆಯ ಇಲ್ಲವೆ ಕ್ರಿಯೆಯ ಬಾಹ್ಯ ಏಕರೂಪತೆ ಮಾತ್ರದಿಂದ ಭಗವಂತನೊಡನೆ ಏಕತೆಯನ್ನು ಸಿದ್ಧಿಸಿಕೊಳ್ಳಲಾಗಿದೆ ಎಂದು ತಿಳಿದುಕೊಳ್ಳದೆ ಇರುವುದರತ್ತ ಗಮನ ಕೊಡಬೇಕು. ಇಂತಹ ಎಲ್ಲ ಸಾಕ್ಷ್ಯಗಳು ಮೇಲು ಮೇಲಿನ-ವಾಗಿರುತ್ತವೆ. ನಿಜವಾದ ಏಕತೆಯ ಅರ್ಥ ಆದ್ಯಂತ ಬದಲಾವಣೆ ಆಗುವುದಾಗಿದೆ, ಇಡಿಯಾಗಿ ನಿಮ್ಮ ಸಾಮಾನ್ಯ ಪ್ರಜ್ಞೆಯಲ್ಲಿ ಹಿಮ್ಮೊಗವಾಗುವುದಾಗಿದೆ, ಅದನ್ನು ನಿಮ್ಮ ಮನಸ್ಸಿನಲ್ಲಿ ಇಲ್ಲವೆ ಅರಿವಿನ ಸಾಮಾನ್ಯ ಸ್ಥಿತಿಯಲ್ಲಿ ದೊರಕಿಸಲಾಗದು. ಇಂತಹ ಸಾಮಾನ್ಯ ಸ್ಥಿತಿಯಿಂದ ನೀವು ಪೂರ್ತಿಯಾಗಿ ಹೊರಗೆ ಬರಬೇಕು. ಹಾಗಾದ ನಂತರವಷ್ಟೆ ನೀವು ದೈವೀ ಪ್ರಜ್ಞೆಯೊಂದಿಗೆ ಏಕತೆ ಪಡೆಯಬಲ್ಲಿರಿ. ಒಮ್ಮೆ ಏಕರೂಪತೆಯನ್ನು ನನ್ನೊಡನೆ ಆಗುವುದರೊಂದಿಗೆ ನೋಡಿದಾಗ ಅದು ನಗು ತರಿಸುತ್ತದೆ. ಹಲವಾರು ವರ್ಷಗಳ ಕಾಲ ಒಂದೇ ಮನೆಯಲ್ಲಿ ವಾಸಿಸುವ ಜನರು ಇಲ್ಲವೆ ಪ್ರತಿದಿನ ನಿಕಟ ಸಂಪರ್ಕದಲ್ಲಿ ಬರುವ ಜನರು ಒಂದು ಬಗೆಯ ಸಾಮಾನ್ಯ ಮನೋಭಾವವನ್ನು ಬೆಳೆಸಿಕೊಂಡಿರುತ್ತಾರೆ. - ಅವರು ಒಂದೇ ರೀತಿಯಲ್ಲಿ ಯೋಚಿಸುತ್ತಾರೆ, ಕಾರ್ಯ ಕೈಕೊಳ್ಳುತ್ತಾರೆ. ಆದರೆ ಭಗವಂತನೊಡನೆ ಕೇವಲ

ಅಂತಹ ಮಾನಸಿಕ ಸಂಪರ್ಕದೊಂದಿಗೆ ನೀವು ಆ ರೀತಿಯವರಾಗಿರುವಿರಿ ಎಂದು ಹಕ್ಕು ಸಾಧಿಸಲಾರಿರಿ. ನಿಮ್ಮ ಪ್ರಜ್ಞೆ ಇಡಿಯಾಗಿ ಹಿಮ್ಮೊಗವಾಗುವುದನ್ನು ನೀವು ಒಪ್ಪಿಕೊಳ್ಳಬೇಕು. ನಿಮ್ಮ ಪ್ರಜ್ಞೆಯ ಗುಣಧರ್ಮ, ಕಾರ್ಯಮಾಡುವ ರೀತಿ ಭಗವಂತನಂತಹದು ಆದಾಗ ಮತ್ತು ಅದು ಅತಿಮಾನಸ ಮೂಲದಿಂದ ಹೊರ–ಹೊಮ್ಮಿದಾಗ ನೈಜ ಚಿಹ್ನೆಯಾಗಿರುತ್ತದೆ. ಬಾಹ್ಯ ಕ್ಷೇತ್ರದಲ್ಲಿ ಭಗವಂತ ಕೈಕೊಳ್ಳ–ಬಹುದಾದ ರೀತಿಯಲ್ಲಿ ಕಾರ್ಯಮಾಡಿದಾಗ, ಅದು ಕಾಕತಾಳೀಯವಾಗಿರ–ಬಹುದಲ್ಲದೆ ಬೇರೇನೂ ಆಗಿರಲಾರದು. ಇಂತಹ ಹೋಲಿಕೆಗಳಿಂದ ಭಗವಂತ–ನೊಂದಿಗೆ ಏಕತೆಯಾಗಿದೆ ಎಂದು ಸಮರ್ಥಿಸಿಕೊಳ್ಳುವುದು ದೊಡ್ಡ ಕಾರ್ಯ ಮಾಡುವುದಿರುವಾಗ ಚಿಕ್ಕದೊಂದು ಕಾರ್ಯಮಾಡಿ ಅದನ್ನು ಸಾಧಿಸಿದೆವೆಂದು ಸಮರ್ಥಿಸಿಕೊಳ್ಳುವ ಹಾಗಿರುತ್ತದೆ.

ನೀವು ಮಾಡುವುದೆಲ್ಲದರಲ್ಲಿ ಭಗವಂತನ ದೈವೀ ಪ್ರಜ್ಞೆಯನ್ನು ಅನುಭವಕ್ಕೆ ತಂದುಕೊಳ್ಳುವುದು ನಿಜವಾದ ಸೂಕ್ಷ್ಮ ಪರೀಕ್ಷೆ. ಅದು ನಿಸ್ಸಂದಿಗ್ಧ ಸೂಕ್ಷ್ಮ ಪರೀಕ್ಷೆ ಏಕೆಂದರೆ ಅದು ನಿಮ್ಮ ಸತ್ತೆ ಪೂರ್ತಿ ಬದಲಾಗುವಂತೆ ಮಾಡುತ್ತದೆ. ಸ್ಪಷ್ಟವಾಗಿ ನೀವು ದೈವೀ ಪ್ರಜ್ಞೆಯಲ್ಲಿ ಇದ್ದಕ್ಕಿದ್ದಂತೆ ಸ್ಥಿರಗೊಳ್ಳಲಾರಿರಿ, ಆದರೆ ಅದು ನಿಮ್ಮಲ್ಲಿ ನೆಲೆಸುವುದಕ್ಕಿಂತ ಮೊದಲು ಆಗೀಗ ಅದರ ಅನುಭವ ಪಡೆಯಬಹುದು. ದೈವೀ ಪ್ರಜ್ಞೆ ಬರುತ್ತದೆ, ಹೊರಟು ಹೋಗುತ್ತದೆ, ಆದರೆ ಏಕತೆ ಉಳಿದುಕೊಂಡಾಗ ನೀವು ಬೇರೆ ಇನ್ನಾರೋ ಆಗಿರುತ್ತೀರಿ, ಇಡೀ ವಿಶ್ವ ಹೊಸ ಮುಖ ಧರಿಸುವುದು, ನೀವೇ ಸ್ವತಃ ಹಾಗೂ ವಸ್ತು–ವಿಷಯಗಳನ್ನು ಕುರಿತು ನಿಮ್ಮ ಗ್ರಹಿಕೆ ಹಾಗೂ ದೃಷ್ಟಿ ರೂಪಾಂತರಗೊಳ್ಳುತ್ತವೆ. ಆ ಅನುಭವದ ಕೊರತೆ ಇರುವವರೆಗೆ ನೀವು ಪ್ರಮಾಣ–ಗಳನ್ನು ಕಂಡುಕೊಳ್ಳಲು ಬಯಸುವಿರಿ, ಪ್ರಮಾಣಗಳು ಹಾಗೂ ಪರಿಣಾಮಗಳು ಗೌಣವಾದವುಗಳು.

(3/133–34) – **ಶ್ರೀಮಾತೆ**

*

## ದೈವೀ ಸಂಕಲ್ಪದೊಡನೆ ಏಕತೆ

ದೈವೀ ಕರ್ಮಗಳನ್ನು ಕೈಕೊಳ್ಳುವ ನಿಜವಾದ ಕಾರ್ಯಕರ್ತ ನೀನಾಗ–ಬೇಕಾದರೆ ನಿನ್ನ ಮೊದಲ ಗುರಿ ಆಸೆ, ಸ್ವ–ಹಿತಚಿಂತಕ ಅಹಂಕಾರ ಇವುಗಳಿಂದ ಮುಕ್ತವಾಗಿರಬೇಕು. – ನಿನ್ನ ಸಂಕಲ್ಪ ಹಾಗೂ ದೈವೀ ಸಂಕಲ್ಪ ಇವುಗಳಲ್ಲಿ ಯಾವ ಭಿನ್ನತೆಯೂ ಉಳಿಯದಂತಾಗುವವರೆಗೆ ದೈವೀ ಸಂಕಲ್ಪ ಪ್ರೇರಿಸಿದ ಪ್ರೇರಣೆ–ಯಲ್ಲದೆ ಬೇರಾವ ಪ್ರೇರಣೆ ಇಲ್ಲದಾಗುವವರೆಗೆ, ನಿನ್ನಲ್ಲಿ ಮತ್ತು ನಿನ್ನ ಮೂಲಕ ಆ



ಸಂಕಲ್ಪದ ಪ್ರಜ್ಞಾಪೂರ್ಣ ಕ್ರಿಯೆಯಲ್ಲದೆ ಬೇರಾವ ಕ್ರಿಯೆ ಇಲ್ಲದಂತಾಗುವವರೆಗೆ ನಿನ್ನ ಪ್ರಜ್ಞೆಯಲ್ಲಿ ಬೆಳೆಯಬೇಕು.

ಒಂದು ಸಮಯ ಬರುತ್ತದೆ, ಆಗ ದೈವೀ ಶಕ್ತಿ ನಿನಗೆ ಕೇವಲ ಉತ್ತೇಜನ ಹಾಗೂ ಮಾರ್ಗದರ್ಶನ ಇವುಗಳನ್ನಷ್ಟೇ ನೀಡುತ್ತಿರುವುದಿಲ್ಲ, ಆದರೆ ನಿನ್ನ ಕಾರ್ಯಗಳನ್ನು ಪ್ರಾರಂಭಿಸುತ್ತದೆ ಹಾಗೂ ನಿರ್ವಹಿಸುತ್ತದೆ ಎಂಬ ಅರಿವು ನಿನ್ನಲ್ಲಿ ಮೂಡುತ್ತದೆ. ಎಲ್ಲ ಚಲನೆಗಳಿಗೆ ಆ ಶಕ್ತಿಯೇ ಮೂಲವಾಗಿರುತ್ತದೆ, ನಿನ್ನ ಎಲ್ಲ ಸಾಮರ್ಥ್ಯಗಳು ಆ ಶಕ್ತಿಯವಾಗಿರುತ್ತವೆ, ಮನಸ್ಸು ಪ್ರಾಣ ಹಾಗೂ ದೇಹ ಇವು ಆ ಶಕ್ತಿಯ ಕ್ರಿಯೆಯ ಪ್ರಜ್ಞಾಪೂರ್ಣ ಮತ್ತು ಸಂತೋಷದಿಂದಿರುವ ಉಪಕರಣ–ಗಳಾಗಿರುತ್ತವೆ, ಆ ಶಕ್ತಿಯ ಲೀಲೆಯ ಸಾಧನಗಳಾಗಿರುತ್ತವೆ, ಭೌತಿಕ ಜಗತ್ತಿನಲ್ಲಿ ಆ ಶಕ್ತಿಯ ಪ್ರಕಟಣೆಯ ಎರಕಗಳಾಗಿರುತ್ತವೆ.

ನೀನು ಸಂಪೂರ್ಣವಾಗಿ ದೈವೀ ಮಾತೆಯೊಡನೆ ನಿನ್ನನ್ನು ಗುರುತಿಸಿ–ಕೊಂಡಾಗ, ಮತ್ತು ನೀನು ಇನ್ನೊಬ್ಬ ಪ್ರತ್ಯೇಕ ಸತ್ತೆಯೆಂಬ ಭಾವನೆ ಬರದಂತಾ–ದಾಗ, ಉಪಕರಣ, ಇಲ್ಲವೆ ಸೇವಕ, ಕಾರ್ಯಕರ್ತ ಎಂದಾಗಿರದೆ ನಿಜವಾಗಿ ಅವರ ಮಗು, ಅವರ ಪ್ರಜ್ಞೆಯ ಹಾಗೂ ಶಕ್ತಿಯ ಸನಾತನ ಭಾಗ ಎಂದಾದಾಗ ಈ ಪರಿಪೂರ್ಣತೆಯ ಕೊನೆಯ ಹಂತ ಬರುತ್ತದೆ. ಯಾವಾಗಲೂ ಅವರು ನಿನ್ನಲ್ಲಿರುತ್ತಾರೆ, ನೀನು ಅವರಲ್ಲಿ ಇರುವಿ, ನಿನ್ನ ಯೋಚನೆ, ನೋಡುವ ರೀತಿ, ಮತ್ತು ಕ್ರಿಯೆ, ನಿನ್ನ ಉಸಿರಾಟ ಮತ್ತು ಚಲನೆಗಳು ಕೂಡ ಆ ದೈವೀ ಮಾತೆಯ ಮೂಲಕ ಬರುತ್ತವೆ ಮತ್ತು ಅವರದೇ ಆಗಿವೆ ಎಂಬುದು ನಿನ್ನ ಸತತ, ಸರಳ ಹಾಗೂ ಸ್ವಾಭಾವಿಕ ಅನುಭವವಾಗುತ್ತದೆ. ನೀನು ಅವರೊಳಗಿಂದ ಅವರಿಂದಲೇ ರೂಪುಗೊಂಡ ಲೀಲೆಗಾಗಿರುವ ವ್ಯಕ್ತಿ, ಸಾಮರ್ಥ್ಯ, ಆದಾಗ್ಯೂ ಅವರಲ್ಲಿ ಸುರಕ್ಷಿತನಾಗಿರುವವನು, ಅವರ ಸತ್ತೆಯ ಸತ್ತೆ, ಅವರ ಪ್ರಜ್ಞೆಯ ಪ್ರಜ್ಞೆ, ಅವರ ಶಕ್ತಿಯ ಶಕ್ತಿ, ಅವರ ಆನಂದದ ಆನಂದ ಇವೆಲ್ಲ ಆದವನು ಎಂಬುದನ್ನು ತಿಳಿದುಕೊಳ್ಳುವಿ, ನೋಡುವಿ ಮತ್ತು ಭಾವನೆಗೆ ತಂದುಕೊಳ್ಳುವಿ. ಈ ಸ್ಥಿತಿ ಇಡಿಯದಾದಾಗ ಮತ್ತು ಅವರ ಅತಿಮಾನಸ ಚೈತನ್ಯಗಳು ಮುಕ್ತವಾಗಿ ನಿನ್ನನ್ನು ಚಾಲನೆಗೊಳಪಡಿಸಿದಾಗ ನೀನು ದೈವೀ ಕರ್ಮಗಳಲ್ಲಿ, ಜ್ಞಾನದಲ್ಲಿ, ಸಂಕಲ್ಪದಲ್ಲಿ, ಕ್ರಿಯೆಯಲ್ಲಿ ಪರಿಪೂರ್ಣನಾಗುವಿ, ನಿಶ್ಚಿತತೆ ಹೊಂದುವಿ, ಸರಳ, ಪ್ರಕಾಶಮಯ, ಸಹಜ, ದೋಷರಹಿತ, ಪರಮೋಚ್ಚನಿಂದ ಹೊರಹರಿದು ಬಂದವನು, ಸನಾತನನ ದೈವೀ ಚಲನೆಯಾದವನು ಆಗುವಿ.

(25/15–18) – **ಶ್ರೀ ಅರವಿಂದರು**

*

## ಪರಿಪೂರ್ಣ, ಆದರೆ ಭಾಗಶಃ ತಾದಾತ್ಮ್ಯ

**ಪ್ರಶ್ನೆ :** *ಶ್ರೀಮಾತೆಯವರೆ, ಮನುಷ್ಯ ತನ್ನ ಸತ್ತೆಯ ಉಚ್ಚಭಾಗಗಳಲ್ಲಿ ಭಗವಂತ-ನೊಡನೆ ತನ್ನನ್ನು ತಾದಾತ್ಮ್ಯಗೊಳಿಸಿಕೊಂಡಾಗ ನಿಮ್ನತರ ಭಾಗಗಳಲ್ಲಿ ಅದನ್ನು ನಿರ್ಲಕ್ಷಿಸಿದಾಗ – ಜೀವನದಲ್ಲಿ ನಿರ್ಲಕ್ಷಿಸಿದಾಗ – ಭಗವಂತ ತನ್ನೊಡನೆ ತಾದಾತ್ಮ್ಯ ಹೊಂದಿದ ಅವನ ಉಚ್ಚತರ ಭಾಗಗಳಿಂದ ಮನುಷ್ಯ ತನ್ನ ನಿಮ್ನತರ ಭಾಗಗಳತ್ತ ಲಕ್ಷ್ಯಕೊಡಲು ಅವನಿಗೆ ಉಪದೇಶ ನೀಡುವುದಿಲ್ಲವೆ?*

**ಶ್ರೀಮಾತೆ :** ಯೋಗವನ್ನು ಪ್ರಾರಂಭಿಸುವುದಕ್ಕಿಂತ ಮೊದಲು ಮನುಷ್ಯ ಇಂತಹದು ಸಂಭವಿಸಬಾರದು ಎಂದು ನಿರ್ಧರಿಸಿದ್ದರೆ ಭಗವಂತನಿಂದ ಆ ಬಗೆಯ ಉಪದೇಶ ಪಡೆಯುವುದನ್ನು ಅಸಾಧ್ಯವಾದದ್ದನ್ನಾಗಿ ಮಾಡುತ್ತದೆ.

ಏಕೆಂದರೆ, ನಿಜ ಹೇಳುವುದಾದರೆ, ಪ್ರತಿಯೊಬ್ಬನೂ ಭಗವಂತನ ಬಗ್ಗೆ ಏನನ್ನು ಕಂಡುಕೊಳ್ಳಲು ಬಯಸುತ್ತಾನೋ ಅದನ್ನು ಕಂಡುಕೊಳ್ಳುತ್ತಾನೆ. ಶಬ್ದ-ಗಳಲ್ಲಿ ಬದಲಾವಣೆ ಮಾಡಿ ಶ್ರೀ ಅರವಿಂದರು ಇದನ್ನೇ ಹೇಳಿದ್ದಾರೆ. ನಾನು ನಿಖರವಾಗಿ ಅವರ ಶಬ್ದಗಳನ್ನು ಉಲ್ಲೇಖಿಸುತ್ತಿಲ್ಲ, ಆದರೆ ಅವುಗಳಲ್ಲಿರುವ ವಿಚಾರ ಕುರಿತು ಹೇಳುತ್ತಿದ್ದೇನೆ: "ನೀವು ಭಗವಂತನಿಂದ ಏನನ್ನು ನಿರೀಕ್ಷಿ-ಸುತ್ತೀರೋ ಅದನ್ನು ಅವನಿಂದ ಪಡೆಯುತ್ತೀರಿ, ಅವನಿಂದ ಬಯಸಿದ್ದನ್ನು ಅವನಲ್ಲಿ ಸಂಧಿಸುತ್ತೀರಿ. ನೀವು ನಿರೀಕ್ಷಿಸುವ ಇಲ್ಲವೆ ಬಯಸುವ ಮುಖವನ್ನು ಅವನು ತೋರಿಸುತ್ತಾನೆ."

ಮತ್ತು ಭಗವಂತನ ಪ್ರಕಟಣೆ ಯಾವಾಗಲೂ ಪ್ರತಿಯೊಬ್ಬನ ಸ್ವೀಕಾರ-ಯೋಗ್ಯತೆ ಮತ್ತು ಕ್ಷಮತೆಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತದೆ. ಜನರು ನಿಜವಾದ ಮತ್ತು ಸಾರಭೂತ ಸಂಪರ್ಕ ಪಡೆಯಬಹುದು, ಆದರೆ ಆ ಸಂಪರ್ಕ-ವನ್ನು ಅವರು ಪಡೆಯುವ ರೀತಿ, ಅವರು ಅವನನ್ನು ಸಮೀಪಿಸುವುದರಲ್ಲಿರುವ ಕ್ಷಮತೆ ಇವುಗಳಿಂದ ಸೀಮಿತವಾಗಿರುತ್ತದೆ. . . . ನೀವು ಈ ಎಲ್ಲ ಸೀಮಿತತೆಗಳನ್ನು ಮೀರಿ ಹೋಗಬಲ್ಲಿರಾದರೆ ಭಗವಂತ ಇಡಿಯಾಗಿ ಇರುವ ರೀತಿಯಲ್ಲಿ ಅವನನ್ನು ಇಡಿಯಾಗಿ ಸಂಧಿಸಬಲ್ಲಿರಿ.

ಸಂಪರ್ಕ ಪಡೆಯುವುದರಲ್ಲಿರುವ ಈ ಕ್ಷಮತೆಯೇ ಬಹುಶಃ ಸತ್ತೆಗಳಲ್ಲಿ ನಿಜವಾದ ಶ್ರೇಣಿ ವ್ಯವಸ್ಥೆಯನ್ನು ರಚಿಸುತ್ತದೆ. ಏಕೆಂದರೆ ಪ್ರತಿಯೊಬ್ಬನು ತನ್ನಲ್ಲಿ ಭಗವಂತನನ್ನು ಕೊಂಡೊಯ್ಯುತ್ತಾನೆ ಮತ್ತು ಆ ಕಾರಣದಿಂದಾಗಿ ಪ್ರತಿಯೊಬ್ಬನಿಗೆ ಭಗವಂತನೊಡನೆ ಏಕತೆ ಪಡೆಯುವ ಸಾಧ್ಯತೆ ಇರುತ್ತದೆ. – ಆ ಸಾಧ್ಯತೆ ಎಲ್ಲರಲ್ಲೂ



ಒಂದೇ ಬಗೆಯದಾಗಿದೆ. ಆದರೆ ಪ್ರತಿಯೊಬ್ಬನ ಕ್ಷಮತೆಯ ಪ್ರಕಾರ – ವಾಸ್ತವದಲ್ಲಿ ದೈವೀ ಶ್ರೇಣಿ ವ್ಯವಸ್ಥೆಯಲ್ಲಿ ಅವನ ಸ್ಥಾನದ ಪ್ರಕಾರ – ಅವನ ಸಮೀಪಿಸುವಿಕೆ ಭಾಗಶಃ ಇಲ್ಲವೆ ಇಡಿಯಾದದ್ದು ಆಗಿರುತ್ತದೆ.

ಈ ಶಬ್ದಗಳು ವಿಷಯಗಳನ್ನು ಬಹಳಷ್ಟು ವಿರೂಪಗೊಳಿಸಬಹುದಾದರೂ ಪ್ರತಿಯೊಬ್ಬನ ಸತ್ತೆಯಲ್ಲಿ ಸಮೀಪಿಸುವ ಗುಣ ಒಂದೇ ಆಗಿರುತ್ತದೆ, ಆದರೆ ಸಮೀಪಿಸುವಿಕೆಯ ಗಾತ್ರ, ಇಡಿಯಾಗಿರುವಿಕೆ ಭಿನ್ನವಾಗಿರುತ್ತವೆ ಎಂದು ಹೇಳ-ಬಹುದು. ಅದನ್ನು ಶಬ್ದಗಳಲ್ಲಿ ವಿವರಿಸುವುದು ಬಹಳ ಕಠಿಣ. ಆದರೆ ಅದನ್ನು ಕುರಿತು ಹೇಳುವುದಾದರೆ ನೀವು ಭಗವಂತನೊಡನೆ ಯಾವ ಭಾಗದಲ್ಲಿ ನಿಮ್ಮನ್ನು ಗುರುತಿಸಿಕೊಂಡಿರುತ್ತೀರೋ ಅದು ಪರಿಪೂರ್ಣವಾಗಿರುತ್ತದೆ ಎಂದರೆ, ಆ ಭಾಗದಲ್ಲಿ ಗುರುತಿಸಿಕೊಳ್ಳುವಿಕೆ ಪರಿಪೂರ್ಣವಾಗಿರುತ್ತದೆ, ಆದರೆ ಗುರುತಿಸಿ-ಕೊಳ್ಳಬೇಕಾದ ಭಾಗಗಳ ಸಂಖ್ಯೆ ಭವ್ಯವಾಗಿ ಭಿನ್ನವಾಗಿರುತ್ತದೆ.

ಭಗವಂತನನ್ನು ಸಮೀಪಿಸುವ ಮಾರ್ಗಗಳ ಮಧ್ಯದಲ್ಲಿರುವ ವ್ಯತ್ಯಾಸ ಬಹಳ ಗಮನಾರ್ಹವಾಗಿದೆ. ಸಾಮಾನ್ಯವಾಗಿ ಜನರು ಮಿತಿಗಳನ್ನಿರಿಸಿಕೊಳ್ಳುತ್ತಾರೆ. ಅವರು ಆಯ್ದುಕೊಂಡ ಮಾರ್ಗಕ್ಕೆ ಸೇರಿರದ ಪ್ರತಿಯೊಂದನ್ನು ಹೊರಗಿರಿಸುವುದರ ಮೂಲಕ ತಮಗೆ ಮಿತಿಗಳನ್ನು ಕಲ್ಪಿಸಿಕೊಳ್ಳುತ್ತಾರೆ, ಏಕೆಂದರೆ ಇದು ಬಹಳ ಸುಲಭವಾದದ್ದು ಮತ್ತು ಅವರು ತಮ್ಮ ಮಾರ್ಗದಲ್ಲಿ ತೀವ್ರಗತಿಯಿಂದ ಸಾಗುತ್ತಾರೆ – ಸಾಪೇಕ್ಷವಾಗಿ, ಆದರೆ ಒಂದು ಮಾರ್ಗವನ್ನು ಅನುಸರಿಸುವುದರ ಬದಲಾಗಿ ಗೋಲಾಕಾರದ್ದೆಂದು ಕರೆಯಬಹುದಾದ, ಪ್ರತಿಯೊಂದು ಮಾರ್ಗವನ್ನು ಒಳ-ಗೊಂಡ, ಭಗವಂತನನ್ನು ಸಮೀಪಿಸುವ ಎಲ್ಲ ಸಾಧ್ಯತೆಗಳನ್ನು ಒಳಗಿರಿಸಿಕೊಂಡ ಚಲನೆಯಿಂದ ಮುಂದೆ ಸಾಗಿದರೆ, ಸ್ವಾಭಾವಿಕವಾಗಿ ಪರಿಣಾಮ ಹೆಚ್ಚು ಸಂಪೂರ್ಣವಾಗಿರುತ್ತದೆ, ಅದನ್ನೇ ಶ್ರೀ ಅರವಿಂದರು ಸಮಗ್ರ ಯೋಗ ಎಂದು ಕರೆದಿದ್ದಾರೆ, ಆದರೆ ಆ ಮಾರ್ಗದಲ್ಲಿ ಪ್ರಗತಿ ಸಾಧಿಸುವುದು ಬಹಳ ಕಠಿಣವಾದದ್ದು ಮತ್ತು ನಿಧಾನವಾದದ್ದು.

ಜ್ಞಾನದ ಮಾರ್ಗವನ್ನು ಆಯ್ದುಕೊಂಡವರು – ಜ್ಞಾನ ಮಾರ್ಗದಲ್ಲಿಯೂ ಕೂಡ ಪ್ರತಿಯೊಬ್ಬನು ತನ್ನದೇ ವಿಧಾನವನ್ನು ಆಯ್ದುಕೊಳ್ಳಬಹುದು – ಮತ್ತು ಅನುಸರಿಸುವವರು ತಮ್ಮ ಪ್ರಜ್ಞೆಯಿಂದ ಎಲ್ಲ ಜೀವನ ಹಾಗೂ ಜ್ಞಾನವಲ್ಲದ್ದನ್ನು ತ್ಯಾಗ ಮಾಡಿ ಬಹಳ ತೀವ್ರಗತಿಯಿಂದ ಮುಂದುವರಿಯುತ್ತಾರೆ, ಏಕೆಂದರೆ ಭಗವಂತನ ಕೇವಲ ಒಂದು ಮುಖವನ್ನು ಅರಸುತ್ತಿರುತ್ತಾರೆ. ಇದು ಹೆಚ್ಚು ನೇರವಾದದ್ದು ಹಾಗೂ ಕೂಡಲೆ ಆಗುವಂತಹದು, ಹಾಗಾಗಿ ಅವರು ಜ್ಞಾನ-

ವಲ್ಲದ್ದನ್ನೆಲ್ಲ ತಿರಸ್ಕರಿಸುತ್ತಾರೆ ಮತ್ತು ತಮ್ಮ ಸತ್ತೆಯನ್ನು ತಾವು ಸಾಗಿ ಹೋಗುತ್ತಿರುವ ಒಂದು ಮಾರ್ಗಕ್ಕೆ ಸೀಮಿತಗೊಳಿಸುತ್ತಾರೆ. ನಿಮ್ಮ ಸಮೀಪಿಸುವಿಕೆ ಹೆಚ್ಚು ಸಮಗ್ರವಾಗಲಿ ಎಂದು ಬಯಸಿದಂತೆ ಸ್ವಾಭಾವಿಕವಾಗಿ ಅದು ಹೆಚ್ಚು ಕಠಿಣ, ಸಂಕೀರ್ಣ, ದೀರ್ಘವಾದದ್ದು ಮತ್ತು ಶ್ರಮದಾಯಕವಾದದ್ದು ಆಗುತ್ತದೆ.

ಆದರೆ ಒಂದೇ ಮಾರ್ಗವನ್ನು ಅನುಸರಿಸುವವನು ತನ್ನ ಗುರಿಯನ್ನು ತಲುಪಿದಾಗ ಎಂದರೆ ಭಗವಂತನೊಂದಿಗೆ ತಾದಾತ್ಮ್ಯ ಹೊಂದಿದಾಗ, ಆ ತಾದಾತ್ಮ್ಯ ತನ್ನಲ್ಲಿಯೇ ಪರಿಪೂರ್ಣವಾಗಿರುತ್ತದೆ, ಅದರರ್ಥ ಅದು ನಿಜವಾಗಿ ಭಗವಂತನೊಡನೆ ತಾದಾತ್ಮ್ಯ ಹೊಂದಿರುವುದಾಗಿರುತ್ತದೆ – ಆದರೆ ಅದು ಭಾಗಶಃವಾದದ್ದು. ಅದು ಪರಿಪೂರ್ಣವಾದದ್ದು, ಏಕಕಾಲಕ್ಕೆ ಪರಿಪೂರ್ಣ ಹಾಗೂ ಭಾಗಶಃವಾದದ್ದು.

ಇದಕ್ಕೆ ವಿವರಣೆ ನೀಡುವುದು ಕಠಿಣವಾದದ್ದು, ಆದರೆ ಅದು ವಾಸ್ತವ ಸಂಗತಿ. ಅವನು ನಿಜವಾಗಿ ಭಗವಂತನೊಡನೆ ತಾದಾತ್ಮ್ಯ ಪಡೆದಿರುತ್ತಾನೆ. ಮತ್ತು ಭಗವಂತನನ್ನು ಕಂಡುಕೊಂಡಿರುತ್ತಾನೆ – ಅವನು ಭಗವಂತನೊಡನೆ ಒಂದು ಭಾಗದಲ್ಲಿ ತಾದಾತ್ಮ್ಯ ಪಡೆದಿರುತ್ತಾನೆ. ಹಾಗಾಗಿ ಇಡಿಯಾಗಿ ತನ್ನನ್ನು ಭಗವಂತನೊಡನೆ ತಾದಾತ್ಮ್ಯಗೊಳಿಸಿಕೊಳ್ಳುವವನು, ಅವಶ್ಯವಾಗಿ ವಿಶ್ವಂಭರ ಸಿದ್ಧಿಯ ದೃಷ್ಟಿಕೋನದಿಂದ, ಒಂದು ಭಾಗದಲ್ಲಿ ತಾದಾತ್ಮ್ಯಗೊಳಿಸಿಕೊಂಡವನಿಗಿಂತ ಶ್ರೇಣಿ ವ್ಯವಸ್ಥೆಯಲ್ಲಿ ಬಹಳ ಉಚ್ಚಸ್ತರದಲ್ಲಿರುತ್ತಾನೆ.

ಮತ್ತು ಅದು ಆಧ್ಯಾತ್ಮಿಕ ಶ್ರೇಣಿ ವ್ಯವಸ್ಥೆಯ ನಿಜವಾದ ಅರ್ಥ. ಈ ಕಾರಣದಿಂದಾಗಿಯೆ ಆಧ್ಯಾತ್ಮಿಕ ಶ್ರೇಣಿ ವ್ಯವಸ್ಥೆಯ ಇಡೀ ಸಂಘಟನೆ ಇರುತ್ತದೆ, ಹಾಗಿರದೆ ಇದ್ದರೆ ಅದಕ್ಕೆ ಅರ್ಥವಿರುತ್ತಿರಲಿಲ್ಲ. ಏಕೆಂದರೆ ನೀವು ಭಗವಂತನನ್ನು ಸ್ಪರ್ಶಿಸಿದ ಕ್ಷಣದಿಂದ ಅವನನ್ನು ಪರಿಪೂರ್ಣವಾಗಿ ಸ್ಪರ್ಶಿಸುತ್ತಿರುತ್ತೀರಿ. ನೀವು ಸ್ಪರ್ಶಿಸಿದ ಭಾಗ ತನ್ನಲ್ಲಿ ಪರಿಪೂರ್ಣವಾಗಿರುತ್ತದೆ. ಮತ್ತು ಈ ದೃಷ್ಟಿಕೋನದಿಂದ ಭಗವಂತನೊಡನೆ ತಾದಾತ್ಮ್ಯ ಪಡೆದ ಎಲ್ಲರೂ ಸರಿಸಮವಾಗಿ ತಮ್ಮ ಏಕತೆಯಲ್ಲಿ ಪರಿಪೂರ್ಣರಾಗಿರುತ್ತಾರೆ – ಆದರೆ ಸಮಾನವಾಗಿ ಸಂಪೂರ್ಣ ರೀತಿಯಲ್ಲಲ್ಲ, ಹಾಗೆ ನಾನು ಹೇಳಬಹುದು.

ನಾನು ಹೇಳಿದುದರ ಅರ್ಥ ಸ್ವಲ್ಪವಾದರೂ ನಿಮಗಾಗುತ್ತಿದೆಯೆ?

**ಪ್ರಶ್ನೆ :** *ತಾದಾತ್ಮ್ಯ ಪಡೆದುಕೊಂಡ ಜನರು, ಆ ತಾದಾತ್ಮ್ಯ ಸಂಪೂರ್ಣವಾಗಿಲ್ಲ ಎಂದರೆ ಅವರು ತಮ್ಮ ಹಿಂದೆ ತಾದಾತ್ಮ್ಯ ಪಡೆದುಕೊಳ್ಳಬೇಕಾದ ತಮ್ಮ ಸತ್ತೆಯ ಇತರ ಭಾಗಗಳನ್ನು ಬಿಟ್ಟು ಬಂದಿದ್ದಾರೆ ಮತ್ತು ತಾದಾತ್ಮ್ಯ ಪಡೆದುಕೊಳ್ಳುವುದನ್ನು*



*ಮತ್ತೆ ಪ್ರಾರಂಭಿಸಬೇಕು ಎಂಬುದನ್ನು ಅವರು ಕಂಡುಕೊಳ್ಳುತ್ತಾರೆಯೆ? ಶ್ರೀಮಾತೆಯವರೆ, ನಾನು ಇದನ್ನು ನಿಮ್ಮಿಂದ ತಿಳಿದುಕೊಳ್ಳಲು ಬಯಸುತ್ತೇನೆ.*

**ಶ್ರೀಮಾತೆ :** ಅದು ಸಂಭವಿಸಬಹುದು.

ಅದು ಸಂಭವಿಸಬಹುದು, ಆದರೆ ಸಾಮಾನ್ಯವಾಗಿ ಅದಾಗಿರದೆ ಇದ್ದುದನ್ನು ಅವರು ತಮ್ಮಿಂದ ಎಷ್ಟೊಂದು ಸರಿಯಾದ ರೀತಿಯಲ್ಲಿ ತ್ಯಾಗಮಾಡಿರುತ್ತಾರೆಂದರೆ ಅವರು ಸಿದ್ಧಿಸಿಕೊಳ್ಳುವುದಕ್ಕೆ ಪರಿಪೂರ್ಣವಾಗಿರದ ಯಾವುದೂ ಉಳಿದುಕೊಂಡಿರುವುದಿಲ್ಲ. ಅವರಿಗೆ ತಾದಾತ್ಮ್ಯ ಪಡೆದುಕೊಂಡುದುದರ ಅನುಭವ ಇರುತ್ತದೆ. ಅವರು ಭಗವಂತನಲ್ಲಿ ತಮ್ಮನ್ನು ಕಳೆದುಕೊಂಡು ಬಿಟ್ಟಿರುತ್ತಾರೆ. ವೈಯಕ್ತಿಕ ಹಾಗೂ ವ್ಯಕ್ತಿವಿಶಿಷ್ಟತೆಯ ದೃಷ್ಟಿಕೋನದಿಂದ ಅದಷ್ಟಕ್ಕೆ ಮಾತ್ರ ಅವರು ಭರವಸೆ ಇಟ್ಟುಕೊಳ್ಳಬಹುದು.

ನೀನು ಹೇಳುತ್ತಿರುವುದು ಅಸಾಧ್ಯವೆಂದೇನಲ್ಲ, ನಿಜವಾಗಿ ಅದು ಸಾಧ್ಯವಿದೆ ಎಂದು ನನಗನಿಸುತ್ತದೆ. – ಆದರೆ ಅದು ಅಪರೂಪಕ್ಕೆ ಸಂಭವಿಸುವಂತಹದು, ಅಂತಹದು ಮೇಲಿಂದ ಮೇಲೆ ಆಗುವುದಿಲ್ಲ. ಅದರರ್ಥ ಅವರು ತ್ಯಾಗ ಮಾಡುವ ತಮ್ಮ ಕಾರ್ಯ ಮಾಡಿದಾಗ್ಯೂ ತಮ್ಮ ಪ್ರಜ್ಞೆಯಲ್ಲಿ ಏನೋ ಒಂದಿಷ್ಟನ್ನು ಉಳಿಸಿಕೊಂಡಿರಬಹುದು ಎಂದಾಗುತ್ತದೆ. ಅವರು ಇಡಿಯಾಗಿ ತೃಪ್ತಿ ಕಂಡುಕೊಂಡಿಲ್ಲ ಎಂಬುದನ್ನು ಆ ಏನೋ ಒಂದು ಭಾವನೆಗೆ ತಂದುಕೊಳ್ಳುತ್ತದೆ.

ತಾದಾತ್ಮ್ಯವನ್ನು ಸಾಧಿಸಿದ ನಂತರದ ನಿಲುವು ಬೇರೆ ರೀತಿಯದಾಗಿರುತ್ತದೆ. ಉದಾಹರಣೆಗೆ ಅದು ಗುರು ಮತ್ತು ಶಿಷ್ಯ, ಪ್ರಭು ಮತ್ತು ಆರಾಧಕ ಇವರ ನಡುವಿನ ಸಂಬಂಧವಾಗಿರುವುದಿಲ್ಲ. ತಾದಾತ್ಮ್ಯಗೊಳಿಸಿಕೊಳ್ಳುವ ಕ್ಷಣದಲ್ಲಿ ಆ ಸಂಬಂಧ ಅಳಿದು ಹೋಗಿರುತ್ತದೆ. ಅನಂತರ ಅಲ್ಲಿ ಯಾವುದೇ ಬಗೆಯ ಗುರು, ಶಿಷ್ಯ, ಇಲ್ಲವೆ ಪ್ರಭು, ಆರಾಧಕರಿರುವುದಿಲ್ಲ, ಎಲ್ಲವೂ ಭಗವಂತನಾಗಿ ಬಿಟ್ಟಿರುತ್ತದೆ. ಹಾಗಾಗಿ ಕಲಿಯಬೇಕಾದ ಪಾಠವನ್ನು ಸ್ವೀಕರಿಸುವವರಾರು? ಅದು ಸಂಭವಿಸಬೇಕಾದರೆ ತಾದಾತ್ಮ್ಯಗೊಳಿಸಿಕೊಳ್ಳುವಿಕೆಯಲ್ಲಿ ಭಾಗವಹಿಸಿರದ ಒಂದು ಅಂಶ ಪ್ರಜ್ಞೆಯಲ್ಲಿ ಉಳಿದುಕೊಂಡಿರಬೇಕು, ಏಕೆಂದರೆ ಭಗವಂತನನ್ನು ಸಮೀಪಿಸುವುದಕ್ಕೆ ತಾನು ಅನುಸರಿಸಿದ ಮಾರ್ಗಕ್ಕಿಂತ ಭಿನ್ನವಾದ ಇನ್ನೊಂದು ಮಾರ್ಗ ಬೇಕಾಗಿರುತ್ತದೆ. ಅದೆಲ್ಲವೂ ಅದಕ್ಕಾಗಿ ಅಭೀಪ್ಸೆಪಡುವವನು ಅನುಸರಿಸಿದ ಪ್ರತ್ಯೇಕ ಮಾರ್ಗಕ್ಕೆ ಏನೂ ಸಂಬಂಧವಿಲ್ಲದ ಎಲ್ಲವನ್ನೂ ಎಷ್ಟು ಪರಿಪೂರ್ಣವಾಗಿ ವಿಸರ್ಜಿಸಿದ್ದಾನೆ ಎಂಬುದರ ಮೇಲೆ ಅವಲಂಬಿಸಿರುತ್ತದೆ. ಉದಾಹರಣೆಗೆ ಜ್ಞಾನ ಮಾರ್ಗವನ್ನು ಅನುಸರಿಸುತ್ತಿದ್ದ ಮನುಷ್ಯ ತಾದಾತ್ಮ್ಯಗೊಳಿಸಿಕೊಳ್ಳುವ ಕ್ಷಣದಲ್ಲಿ ತನ್ನ ಪ್ರಜ್ಞೆಯಲ್ಲಿ

ಗುಪ್ತವಾಗಿ ಭಕ್ತಿಯ ಅಂಶಗಳನ್ನು ಉಳಿಸಿಕೊಂಡಿದ್ದರೆ ಅವು ಏನನ್ನೋ ತಪ್ಪಿಸಿ–ಕೊಳ್ಳುತ್ತವೆ. ಮತ್ತು ನಂತರ ಅವನು ತನ್ನ ಅನುಭವ ಪೂರ್ತಿಯಾಗಿಲ್ಲ ಎಂಬು–ದನ್ನು ತಿಳಿದುಕೊಳ್ಳಲು ಶಕ್ತನಾಗುತ್ತಾನೆ. ಆದರೆ ಆ ಅಂಶಗಳು ಅಸ್ತಿತ್ವದಲ್ಲಿರದಂತೆ ಅವುಗಳನ್ನು ಸರಿಯಾಗಿ ತೆಗೆದು ಹಾಕಿದ್ದರೆ ಆಗ ತಾದಾತ್ಮ್ಯ ಪರಿಪೂರ್ಣವಾಗಿಲ್ಲ ಎಂಬುದರ ಬಗ್ಗೆ ಗಮನ ಹರಿಸುವರಾರು? ಆ ಏಕತೆ ಈ ಹಂತದಲ್ಲಿ ಪರಿ–ಪೂರ್ಣವಾಗಿರುತ್ತದೆ ಅದು ಕೇವಲ ಪ್ರಜ್ಞೆಗೆ ಗೋಚರಿಸುವ ಸಂಗತಿ.

(ಶ್ರೀಮಾತೆಯವರು ಬಾಲಕನತ್ತ ಹೊರಳಿ ಹೇಳುತ್ತಾರೆ) ನಿನ್ನ ಪ್ರಜ್ಞೆಯಲ್ಲಿ ಇನ್ನೂ ಒಂದು ವಿಚಾರವಿದೆ: ನೀನು ಏನೋ ಒಂದರ ಜೊತೆಗೆ ಏಕತೆ ಪಡೆಯುವಿ ಆ ಏನೋ ಒಂದು ನೀನು ತಿಳಿದುಕೊಂಡದ್ದಕ್ಕಿಂತ ಹೆಚ್ಚಿನದನ್ನು ತಿಳಿದು–ಕೊಂಡಿರುತ್ತದೆ ಮತ್ತು ಅದು ನಿನ್ನ ತಪ್ಪನ್ನು ಗುರುತಿಸಿಕೊಳ್ಳುವಂತೆ ಮಾಡುತ್ತದೆ. ಆದರೆ ಅದು ತಾದಾತ್ಮ್ಯದ ನಂತರ ಉಳಿದುಕೊಳ್ಳುವುದಿಲ್ಲ! ಅದು (ಬಾಲಕನ ವಿಚಾರದಲ್ಲಿ ಇದ್ದದ್ದು) ಮೊದಲ ಸ್ಪರ್ಶ, ಆದರೆ ತಾದಾತ್ಮ್ಯವಾಗಿರುವುದಿಲ್ಲ.

ತಾದಾತ್ಮ್ಯದಲ್ಲಿ ತಾದಾತ್ಮ್ಯಗೊಳಿಸಿಕೊಂಡವನು. ಹಾಗೂ ಅವನು ಯಾವು–ದರ ಜೊತೆಗೆ ತಾದಾತ್ಮ್ಯ ಪಡೆದಿರುತ್ತಾನೋ ಅದು ಇವರ ನಡುವೆ ಇನ್ನು ಮುಂದೆ ಯಾವ ಭಿನ್ನತೆಯೂ ಇರುವುದಿಲ್ಲ, ಅದು ಒಂದೇ ಆಗಿರುತ್ತದೆ. ಭಿನ್ನತೆ ಇರುವವರೆಗೆ ಅದು ತಾದಾತ್ಮ್ಯವಾಗಿರುವುದಿಲ್ಲ.

ಮಾರ್ಗ ಯಾವುದೇ ಆಗಿರಲಿ, ಆ ಮಾರ್ಗಕ್ಕೆ ಸೇರಿರದ ಎಲ್ಲವನ್ನೂ ತೆಗೆದು ಹಾಕಿ ಪ್ರತಿಯೊಬ್ಬನೂ ಭಗವಂತನೊಡನೆ ಪರಿಪೂರ್ಣವಾಗಿ ತಾದಾತ್ಮ್ಯ ಪಡೆ–ಯುವುದು ಎಂದರೆ ಭಗವಂತನಾಗುವುದು ಸಾಧ್ಯವಿದೆ. – ಆದರೆ ಒಂದು ಭಾಗ–ದಲ್ಲಿ ಮಾತ್ರ, ಆ ಭಾಗವನ್ನು ಅವನು ಆಯ್ದುಕೊಂಡಿರುತ್ತಾನೆ. ಆದರೆ ಈ ಭಾಗ ತನ್ನಲ್ಲೇ ಪರಿಪೂರ್ಣವಾಗಿರುತ್ತದೆ, ಅದು ಎಲ್ಲವನ್ನೂ ಒಳಗೊಂಡಿರುತ್ತದೆ ಎಂದು ನಾನು ಹೇಳುವುದಿಲ್ಲ, ಆದರೆ ಅದು ತನ್ನಲ್ಲೇ ಪರಿಪೂರ್ಣವಾಗಿದೆ, ತಾದಾತ್ಮ್ಯ ಪರಿಪೂರ್ಣವಾಗಿದೆ ಎಂದು ಹೇಳುತ್ತೇನೆ – ಅದು ಇಡಿಯಾದ ತಾದಾತ್ಮ್ಯವಲ್ಲ.

*

ಅತ್ಯವಶ್ಯವಾಗಿ ಭಗವಂತನೊಡನೆ ಈ ಏಕತೆಯನ್ನು ಎಲ್ಲ ರೂಪಗಳಲ್ಲಿ ಅದಕ್ಕಾಗಿ ಉಪಯೋಗಿಸಿದ ಪ್ರತಿಯೊಂದು ಮಾರ್ಗದಲ್ಲಿ ಕಂಡುಕೊಳ್ಳಬೇಕು. ನೀವು ಅದರಾಚೆಗೆ ಸಾಗಿ ಹೋಗಿ ಹೊಸ ಮಾರ್ಗವನ್ನು ಕಂಡು ಹಿಡಿಯಬೇಕು.

ಹಾಗಾಗಿ ನಿಮ್ಮ ಯೋಚನೆಯಲ್ಲಿ ಮೊದಲು ಸ್ಪಷ್ಟಗೊಳಿಸಿಕೊಳ್ಳಬೇಕಾದ



ವಿಷಯವೊಂದಿದೆ, ಅದು ಬಹಳ ಹೆಚ್ಚಿನ ಮಹತ್ವವುಳ್ಳದ್ದು, ಅದೆಂದರೆ ನೀವು ಸಮಗ್ರ ಯೋಗವನ್ನು ಇತರ ಆಧ್ಯಾತ್ಮಿಕ ಸಿದ್ಧಿಸಿಕೊಳ್ಳುವಿಕೆಗಳೊಂದಿಗೆ ಹೋಲಿಸಿ ಗೊಂದಲಕ್ಕೀಡಾಗಬಾರದು ಎಂಬುದಾಗಿದೆ. ಅವು ಬಹಳ ಉಚ್ಚವಾದವುಗಳೇ ಆಗಿರಬಹುದು, ಆದರೆ ಬಹಳ ಸೀಮಿತ ಕ್ಷೇತ್ರವನ್ನು ಆವರಿಸಿರುತ್ತವೆ, ಏಕೆಂದರೆ ಅವುಗಳ ಚಲನೆ ಕೇವಲ ಆಳದಲ್ಲಿ ಸಾಗಿ ಹೋಗುವುದಕ್ಕೆ ಸೀಮಿತವಾಗಿದೆ.

ನಿಮ್ಮ ಅಭೀಪ್ಸೆಯಿಂದ ರಂಧ್ರವೊಂದನ್ನು ಕೊರೆದು ತೆಗೆಯಬಹುದು ಮತ್ತು ಆಳದಲ್ಲಿ, ಯಾವುದರ ಮೂಲಕವೇ ಆಗಲಿ, ಚಲನೆಯೊಂದನ್ನು ಮಾಡಬಹುದು. ಎಲ್ಲವೂ ನಿಮ್ಮ ಅಭೀಪ್ಸೆಯ ಗಾಢತೆ ಹಾಗೂ ನಿಷ್ಕಾಪಟ್ಯಗಳ ಮೇಲೆ ಅವಲಂಬಿಸಿರುತ್ತದೆ, ನಿಷ್ಕಾಪಟ್ಯದ ಮೇಲೆ ಎಂದರೆ ನಿಮ್ಮ ಸಮರ್ಪಣೆ, ಎಷ್ಟರ ಮಟ್ಟಿಗೆ ಸಂಪೂರ್ಣವಾಗಿದೆ, ಪರಿಪೂರ್ಣವಾಗಿದೆ ಎಂಬುದರ ಮೇಲೆ ಅವಲಂಬಿಸಿರುತ್ತದೆ, ಆದರೆ ಅದು ನೀವು ಆಯ್ದುಕೊಂಡ ರೂಪದ ಮೇಲೆ ಅವಲಂಬಿಸಿರುವುದಿಲ್ಲ, ಆದರೆ ಅದರ ಹಿಂದೆ ಏನಿದೆ ಎಂಬುದನ್ನು ಕಂಡು–ಕೊಳ್ಳುವುದಕ್ಕೆ ನೀವು ಅವಶ್ಯವಾಗಿ ಅದರ ಮೂಲಕ ಸಾಗಿ ಹೋಗಬೇಕಾಗುತ್ತದೆ.

ನಿಮ್ಮ ಸ್ವಭಾವವನ್ನು, ಸತ್ತೆಯನ್ನು ಪರಿವರ್ತಿಸಬೇಕು ಎಂದಿದ್ದರೆ ಮತ್ತು ಹೊಸ ಜಗತ್ತಿನ ನಿರ್ಮಾಣದಲ್ಲಿ ಪಾಲುಗೊಳ್ಳಬೇಕು ಎಂದಿದ್ದರೆ, ಆಗ ಈ ಅಭೀಪ್ಸೆ, ಒಂದು ಭಾಗಕ್ಕೆ ತೀಕ್ಷ್ಣವಾಗಿ ಸರಳ ರೇಖೆಯಲ್ಲಿ ತಲುಪುವಿಕೆ ಇವುಗಳು ಸಾಕಾಗುವುದಿಲ್ಲ. ಮನುಷ್ಯ ತನ್ನ ಪ್ರಜ್ಞೆಯಲ್ಲಿ ಎಲ್ಲವನ್ನೂ ಸೇರಿಸಿಕೊಳ್ಳಬೇಕು, ಎಲ್ಲವನ್ನೂ ಒಳಗೊಳ್ಳಬೇಕು.

(8/44–48, 244–45) – **ಶ್ರೀಮಾತೆ**

*

## ಇಡಿಯಾಗಿರುವ ನನ್ನೊಡನೆ ಏಕತೆ – 'ಸಮಗ್ರಮ್ ಮಾಮ್'

ಸಮಗ್ರ ಯೋಗಕ್ಕೆ ಆ ಹೆಸರನ್ನು ಕೊಡಲಾಗಿದೆ, ಏಕೆಂದರೆ ಅದು ಆಧ್ಯಾತ್ಮಿಕ ಸಿದ್ಧಿ ಹಾಗೂ ಅನುಭವ ಇವುಗಳು ಸಾಮರಸ್ಯದಿಂದ ಇಡಿಯಾಗಿರುವುದನ್ನು ಗುರಿಯಾಗಿರಿಸಿಕೊಂಡಿದೆ. ಅದರ ಗುರಿ ದೈವೀ ನೈಜತೆಯ ಸಮಗ್ರ ಅನುಭವ ಪಡೆಯುವುದಾಗಿದೆ, ಅದನ್ನು ಗೀತೆ ದೈವೀ ಸತ್ತೆಯ 'ಸಮಗ್ರಮ್ ಮಾಮ್' ಎಂಬ ಶಬ್ದಗಳಲ್ಲಿ ವರ್ಣಿಸಿದೆ. ಅದರ ವಿಧಾನವು ಆ ದೈವೀ ನೈಜತೆಗೆ, ದೈವೀ ಪ್ರಜ್ಞೆಗೆ, ದೈವೀ ಅಸ್ತಿತ್ವಕ್ಕೆ ಪರಮೋಚ್ಚ ಸೌಖ್ಯಕ್ಕೆ ಅದರ ಸತ್ತೆಗೆ ಹಾಗೂ ಇಡೀ ಸ್ವಭಾವವನ್ನು

ಸಮಗ್ರವಾಗಿ ಪರಿವರ್ತಿಸುವಿಕೆಗೆ ಮನುಷ್ಯ ತನ್ನ ಇಡೀ ಪ್ರಜ್ಞೆ, ಮನಸ್ಸು, ಹೃದಯ, ಪ್ರಾಣ, ಸಂಕಲ್ಪ ಮತ್ತು ದೇಹ ಇವುಗಳನ್ನು ತೆರೆದಿರಿಸಬೇಕು.

ಯೋಗದ ಮೂಲಕ ಇಡೀ ಸತ್ತೆ ಪುರುಷೋತ್ತಮನೊಂದಿಗೆ ಏಕತೆ ಪಡೆಯುವುದು ಗೀತೆಯ ಸಂಪೂರ್ಣ ಬೋಧನೆಯಾಗಿದೆ. ಜ್ಞಾನದ ಪ್ರತ್ಯೇಕ ಮಾರ್ಗವನ್ನು ಅನುಸರಿಸಿ ಸತ್ತೆ ಬದಲಾಗದ ದಿವ್ಯಾತ್ಮ (ಅಕ್ಷರ ಪುರುಷ)ನೊಂದಿಗೆ ಏಕತೆ ಪಡೆಯುವದಷ್ಟೇ ಗೀತೆಯ ಸಂಪೂರ್ಣ ಬೋಧನೆಯಾಗಿರುವುದಿಲ್ಲ. ಆ ಕಾರಣದಿಂದಾಗಿಯೇ ಜ್ಞಾನ ಹಾಗೂ ಕರ್ಮಗಳ ನಡುವೆ ಸಮನ್ವಯವನ್ನುಂಟು ಮಾಡಿದ ನಂತರ ಭಕ್ತಿ, ಪ್ರೇಮಗಳ ವಿಚಾರವನ್ನು ಕರ್ಮ ಹಾಗೂ ಜ್ಞಾನಗಳೊಂದಿಗೆ ಒಟ್ಟಿಗಿರಿಸಿ ಅಭಿವೃದ್ಧಿಪಡಿಸಲು ಗೀತೆಗೆ ಸಾಧ್ಯವಾಗಿದೆ. ಏಕೆಂದರೆ ಅಕ್ಷರ ಪುರುಷನೊಂದಿಗೆ ಏಕತೆ ಮಾತ್ರ ಇಡೀ ಅಥವಾ ಅತ್ಯುಚ್ಚ ರಹಸ್ಯವಾಗಿದ್ದರೆ ಆ ಒಟ್ಟಿಗಿರಿಸುವ ಕಾರ್ಯ ಸಾಧ್ಯವಾಗುತ್ತಿರಲಿಲ್ಲ. ಮತ್ತು ಏಕೆಂದರೆ ಆಗ ಒಂದು ಹಂತದಲ್ಲಿ ಪ್ರೇಮ, ಭಕ್ತಿಗಳಿಗಾಗಿ ನಮ್ಮ ಆಂತರಿಕ ಆಧಾರ, ಅದಕ್ಕೂ ಕಡಿಮೆಯಲ್ಲದ ರೀತಿಯಲ್ಲಿ ಕರ್ಮಗಳ ತಳಹದಿ ಚೂರು ಚೂರಾಗಿ ಕುಸಿದು ಹೋಗುತ್ತಿದ್ದವು. ಅಕ್ಷರ ಪುರುಷನೊಂದಿಗೆ ಪ್ರತ್ಯೇಕ ಹಾಗೂ ಅತ್ಯಂತ ಗಾಢ ಏಕತೆಯನ್ನು ಮಾತ್ರ ಹೊಂದಿರುವುದರ ಅರ್ಥ ಪುರುಷನನ್ನು ಕುರಿತು ಅದರ ಮತ್ತು ನಿಮ್ನ ಮಟ್ಟದ ಕಾರ್ಯದಲ್ಲಿ ಮಾತ್ರವಲ್ಲ, ಆದರೆ ಅದರ ಮೂಲದಲ್ಲಿ ಅಸ್ತಿತ್ವದಲ್ಲಿರುವುದನ್ನು, ಮತ್ತು ಅದರ ಅಜ್ಞಾನದ ಕರ್ಮಗಳಲ್ಲಿ ಮಾತ್ರವಲ್ಲ, ಆದರೆ ಅದರ ಜ್ಞಾನಯುಕ್ತ ಕರ್ಮಗಳನ್ನು ಕುರಿತು ಇರುವ ದೃಷ್ಟಿಕೋನವನ್ನು ನಿರ್ಮೂಲ ಮಾಡುವುದಾಗಿರುತ್ತದೆ. ಅದರ ಅರ್ಥ ಕ್ಷರದ ಲೀಲೆ ಸಾಧ್ಯವಾಗುವಂತೆ ಮಾಡುವ ಭಗವಂತ ಮತ್ತು ಮನುಷ್ಯ ಇವರ ನಡುವಿರುವ ಪ್ರಜ್ಞಾಪೂರ್ಣ ಸ್ಥಿತಿಸ್ಥಾಯಿತ್ವ ಮತ್ತು ಕರ್ಮವ್ಯವಹಾರ ಇವುಗಳಲ್ಲಿರುವ ಎಲ್ಲ ವ್ಯತ್ಯಾಸವನ್ನು ನಿರ್ಮೂಲ ಮಾಡಿದಂತಾಗುತ್ತದೆ, ಏಕೆಂದರೆ ಆಗ ಕ್ಷರದ ಕರ್ಮ ದೈವೀ ನೈಜತೆಯ ಯಾವ ಮೂಲ ಅಥವಾ ಆಧಾರ ಇಲ್ಲದೆ ಕೇವಲ ಅಜ್ಞಾನದ ಸಂಪೂರ್ಣ ಲೀಲೆಯಾಗುತ್ತದೆ. ತದ್ವಿರುದ್ಧವಾಗಿ ಯೋಗದ ಮೂಲಕ ಪುರುಷೋತ್ತಮನೊಡನೆ ಪಡೆದ ಏಕತೆಯ ಅರ್ಥ ಸ್ವ–ಅಸ್ತಿತ್ವದಲ್ಲಿರುವ ನಮ್ಮ ಸತ್ತೆಯಲ್ಲಿ ಮತ್ತು ನಮ್ಮ ಕ್ರಿಯಾಶೀಲ ಸತ್ತೆಯ ಒಂದು ಬಗೆಯ ಭೇದಭಾವದಲ್ಲಿ ನಮ್ಮ ಏಕತೆಯ ಜ್ಞಾನ ಮತ್ತು ಸಂತೋಷ ಪಡೆಯುವುದಾಗಿದೆ. ಇಲ್ಲಿ ಕೊನೆಗೆ ಹೇಳಿದ ವಿಷಯ ದೈವಿಕವಾದ ಕರ್ಮಗಳ ಲೀಲೆಯಲ್ಲಿ ಸತತ ಉಳಿದುಕೊಳ್ಳುವುದು. ದೈವಿಕ ಕರ್ಮಗಳು ದೈವೀ ಪ್ರೇಮದಿಂದ ಪ್ರಚೋದನೆ ಪಡೆದಿರುವುದು, ಮತ್ತು ದೈವೀ



ಸ್ವಭಾವದಿಂದ ಪರಿಪೂರ್ಣತೆ ಪಡೆದಿರುವುದು, ಭಗವಂತನನ್ನು ಆತ್ಮದಲ್ಲಿ ಸಿದ್ಧಿಸಿಕೊಂಡು ಪಡೆದ ಸಾಮರಸ್ಯದಿಂದ ಜಗತ್ತಿನಲ್ಲಿ ಭಗವಂತನ ದರ್ಶನ ಮಾಡಿಕೊಳ್ಳುವುದು ಇವೆಲ್ಲ ಮುಕ್ತಿ ಪಡೆದ ಮನುಷ್ಯನಲ್ಲಿ ಕರ್ಮ ಹಾಗೂ ಭಕ್ತಿ ಸಾಧ್ಯವಾಗುವಂತೆ ಮಾಡುತ್ತವಷ್ಟೇ ಅಲ್ಲ, ಅವನ ಸತ್ತೆಯ ಪರಿಪೂರ್ಣ ರೀತಿಯಲ್ಲಿ ಅನಿವಾರ್ಯವಾಗುವಂತೆ ಮಾಡುತ್ತವೆ.

*

ನಾವು ಈಗ ಗೀತೆಯ ಯೋಗದ ಮತ್ತು ಅದರ ಬೋಧನೆಯ ಇಡೀ ಜೀವಿಸುವಿಕೆ ಹಾಗೂ ಉಸಿರಾಡಿಸುವಿಕೆಯ ಕೇಂದ್ರಗಳ ಆಳಾತಿ ಆಳದ ತಿರುಳನ್ನು ದೊರಕಿಸಿದ್ದೇವೆ. ಸೀಮಿತ ಮಾನವ ಆತ್ಮ ಅಹಂಕಾರದಿಂದ, ನಿಮ್ನ ಸ್ವಭಾವದಿಂದ ಬದಲಾಗದ, ಸ್ಥಿರ, ನಿಶ್ಚಲನೀರವತೆಯಲ್ಲಿರುವ, ಸುಭದ್ರವಾದ ದಿವ್ಯಾತ್ಮದಲ್ಲಿ ಹಿಂದೆಗೆದುಕೊಂಡಾಗ ಆಗುವ ಅದರ ಆರೋಹಣವು ಕೇವಲ ಮೊದಲ ಹೆಜ್ಜೆಯಾಗಿತ್ತು ಮತ್ತು ಪ್ರಾರಂಭದ ಬದಲಾವಣೆಯಾಗಿತ್ತು ಎಂಬುದನ್ನು ನಾವು ಈಗ ಸ್ಪಷ್ಟವಾಗಿ ನೋಡಬಲ್ಲೆವು. ಮತ್ತು ಗೀತೆ ಅದರ ಪ್ರಾರಂಭದಿಂದ, ಏನೋ ಒಂದು ರಹಸ್ಯವನ್ನು ತೆರೆದು ತೋರಿಸುವ ರೀತಿಯಲ್ಲಿ, ಮಾನವ ರೂಪದಲ್ಲಿರುವ, ಯಾವಾಗಲೂ 'ಅಹಮ್, ಮಾಮ್' ಎಂದು ತನ್ನ ಬಗ್ಗೆ ಮಾತನಾಡುವ ಈಶ್ವರನ ಮೇಲೆ ಏಕೆ ಒತ್ತುಕೊಡುತ್ತ ಬಂದಿದೆ ಎಂಬುದನ್ನೂ ಈಗ ನಾವು ನೋಡಬಲ್ಲೆವು. ಅವನ ಶ್ರೇಷ್ಠ ರಹಸ್ಯವನ್ನು ಗೀತೆ ತೆರೆದುತೋರಿಸುತ್ತದೆ, ಅವನು ಸರ್ವವ್ಯಾಪಿ, ಎಲ್ಲ ಲೋಕಗಳ ಪ್ರಭು ಮತ್ತು ಮಾನವ ಆತ್ಮದ ಯಜಮಾನ, ಮತ್ತು ಬದಲಾಗದ, ಸ್ವ–ಅಸ್ತಿತ್ವದಲ್ಲಿರುವ, ಸ್ಥಿರ ಹಾಗೂ ಎಂದಿಗೂ ಅಲುಗಾಡದಿರುವ, ಸ್ವಾಭಾವಿಕ ವಿಶ್ವದ ವ್ಯಕ್ತಿನಿಷ್ಠ ಹಾಗೂ ವಸ್ತುನಿಷ್ಠ ತೋರಿಕೆಗಳ ಸ್ಪರ್ಶಕ್ಕೊಳಗಾಗದ ಅಕ್ಷರ ಪುರುಷನಿಗಿಂತ ಹೆಚ್ಚು ಶ್ರೇಷ್ಠನಾದವನು.

(13/223, 323) – **ಶ್ರೀ ಅರವಿಂದರು**

*

## ಏಕತೆಯ ಮೂರು ಗುಣಲಕ್ಷಣಗಳು

ಏಕತೆಗೆ ಮೂರು ಬಗೆಯ ಗುಣಲಕ್ಷಣಗಳಿವೆ. ತಾದಾತ್ಮ್ಯದ ಮೂಲಕ ಆಧ್ಯಾತ್ಮಿಕ ಸಾರದಲ್ಲಿ ಏಕತೆಯಿದೆ. ಈ ಅತ್ಯುಚ್ಚ ದೈವೀ ಸತ್ತೆ ಮತ್ತು ದೈವೀ ಪ್ರಜ್ಞೆಯಲ್ಲಿ ನಮ್ಮ ಆತ್ಮ ಒಳಸೇರಿ ನೆಲೆಸುವುದರಿಂದ ಆಗುವ ಏಕತೆಯಿದೆ, 'ತತ್'

ಮತ್ತು ನಮ್ಮ ಉಪಕರಣ ರೂಪದ ಸತ್ತೆ ಇವರ ನಡುವೆ ಸಾದೃಶ್ಯದ ಅಥವಾ ಒಂದುಗೂಡುವಿಕೆಯ ಏಕತೆ ಇದೆ. ಮೊದಲನೆಯದು ಅವಿದ್ಯೆಯಿಂದ ಮುಕ್ತಿ ಪಡೆಯುವುದಾಗಿದೆ ಮತ್ತು ದೈವೀ ನೈಜತೆಯಾದ ಸನಾತನನೊಡನೆ ತಾದಾತ್ಮ್ಯ ಪಡೆಯುವುದಾಗಿದೆ. ಅದು ಜ್ಞಾನಯೋಗದ ಗುರಿಯಾದ ಸಾಯುಜ್ಯ ಹೆಸರಿನ ಮೋಕ್ಷದ ಗುಣಲಕ್ಷಣವಾಗಿದೆ. ಎರಡನೆಯದು ಆತ್ಮ ಭಗವಂತನಲ್ಲಿ ನೆಲೆಸುವುದು – ಸಾಮೀಪ್ಯ, ಮೂರನೆಯದು ಭಗವಂತನೊಡನೆ ಸ್ವಭಾವದ ತಾದಾತ್ಮ್ಯ, 'ತತ್' ಪರಿಪೂರ್ಣವಾಗಿರುವಂತೆ ಪರಿಪೂರ್ಣವಾಗುವುದು, ಸಾಮರ್ಥ್ಯ ಹಾಗೂ ಪರಿಪೂರ್ಣತೆ ನೀಡುವ ಇಲ್ಲವೆ ದೈವೀ ಕಾರ್ಯಗಳನ್ನು ಹಾಗೂ ಸೇವೆ ಮಾಡುವುದನ್ನು ಉದ್ದೇಶವಾಗಿರಿಸಿಕೊಂಡಿರುವ ಎಲ್ಲ ಯೋಗಗಳ ಉಚ್ಚ ಗುರಿಯಾಗಿರುತ್ತದೆ. ಇಲ್ಲಿ ಅನೇಕ ಬಗೆಯಲ್ಲಿ ಸ್ವ–ಪ್ರಕಟಣೆ ಮಾಡುವ ಭಗವಂತನೊಡನೆ ಮಾಡಿಕೊಳ್ಳುವ ಏಕತೆಯ ಆಧಾರದ ಮೇಲೆ ಸ್ಥಾಪಿತವಾಗಿರುವ ಮೂರೂ ರೀತಿಗಳನ್ನು ಸಂಯೋಜಿಸಿದ ಸಂಪೂರ್ಣತೆ ಸಮಗ್ರ ಯೋಗದ ಸಂಪೂರ್ಣ ಪರಿಣಾಮ ಮತ್ತು ಮೂರು ಬಗೆಯ ಯಜ್ಞಗಳ ಫಲ.

(20/122) **– ಶ್ರೀ ಅರವಿಂದರು**

*

## ಸಂಸ್ಕೃತ ಶಬ್ದಗಳ ಅರ್ಥ

**ಸಾದೃಶ್ಯ :** ಭಗವಂತನೊಂದಿಗೆ ಹೋಲಿಕೆ

**ಸಾಲೋಕ್ಯ :** ಭಗವಂತನೊಡನೆ ಒಂದು ಅಂತಸ್ತು ಇಲ್ಲವೆ ಪರಿಸರದಲ್ಲಿರುವುದು; ಆತ್ಮ ಭಗವಂತನಲ್ಲಿ ನೆಲೆಸಿರುವುದು.

**ಸಾಮೀಪ್ಯ :** ಹತ್ತಿರವಿರುವಿಕೆ, ಭಗವಂತನೊಡನೆ ಆತ್ಮ ನೆಲೆಸಿರುವುದು.

**ಸಾಯುಜ್ಯ :** ಮಾನವ ಆತ್ಮದೊಡನೆ ಭಗವಂತನ ಸಂಪೂರ್ಣ ಏಕತೆ

*

## ಸೃಷ್ಟಿಯ ಪೂರ್ಣ ಸುತ್ತುವಿಕೆ

**ಪ್ರಶ್ನೆ :** *ಮಧುರ ಶ್ರೀಮಾತೆಯವರೆ, ರಾಧೆಯನ್ನು ಕುರಿತು ವೈಷ್ಣವರ ಎಲ್ಲ ಕತೆಗಳಲ್ಲಿ ಹಾಗೂ ಹಲವಾರು ಸಂತರ ಕೃತಿಗಳಲ್ಲಿ ಯಾವಾಗಲೂ ಕಣ್ಣೀರು, ತಳಮಳ ಇರುವುದು ಕಂಡುಬರುತ್ತದೆ: "ಅವಳು ರೋದಿಸಿದಳು, ಭಗವಂತ ಬರಲಿಲ್ಲ, ... ಭಗವಂತ ಅವಳಿಗೆ ಚಿತ್ರಹಿಂಸೆ ಕೊಟ್ಟ" ಇದೆಲ್ಲದರ ಅರ್ಥವೇನು? ಅವಳು ಸಮಗ್ರವಾಗಿ ಪರಿಶುದ್ಧಳಾಗಿದ್ದಳು, ಹಾಗಿರುವಾಗ ಅಂತಹದೆಲ್ಲ ಏಕಿತ್ತು?*



**ಶ್ರೀಮಾತೆ :** ಅದೆಲ್ಲ (ಆಧ್ಯಾತ್ಮಿಕ) ಮಾರ್ಗದಲ್ಲಿ ಇರುವಂತಹದು! ಮಾರ್ಗದಲ್ಲಿ ಮನುಷ್ಯ ಇನ್ನೂ ಸಾಗುತ್ತಿರುವಾಗ, ಗುರಿಯನ್ನು ಇನ್ನೂ ತಲುಪದೆ ಇದ್ದಾಗ ಇಂತಹದು ಸಂಭವಿಸುತ್ತದೆ. ಅವರಲ್ಲಿ ಇದು ಇದೆ. ಅದರ ಮೇಲೆ ಅವರು ಬಹಳ ಒತ್ತುಕೊಡುತ್ತಾರೆ, ಏಕೆಂದರೆ ಅವರು ಮಾನವ ಮಾರ್ಗವನ್ನು ದೀರ್ಘವಾಗಿಸುತ್ತ ಹೋಗುವುದನ್ನು ಇಷ್ಟಪಡುತ್ತಾರೆ. ಅದಕ್ಕಿರುವ ಸರಳ ಕಾರಣವೆಂದರೆ ಅವರು ಈ ಮಾನವ ಮಾರ್ಗದಲ್ಲಿ ಸಂತೋಷ ಕಂಡುಕೊಳ್ಳುತ್ತಾರೆ ಮತ್ತು ಇನ್ನೊಂದು ಕಾರಣವೆಂದರೆ ನೀವು ಜೀವನದಲ್ಲಿ ಹಾಗೂ ಅದರ ಸಂಪರ್ಕದಲ್ಲಿ ಉಳಿದುಕೊಳ್ಳಬೇಕೆಂದು ಬಯಸಿದರೆ ಅನುಭವದಲ್ಲಿ ಒಂದು ಬಗೆಯ ಸಾಪೇಕ್ಷತೆ ಉಳಿದುಕೊಳ್ಳುತ್ತದೆ. ಆ ರೀತಿಯಲ್ಲಿ ಅದು ಇರುವುದು ಅವರಿಗೆ ಇಷ್ಟವಾಗುತ್ತದೆ: ಭಗವಂತನೊಡನೆ ಕಾದಾಡುವುದನ್ನು, ಅವನು ಕಾಣದಿದ್ದಾಗ ಉಂಟಾಗುವ ವಿರಹದ ಭಾವನೆಯನ್ನು ಅವರು ಇಷ್ಟಪಡುತ್ತಾರೆ. ಈ ವಿಷಯಗಳು ಅವರಿಗೆ ಸಂತೋಷಕರವಾಗಿರುತ್ತವೆ, ಏಕೆಂದರೆ ಅವರು ಮಾನವ ಪ್ರಜ್ಞೆಯಲ್ಲಿ ಉಳಿದುಕೊಂಡಿರುತ್ತಾರೆ ಮತ್ತು ಅಲ್ಲಿಯೇ ಉಳಿದುಕೊಳ್ಳವುದನ್ನು ಬಯಸುತ್ತಾರೆ. ಪರಿಪೂರ್ಣ ತಾದಾತ್ಮ್ಯ ಹೊಂದಿದ ತತ್‌ಕ್ಷಣ ಇದೆಲ್ಲ ಮಾಯವಾಗುತ್ತದೆ. ಹಾಗಾಗಿ ಅದು ನಾಟಕವೊಂದರ ಸಂತೋಷ ಪಡೆಯುವುದರಿಂದ ವಂಚಿತರಾದ ಹಾಗಿರುತ್ತದೆ. ಜೀವನದಿಂದ ಏನೋ ಒಂದು ಹೊರಟು ಹೋಗಿರುತ್ತದೆ. ಆ ಏನೋ ಒಂದು ಕೇವಲ ಭ್ರಮೆ. ಅವರಿಗೆ ತರ್ಕಕ್ಕೆ ನಿಲುಕುವಷ್ಟು ಭ್ರಮೆ ಇನ್ನೂ ಬೇಕಾಗಿರುತ್ತದೆ. ಅವರು ನೇರವಾಗಿ ದೈವೀ ಸತ್ಯದಲ್ಲಿ ಪ್ರವೇಶಿಸಲಾರರು.

ವಾಸ್ತವದಲ್ಲಿ ಪ್ರತ್ಯೇಕತೆಯ ಭಾವನೆ ಮಾಯವಾಗುವುದಕ್ಕೆ ನೀವು ನಿಮ್ಮಲ್ಲಿ ಪರಿಪೂರ್ಣ ತಾದಾತ್ಮ್ಯವನ್ನು ಸಿದ್ಧಿಸಿಕೊಂಡಿರಬೇಕು ಮತ್ತು ಒಮ್ಮೆ ಈ ಪರಿಪೂರ್ಣ ತಾದಾತ್ಮ್ಯವನ್ನು ಸಿದ್ಧಿಸಿಕೊಂಡ ನಂತರ, ಸರಿ, ಕತೆ ಕೊನೆ ಕಂಡುಕೊಂಡಿರುತ್ತದೆ, ಇನ್ನು ಮುಂದೆ ಹೇಳುವುದಕ್ಕೆ ಏನೂ ಉಳಿದಿರುವುದಿಲ್ಲ.

ಮತ್ತು ಆ ಕಾರಣದಿಂದಾಗಿ ಈ ಜಗತ್ತು, ಈ ಸೃಷ್ಟಿ ಭಗವಂತನೊಡನೆ ಪರಿಪೂರ್ಣ ತಾದಾತ್ಮ್ಯವನ್ನು ಸಿದ್ಧಿಸಿಕೊಂಡ ನಂತರ ಯಾವ ಸೃಷ್ಟಿಯೂ ಇರುವುದಿಲ್ಲ ಎಂದು ಹೇಳಲಾಗಿದೆ. ನಂತರ ಯಾವ ಭಿನ್ನತೆಯೂ ಉಳಿದಿರದ ಹಾಗೆ ಮಾಡುವ ಈ ಪರಿಪೂರ್ಣ ತಾದಾತ್ಮ್ಯವನ್ನು ನೀವು ಸಿದ್ಧಿಸಿಕೊಂಡರೆ ಮತ್ತು ಇಡೀ ವಿಶ್ವ ಇನ್ನು ಮುಂದೆ ಯಾವ ಭಿನ್ನತೆ ಉಳಿದಿರದ ಈ ಪರಿಪೂರ್ಣ ತಾದಾತ್ಮ್ಯವನ್ನು ಸಿದ್ಧಿಸಿಕೊಂಡರೆ ಭಿನ್ನತೆಯ ಸಾಧ್ಯತೆ ಉಳಿದುಕೊಳ್ಳುವುದಿಲ್ಲ ಮತ್ತು ವಿಶ್ವವೆಂಬುದಿರುವುದಿಲ್ಲ. ಅದು ಪ್ರಳಯದತ್ತ ಮರಳಿ ಹೋಗುವುದಾಗಿರುತ್ತದೆ.

ಹಾಗಾಗಿ ಪರಿಹಾರ ಲೀಲೆಯಲ್ಲಿಯೂ ಕೂಡ ಆನಂದ ಕಂಡುಕೊಳ್ಳುವುದಾಗಿದೆ. ಈ ವಿನಿಮಯದಲ್ಲಿ ಮನುಷ್ಯ ಕೊಡುವುದಿರುತ್ತದೆ ಹಾಗೂ ಸ್ವೀಕರಿಸುವುದಿರುತ್ತದೆ, ಅದರಲ್ಲಿ ಒಬ್ಬರು ಇಬ್ಬರಾದಂತಿರುತ್ತದೆ, ಹಾಗಾಗಿ ಅವರು ದ್ವಂದ್ವವನ್ನು ಉಳಿಸಿಕೊಳ್ಳುತ್ತಾರೆ. ಹಾಗಿರದಿದ್ದರೆ ತಾದಾತ್ಮ್ಯದಲ್ಲಿ ತಾದಾತ್ಮ್ಯದ ಹೊರತಾಗಿ ಬೇರೇನೂ ಇರುವುದಿಲ್ಲ. ತಾದಾತ್ಮ್ಯ ಸಂಪೂರ್ಣವಾಗಿದ್ದರೆ, ಪರಿಪೂರ್ಣವಾಗಿದ್ದರೆ ನಂತರ ವಸ್ತುನಿಷ್ಠವಾಗಿರುವಿಕೆ ಇರುವುದಿಲ್ಲ.

ಆದರೆ ಪ್ರೇಮದ ಕತೆ ಹೇಳುವಾಗ ನಾನಿದನ್ನು ಎಲ್ಲಿಯೋ ಹೇಳಿದ್ದೇನೆ. ಬಹುಶಃ ಕೆಲವರ ಹೊರತಾಗಿ ಉಳಿದವರಾರೂ ಅದರಲ್ಲಿರುವ ಭಿನ್ನತೆಯನ್ನು ಗಮನಿಸಲಿಲ್ಲ. "ಅದು ತಾದಾತ್ಮ್ಯ ಆನಂದದೊಂದಿಗೆ ಪ್ರಾರಂಭವಾಗುತ್ತದೆ ಮತ್ತು ಸೃಷ್ಟಿಯ ಇಡೀ ಪರಿಧಿ ಪೂರ್ಣಗೊಂಡ ನಂತರ ಅದು ಏಕತೆಯ ಆನಂದದಲ್ಲಿ ಕೊನೆಗೊಳ್ಳುತ್ತದೆ" ಎಂದು ನಾನು ಹೇಳಿದ್ದೇನೆ. ಪರಿಧಿಯ ರೀತಿಯಲ್ಲಿ ಸುತ್ತಿಬರುವುದಿರದಿದ್ದರೆ ಏಕತೆಯ ಆನಂದವಿರುತ್ತಿರಲಿಲ್ಲ, ಕೇವಲ ತಾದಾತ್ಮ್ಯದ ಆನಂದವಿರುತ್ತಿತ್ತು. ಸುತ್ತಿಬರುವುದಿರದಿದ್ದರೆ ಏಕತೆಯಿರುವುದಿಲ್ಲ.

ಬಹುಶಃ ಇದು ಬಹಳ ಸೂಕ್ಷ್ಮವಾದ ವಿಷಯ, ಆದರೆ ಅದು ವಾಸ್ತವ ಸಂಗತಿಯಾಗಿದೆ: ಬಹುಶಃ ತಾದಾತ್ಮ್ಯದ ಆನಂದ, ನಾನು ಏಕತೆಯ ಆನಂದದಲ್ಲಿ ಪರಾಕಾಷ್ಠೆಯ ಕಿರೀಟಪ್ರಾಯವಾದದ್ದು ಎಂದು ಕರೆಯಬಹುದಾದ್ದನ್ನು, ಏಕತೆಯ ಆನಂದದಲ್ಲಿ ಕಂಡುಕೊಳ್ಳಲೆಂದು ಇಡೀ ಸುತ್ತುವಿಕೆಯನ್ನು ಮಾಡಲಾಗಿತ್ತು.

ಆದರೆ ಪರಿಪೂರ್ಣ ತಾದಾತ್ಮ್ಯವಿದ್ದಾಗ ಅಲ್ಲಿ ಏಕತೆಯ ಸಾಧ್ಯತೆ ಇರುವುದಿಲ್ಲ, ಏಕತೆಯ ಭಾವನೆ ಅಸ್ತಿತ್ವದಲ್ಲಿರುವುದಿಲ್ಲ. ಏಕೆಂದರೆ ಏಕತೆ ಪರಿಪೂರ್ಣ ತಾದಾತ್ಮ್ಯಕ್ಕೆ ಹೊರತಾದ ಬೇರೆ ವಿಷಯವಾದದ್ದು ಎಂಬ ಸೂಚನೆ ಇರುತ್ತದೆ. ಪರಿಪೂರ್ಣ ಏಕತೆ ಇರುವ ಸಾಧ್ಯತೆ ಇದೆ, ಆದರೆ ಪರಿಪೂರ್ಣ ತಾದಾತ್ಮ್ಯವಿರುವುದಿಲ್ಲ.

ಶಬ್ದಗಳಿಂದ, ನಿಮ್ಮ ಮಿದುಳಿನಿಂದ ತಿಳಿದುಕೊಳ್ಳುವ ಪ್ರಯತ್ನ ಮಾಡಬೇಡಿರಿ, ಏಕೆಂದರೆ ಈ ಎರಡು ಶಬ್ದಗಳು, ಒಟ್ಟಿನಲ್ಲಿ, ಭಿನ್ನವಾದ ಅನುಭವವನ್ನು ವ್ಯಕ್ತಪಡಿಸುತ್ತವೆ, ಆದರೆ ಪರಿಣಾಮ ಒಂದೇ ಆಗಿರುತ್ತದೆ. ಒಂದು ಇನ್ನೊಂದರಲ್ಲಿ ಕಂಡುಬರದ ವಿಷಯಗಳಿಂದ ಶ್ರೀಮಂತವಾದದ್ದು, ಅದು ಇಡೀ ಅನುಭವದ, ವಿಶ್ವದ ಅನುಭವದ ಶ್ರೀಮಂತಿಕೆ.

(8/224–26) – **ಶ್ರೀಮಾತೆ**

*



# ಆತ್ಮ ಜನ್ಮತಾಳುವುದರ ಅರ್ಥ

ಸಂಕಲ್ಪ, ಜ್ಞಾನ ಮತ್ತು ಪ್ರೇಮ ಇವು ಮೂರು ಮಾನವ ಸ್ವಭಾವದಲ್ಲಿ, ಹಾಗೂ ಜೀವನದಲ್ಲಿ ದೈವೀ ಸಾಮರ್ಥ್ಯಗಳಾಗಿವೆ ಮತ್ತು ಮೂರು ಮಾರ್ಗಗಳತ್ತ ಬೆರಳಿಟ್ಟು ತೋರಿಸುತ್ತವೆ, ಅವುಗಳ ಮೂಲಕ ಆತ್ಮ ದೈವತ್ವದತ್ತ ಮೇಲಕ್ಕೇರುತ್ತದೆ. ಹಾಗಾಗಿ ನಾವೀಗಾಗಲೆ ಕಂಡುಕೊಂಡಂತೆ ಅವೆಲ್ಲವುಗಳಲ್ಲಿ ಮನುಷ್ಯ ಭಗವಂತನೊಡನೆ ಏಕತೆ ಪಡೆಯುವಿಕೆ ಹಾಗೂ ಅವುಗಳ ಸಮಗ್ರತೆ ಸಮಗ್ರ ಯೋಗದ ತಳಹದಿಯಾಗಬೇಕು.

ಕ್ರಿಯೆ ಜೀವನದ ಮೊದಲ ಸಾಮರ್ಥ್ಯ. ಪ್ರಕೃತಿ ಶಕ್ತಿಯಿಂದ ಪ್ರಾರಂಭ ಮಾಡುತ್ತದೆ ಮತ್ತು ಅದರ ಕಾರ್ಯಗಳು ಮನುಷ್ಯನಲ್ಲಿ ಒಮ್ಮೆ ಪ್ರಜ್ಞಾರೂಪ ತಾಳಿದಾಗ ಅವು ಸಂಕಲ್ಪ ಹಾಗೂ ಸಿದ್ಧಿಗಳಾಗುತ್ತವೆ. ಆದ್ದರಿಂದ ಮನುಷ್ಯ ತನ್ನ ಕಾರ್ಯವನ್ನು ಅತ್ಯಂತ ಒಳ್ಳೆಯ ರೀತಿಯಲ್ಲಿ ಹಾಗೂ ಹೆಚ್ಚಿನ ರೀತಿಯಲ್ಲಿ ಭಗವಂತನತ್ತ ಹೊರಳಿಸುವುದರಿಂದ ಅವನ ಜೀವನ ದೈವಿಕವಾಗಲು ಪ್ರಾರಂಭಿಸುತ್ತದೆ. ಅದು ಮೊದಲ ಪ್ರವೇಶಕ್ಕೆ ಒಂದು ದ್ವಾರ, ದೀಕ್ಷೆ ಪಡೆಯುವುದಕ್ಕೆ ಪ್ರಾರಂಭ ಬಿಂದು. ಅವನ ಸಂಕಲ್ಪ ಭಗವಂತನ ಸಂಕಲ್ಪದೊಂದಿಗೆ ಏಕವಾದಾಗ ಮತ್ತು ಅವನ ಇಡೀ ಕ್ರಿಯೆ ಭಗವಂತನಿಂದ ಮುಂದುವರಿದಾಗ ಮತ್ತು ಅವನಿಂದ ನಿರ್ದೇಶಿತವಾದಾಗ ಕರ್ಮಗಳಲ್ಲಿ ಏಕತೆಯನ್ನು ಪರಿಪೂರ್ಣವಾಗಿ ಸಿದ್ಧಿಸಿಕೊಳ್ಳಲಾಗಿರುತ್ತದೆ. ಆದರೆ ಕರ್ಮಗಳು ಜ್ಞಾನದಲ್ಲಿ ನೆರವೇರಿಕೆ ಕಂಡುಕೊಳ್ಳುತ್ತವೆ. ಗೀತೆ ಹೇಳುವಂತೆ ಕರ್ಮಗಳ ಇಡಿಯಾದ ಮೊತ್ತ ಅದರ ಪೂರ್ಣಗೊಂಡ ಪರಾಕಾಷ್ಠೆಯನ್ನು ಜ್ಞಾನದಲ್ಲಿ ಕಂಡುಕೊಳ್ಳುತ್ತದೆ: "ಸರ್ವಮ್ ಕರ್ಮಾಖಿಲಮ್ ಜ್ಞಾನೆ ಪರಿಸಮಾಪ್ಯತೆ". ಸಂಕಲ್ಪದಲ್ಲಿ ಹಾಗೂ ಕರ್ಮಗಳಲ್ಲಿ ಏಕವಾಗುವುದರ ಮೂಲಕ ನಾವು ಸರ್ವತ್ರಾಸ್ತಿತ್ವ (omnipresence)ವಿರುವ ಪ್ರಜ್ಞೆಯುಳ್ಳ ಸತ್ತೆಯಲ್ಲಿ ಏಕವಾಗುತ್ತೇವೆ, ಅವನಿಂದ ನಮ್ಮ ಎಲ್ಲ ಸಂಕಲ್ಪ ಹಾಗೂ ಕ್ರಿಯೆ ಮೇಲೆದ್ದು ಬರುತ್ತವೆ ಮತ್ತು ಅವನಲ್ಲಿ ತಮ್ಮ ಚೈತನ್ಯಗಳ ವಿಸ್ತಾರದ ನೆರವೇರಿಕೆ ಕಂಡುಕೊಳ್ಳುತ್ತವೆ. ಈ ಏಕತೆಗೆ ಪ್ರೇಮ ಕಿರೀಟಪ್ರಾಯವಾಗಿದೆ, ಏಕೆಂದರೆ ನಾವು ಯಾವ ದಿವ್ಯ ಸತ್ತೆಯಲ್ಲಿ ವಾಸಿಸುತ್ತೇವೆಯೋ, ಕ್ರಿಯೆ ಕೈಕೊಳ್ಳುತ್ತೇವೆಯೋ ಮತ್ತು ಚಲಿಸುತ್ತೇವೆಯೋ, ಯಾರ ಮೂಲಕ ನಾವು ಅಸ್ತಿತ್ವದಲ್ಲಿದ್ದೇವೆಯೋ ಯಾರ ಸಲುವಾಗಿ, ಕೊನೆಗೆ, ಕ್ರಿಯೆ ಕೈಕೊಳ್ಳುವುದನ್ನು, ಅಸ್ತಿತ್ವದಲ್ಲಿರುವುದನ್ನು ಕಲಿತುಕೊಳ್ಳುತ್ತೇವೆಯೋ ಅದರೊಡನೆ ಪ್ರಜ್ಞಾಪೂರ್ವಕ ಏಕತೆಯ ದಿವ್ಯಾನಂದವೇ ಪ್ರೇಮ.

*

ಪ್ರೇಮವು ದೈವೀ ಸ್ವ–ದಿವ್ಯಾನಂದದ ಸಾಮರ್ಥ್ಯ ಹಾಗೂ ಭಾವೋದ್ರೇಕ, ಪ್ರೇಮವಿಲ್ಲದೆ ಅದರ ಅನಂತತೆಯ ತಲ್ಲೀನವಾದ ಶಾಂತಿಯನ್ನು, ಆನಂದದ ಮಗ್ನವಾಗಿಸುವಿಕೆಯ ನಿಶ್ಚಲ ನೀರವತೆಯನ್ನು ದೊರಕಿಸಬಹುದು, ಆದರೆ ಅದರ ಶ್ರೀಮಂತಿಕೆಯ ಹಾಗೂ ಪೂರ್ಣತೆಯ ಆಳವನ್ನು ಪಡೆಯಲಾರೆವು. ವಿಭಜನೆ–ಯಿಂದುಂಟಾಗುವ ವೇದನೆಯಿಂದ ಪ್ರೇಮವು ನಮ್ಮನ್ನು ಪರಿಪೂರ್ಣ ಏಕತೆಯ ದಿವ್ಯಾನಂದದಲ್ಲಿ ಕರೆದೊಯ್ಯುತ್ತದೆ, ಆದರೆ ಅದನ್ನು ಮಾಡುವಾಗ ನಾವು ಏಕತೆಗಾಗಿ ಇರುವ ಕ್ರಿಯೆಯ ಸಂತೋಷವನ್ನು ಕಳೆದುಕೊಳ್ಳುವುದಿಲ್ಲ. ಈ ಏಕತೆ ಆತ್ಮದ ಅತ್ಯಂತ ಶ್ರೇಷ್ಠ ಶೋಧ ಮತ್ತು ಅದಕ್ಕಾಗಿ ವಿಶ್ವವ್ಯಾಪಿ ಜೀವನ ಒಂದು ದೀರ್ಘ ತಯಾರಿಯಾಗಿದೆ.

*

ಸಮಗ್ರ ಯೋಗವು ಜ್ಞಾನದ ಮಾರ್ಗ, ಕರ್ಮಗಳ ಮಾರ್ಗ ಇವುಗಳಿಂದ ಪ್ರಾರಂಭವಾಗುವ ಹಾಗೆ ಅದು ಭಕ್ತಿ ಮಾರ್ಗದಿಂದ ಪ್ರಾರಂಭವಾಗಬಹುದು, ಆದರೆ ಆ ಎಲ್ಲ ಮಾರ್ಗಗಳು ಎಲ್ಲಿ ಸಂಧಿಸುತ್ತವೆಯೋ ಅಲ್ಲಿ ನೆರವೇರಿಕೆ ಕಂಡು–ಕೊಳ್ಳುವುದರ ಸಂತೋಷ ಪ್ರಾರಂಭವಾಗುತ್ತದೆ.

ಸಮಗ್ರ ಯೋಗ ಪ್ರೇಮದಿಂದ ಪ್ರಾರಂಭವಾಗದಿದ್ದಾಗಲೂ ಕೂಡ ಅದನ್ನು ತಪ್ಪಿಸಿಕೊಳ್ಳಲಾರದು, ಏಕೆಂದರೆ ಪ್ರೇಮವು ಕರ್ಮಗಳ ಹಾಗೂ ಅರಳಿಕೊಳ್ಳುವ ಜ್ಞಾನದ ಕಿರೀಟವಿದ್ದ ಹಾಗೆ. **– ಶ್ರೀ ಅರವಿಂದರು**

*

## ಶ್ರೀ ಕೃಷ್ಣ

ಈ ಭಯಾನಕ ಮಧುರ ವಿಶ್ವದಲಿ
ಪೃಥ್ವಿಯ ಹಸಿದ ಹೃದಯದ ಭಾವನೆಯ ತಂದುಕೊಂಡು ನಾನು
ಸ್ವರ್ಗದಾಚೆಗಿರುವ ಶ್ರೀಕೃಷ್ಣನ ಪಾದಗಳನು ತಲುಪಲು ಅಭೀಪ್ಸೆಪಡುತ
ಆತ್ಮ ಜನ್ಮ ತಾಳುವುದರ ಅರ್ಥವನು ಕೊನೆಗೆ ನಾ ಕಂಡುಕೊಳ್ಳುತ್ತಿರುವೆ.

ಅಮರ ಸೌಂದರ್ಯವಿರುವ ಕಣ್ಣುಗಳ ನಾ ನೋಡಿರುವೆ
ಭಾವೋದ್ರೇಕಗೊಳಿಸುವ ಪ್ರೇಮಿಯ ಕೊಳಲ ನಾದವನು ನಾ ಕೇಳಿರುವೆ
ಸಾವಿಲ್ಲದ ದಿವ್ಯಾನಂದದ ಅಚ್ಚರಿಯ ನಾ ತಿಳಿದಿರುವೆ
ನನ್ನ ಹೃದಯದಲಿರುವ ವೇದನೆ ಸದಾ ಮೌನಿಯಾಗಿಹುದು.



ಹತ್ತಿರ ಅತಿಹತ್ತಿರ ಆ ಸಂಗೀತ ಸಮೀಪಿಸುತಿಹುದು
ವಿಚಿತ್ರ ಆನಂದದ ಸ್ಥಿತಿಯಿಂದ ಪ್ರಾಣ ನಡುಗುತಿಹುದು.
ತನ್ನ ಪ್ರಭು ಸ್ಪರ್ಶಿಸಲಿ, ಬಿಗಿಯಾಗಿ ಹಿಡಿದುಕೊಳ್ಳಲಿ ಅವನೇ ತಾನಾಗಿಬಿಡಲಿ
ಎಂದು ಆಶಿಸುವ ಎಲ್ಲ ಪ್ರಕೃತಿ ಅನುರಾಗ ಹುಟ್ಟಿಸುವ ವಿಶಾಲ ವಿರಾಮ.
ಹಳೆಯ ಯುಗಗಳೆಲ್ಲ ಜೀವಿಸಿದವು ಈ ಒಂದು ಕ್ಷಣಕ್ಕಾಗಿ
ಜಗತ್ತು ಕೊನೆಗೆ ನನ್ನಲ್ಲಿ ನೆರವೇರಿಕೆ ಕಂಡುಕೊಂಡು ಸ್ಪಂದಿಸುತ್ತಿಹುದು.

**– ಶ್ರೀ ಅರವಿಂದರು**

*

## ಮತ್ತು ಈಗ ನಾನು ನಿನಗೆ ಬಹಳ ಹತ್ತಿರದವಳಾದ ಭಾವನೆ ಬರುತ್ತಿದೆ.

ಓ ಪ್ರಭು, ನಿನ್ನೆದುರು ಒಮ್ಮೆಗೆ ನನ್ನ ಅಭಿಮಾನ ಕಳಚಿ ಹೋಯಿತು. ನಿನ್ನ ದೈವೀ ಸಾನ್ನಿಧ್ಯದಲ್ಲಿ ಮನುಷ್ಯ ತನ್ನನ್ನು ಮೀರಿ ಹೋಗಬೇಕೆಂಬುದು ಎಷ್ಟು ವ್ಯರ್ಥವಾದದ್ದು ಎಂಬುದನ್ನು ನಾನು ಅರಿತುಕೊಂಡೆ.

ಮತ್ತು ಈಗ ನಾನು ನಿನಗೆ ಬಹಳ ಹತ್ತಿರದವಳಾದ ಭಾವನೆ ಬರುತ್ತಿದೆ, ಎಷ್ಟೊಂದು ಹತ್ತಿರದವಳೆಂದರೆ ನನ್ನ ಇಡೀ ಸತ್ತೆ ಸಂತೋಷದಿಂದ ಕಂಪಿಸುತ್ತಿದೆ.

ನಿನಗೆ ಗೌರವವನ್ನು ನನ್ನ ತೊದಲ್ನುಡಿಯಲ್ಲಿ ಅರ್ಪಿಸಲು ಬಯಸುತ್ತೇನೆ.

ಓ ಪರಮೋಚ್ಚನಾದವನೆ, ಅಂತರಂಗದ ಏಕೈಕ ಮಿತ್ರನೆ, ನಾನು ಹೇಳ–ಬಯಸುವುದನ್ನೆಲ್ಲ ನೀನು ಮೊದಲೇ ಅರಿತಿರುವಿ, ಏಕೆಂದರೆ ನೀನೇ ಅದರ ಮೂಲವಾಗಿರುವಿ.

ಓ ಪರಮೋಚ್ಚನಾದವನೆ, ಕೇವಲ ಸ್ನೇಹಿತನೆ, ಸ್ವೀಕರಿಸುವ, ಪ್ರೇಮಿಸುವ ನೀನು ನಾವಿರುವ ಹಾಗೆ ನಮ್ಮನ್ನು ತಿಳಿದುಕೊಳ್ಳುವಿ, ಏಕೆಂದರೆ ನೀನೇ ನಮ್ಮನ್ನು ಆ ರೀತಿ ಮಾಡಿರುವಿ.

ಓ ಪರಮೋಚ್ಚನೆ, ಏಕೈಕ ಮಾರ್ಗದರ್ಶಕನೆ, ನಮ್ಮ ಅತ್ಯುಚ್ಚ ಸಂಕಲ್ಪಕ್ಕೆ ನಿನ್ನ ವಿರೋಧವಿರುವುದಿಲ್ಲ, ಏಕೆಂದರೆ ಅದರಲ್ಲಿ ಸಂಕಲ್ಪ ಮಾಡುವವನು ನೀನೇ ಆಗಿರುವಿ!

ನಮಗೆ ಕಿವಿಗೊಡುವ, ನಮ್ಮನ್ನು ಅರ್ಥಮಾಡಿಕೊಳ್ಳುವ, ಪ್ರೇಮಿಸುವ ಹಾಗೂ ನಮಗೆ ಮಾರ್ಗದರ್ಶನ ಮಾಡುವ ವ್ಯಕ್ತಿಯನ್ನು ನಿನ್ನಲ್ಲಿ ಅಲ್ಲದೆ ಬೇರೆಡೆ

ಅರಸುವುದು ಮೂರ್ಖತನ, ಏಕೆಂದರೆ ನೀನು ಯಾವಾಗಲೂ ನಮ್ಮ ಕರೆಗೆ ಸಿದ್ಧನಾಗಿರುವಿ, ನಮ್ಮನ್ನು ನೀನು ಎಂದೂ ಕೈಬಿಡುವುದಿಲ್ಲ.

ಪರಮೋಚ್ಚವಾದುದನ್ನು, ಪರಿಪೂರ್ಣ ವಿಶ್ವಾಸದ ಘನತೆಯಿರುವ ಸಂತೋಷವನ್ನು, ಪರಿಪೂರ್ಣ ಸರಳತೆಯನ್ನು, ಯಾವುದೇ ಕಾದಿರಿಸಿಕೊಳ್ಳುವಿಕೆ–ಯಿರದ ಇಲ್ಲವೆ, ವರ್ಣರಂಜಿತವನ್ನಾಗಿ ಮಾಡಿರದ, ಪ್ರಯತ್ನ ಇಲ್ಲವೆ ಭಾವ ಸಂಕೋಚಗಳಿರದ ಇಡಿಯಾದ ಸಮರ್ಪಣೆಯನ್ನು ನಾನು ಅರಿತುಕೊಳ್ಳುವಂತೆ ಮಾಡಿರುವಿ.

ಓ ನನ್ನ ಪ್ರೀತಿಪಾತ್ರನಾದವನೆ, ನಿನ್ನೆದುರು ಸಂತೋಷಭರಿತ ಮಗುವಿನ ಹಾಗೆ ಒಮ್ಮೆಗೆ ಮುಗುಳ್ನಕ್ಕೆ ಮತ್ತು ರೋದಿಸಿದೆ.

(1/374–75) **–ಶ್ರೀಮಾತೆ**

*

## ದೈನಂದಿನ ಜೀವನ ಕುರಿತು ಶ್ರೀಮಾತೆಯವರ ಉಪದೇಶ

ಸತತ ದೈವೀಸಾನ್ನಿಧ್ಯದಲ್ಲಿ ಜೀವಿಸು. ಈ ಸಾನ್ನಿಧ್ಯವೇ ನೀನು ಚಲಿಸುವಂತೆ ಮಾಡುತ್ತದೆ ಮತ್ತು ನೀನು ಮಾಡುವುದೆಲ್ಲವನ್ನು ಮಾಡುತ್ತದೆ ಎಂಬ ಭಾವನೆ–ಯಿಂದ ಜೀವಿಸು. ಅದಕ್ಕೆ ನಿನ್ನ ಎಲ್ಲ ಚಲನೆಗಳನ್ನು, ಕೇವಲ ಮಾನಸಿಕ ಕ್ರಿಯೆ–ಯನ್ನಷ್ಟೇ ಅಲ್ಲ, ಆದರೆ ಪ್ರತಿಯೊಂದು ಯೋಚನೆ, ಭಾವನೆ, ಅತ್ಯಂತ ಸಾಮಾನ್ಯ–ವೆನಿಸುವ, ಬಾಹ್ಯದಲ್ಲಿ ನಡೆಯುವ, ಎಂದರೆ ಊಟ ಮಾಡುವ ಕ್ರಿಯೆಯಂತಹದು ಇವೆಲ್ಲವನ್ನೂ ಅರ್ಪಿಸು. ನೀನು ಊಟ ಮಾಡುತ್ತಿರುವಾಗ ಭಗವಂತನೇ ನಿನ್ನ ಮೂಲಕ ಊಟ ಮಾಡುತ್ತಿದ್ದಾನೆ ಎಂಬ ಭಾವನೆ ನಿನಗೆ ಬರಬೇಕು.

ಸಮಗ್ರ ಯೋಗದಲ್ಲಿ ಸಮಗ್ರ ಜೀವನವನ್ನು, ಅದರ ಅತ್ಯಂತ ಚಿಕ್ಕ ಪುಟ್ಟ ವಿವರಗಳಲ್ಲೂ ಕೂಡ ಪರಿವರ್ತನೆಗೆ ಒಳಪಡಿಸಬೇಕು, ದೈವೀಕರಿಸಬೇಕು. ಇಲ್ಲಿ ಪ್ರಾಮುಖ್ಯವಾಗಿರದೆ ಇರುವಂತಹದು ಯಾವುದೂ ಇಲ್ಲ, ಉದಾಸೀನತೆಯಿಂದ ಯಾವುದನ್ನೂ ನೋಡುವುದಿರುವುದಿಲ್ಲ. "ನಾನು ಧ್ಯಾನ ಮಾಡುತ್ತಿರುವಾಗ, ತತ್ವ–ಜ್ಞಾನದ ಪುಸ್ತಕಗಳನ್ನು ಓದುತ್ತಿರುವಾಗ ಇಲ್ಲವೆ ಈ ಮಾತುಕತೆಗಳಿಗೆ ಕಿವಿ–ಗೊಡುತ್ತಿರುವಾಗ ಪ್ರಕಾಶಕ್ಕೆ ತೆರೆದುಕೊಳ್ಳುವ ಹಾಗೂ ಅದಕ್ಕೆ ಕರೆ ಕೊಡುವ ಈ ಸ್ಥಿತಿಯಲ್ಲಿರುತ್ತೇನೆ, ನಾನು ವಾಯುವಿಹಾರಕ್ಕೆ ಹೋದಾಗ, ಮಿತ್ರರನ್ನು ಭೇಟಿ ಮಾಡಿದಾಗ ಇದೆಲ್ಲವನ್ನು ಮರೆತುಬಿಡಲು ಅವಕಾಶ ಕಲ್ಪಿಸಿಕೊಳ್ಳಬಲ್ಲೆ" ಎಂದು



ನೀವು ಹೇಳಕೂಡದು.

**ಪ್ರಶ್ನೆ :** *ನಾವು ಮಾನಸಿಕ ಚಲನವಲನಗಳಲ್ಲಿ ಏಕಾಗ್ರಗೊಂಡಾಗ ಇಲ್ಲವೆ ಬೌದ್ಧಿಕ ಹವ್ಯಾಸಗಳಲ್ಲಿ ತೊಡಗಿಕೊಂಡಾಗ ಕೆಲವೊಮ್ಮೆ ನಾವು ಭಗವಂತನೊಡನಿರುವ ಸ್ಪರ್ಶವನ್ನು ಏಕೆ ಕಳೆದುಕೊಳ್ಳುತ್ತೇವೆ?*

**ಶ್ರೀಮಾತೆ :** ನಿಮ್ಮ ಪ್ರಜ್ಞೆ ವಿಭಜನೆಗೆ ಒಳಗಾಗಿರುವುದರಿಂದ ನೀವು ಆ ಸ್ಪರ್ಶವನ್ನು ಕಳೆದುಕೊಳ್ಳುತ್ತೀರಿ. ನಿಮ್ಮ ಪ್ರಜ್ಞೆಯಲ್ಲಿ ಭಗವಂತ ಇನ್ನೂ ನೆಲೆಸಿಲ್ಲ, ದೈವೀ ಜೀವನಕ್ಕೆ ನೀವಿನ್ನೂ ಇಡಿಯಾಗಿ ನಿಮ್ಮನ್ನು ಮುಡಿಪಾಗಿರಿಸಿಕೊಂಡಿಲ್ಲ. ಈ ಅತಂತ್ರ ಸ್ಥಿತಿ ಇರದಿದ್ದರೆ ಇಂತಹ ಎಷ್ಟೋ ವಿಷಯಗಳ ಮೇಲೆ ನಿಮ್ಮ ಮನಸ್ಸನ್ನು ಕೇಂದ್ರೀಕರಿಸಬಹುದು, ಆದಾಗ್ಯೂ ನಿಮಗೆ ಭಗವಂತ ಆಧಾರ ಒದಗಿಸುತ್ತಿರುವ, ಸಹಾಯ ನೀಡುತ್ತಿರುವ ಭಾವನೆ ಬರುತ್ತದೆ. ಯೋಗವನ್ನು ಪ್ರಾರಂಭಿಸುತ್ತಿರುವ ಹಂತದಲ್ಲಿ ಭಗವಂತನನ್ನು ನೀವು ಬಹಳಷ್ಟು ಸಲ ಮರೆತುಬಿಡುವ ಸಾಧ್ಯತೆ ಇದೆ. ಆದರೆ ಸತತ ಅಭೀಪ್ಸೆಪಡುವುದರ ಮೂಲಕ ನೆನಪಿನಲ್ಲಿಟ್ಟುಕೊಳ್ಳುವುದನ್ನು ಹೆಚ್ಚಿಸುತ್ತೀರಿ ಮತ್ತು ಮರೆತುಬಿಡುವುದನ್ನು ಕಡಿಮೆ ಮಾಡುತ್ತೀರಿ. ಆದರೆ ಇದನ್ನು ಕಠಿಣ ಶಿಸ್ತುಪಾಲನೆಯನ್ನು ಅನುಸರಿಸುವ ರೀತಿಯಲ್ಲಾಗಲಿ, ಕರ್ತವ್ಯವೊಂದನ್ನು ನಿರ್ವಹಿಸುವ ರೀತಿಯಲ್ಲಾಗಲಿ ಮಾಡಬಾರದು, ಅದು ಪ್ರೇಮ ಹಾಗೂ ಸಂತೋಷಗಳಿಂದ ಕೂಡಿದ ಚಲನೆಯಾಗಬೇಕು.

(3/23–26) **– ಶ್ರೀಮಾತೆ**

*

## ವಾರ್ತಾಪತ್ರ

### ಶ್ರೀ ಅರವಿಂದೋ ಸಂಕೀರ್ಣ,

ಜೆ.ಪಿ. ನಗರ 1ನೇ ಹಂತ, ಬೆಂಗಳೂರು–78.

ದಿನಾಂಕ 18–2–2012 ಶನಿವಾರದಂದು ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಾಲಾ ವತಿಯಿಂದ ಜ್ಯೋತಿ ಪ್ರಸರಣ ಕಾರ್ಯಕ್ರಮ ಜರುಗಿತು. ಮುಖ್ಯ ಅತಿಥಿಗಳು ಜ್ಯೋತಿ ಬೆಳಗುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಶಿಕ್ಷಕ ವೃಂದ ಹಚ್ಚಿದ ಜ್ಯೋತಿ ಹತ್ತನೆಯ ತರಗತಿಯ ವಿದ್ಯಾರ್ಥಿಗಳ ಮೂಲಕ ಒಂಭತ್ತನೆಯ ತರಗತಿಯ ವಿದ್ಯಾರ್ಥಿಗಳಿಗೆ ಪ್ರಸಾರವಾಯಿತು. ಶಾಲಾ ಆಡಳಿತಧಿಕಾರಿ ಶ್ರೀಮತಿ ಪ್ರತಿಭಾ ಸಬ್ನೀಸ್‌ರಿಂದ ವಿದ್ಯಾರ್ಥಿಗಳು ಪ್ರತಿಜ್ಞಾಸ್ವೀಕಾರ ಮಾಡಿದರು. ಮುಖ್ಯ ಅತಿಥಿಗಳಾದ ಶ್ರೀಮತಿ ಮೀರಾಕೃಷ್ಣಮೂರ್ತಿ ವಿದ್ಯಾರ್ಥಿಗಳಿಗೆ ಹಿತೋಪದೇಶ ಮಾಡಿದರು. ಶಾಲಾ ಸಂಚಾಲಕರಾದ ಶ್ರೀ ಅಜಿತ್ ಸಬ್ನೀಸ್ ಹತ್ತನೆಯ ತರಗತಿಯ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು. ಶಾಲಾ ಪ್ರಾಂಶುಪಾಲರು ಉಪಸ್ಥಿತರಿದ್ದರು. ಹತ್ತನೆಯ ತರಗತಿಯ ವಿದ್ಯಾರ್ಥಿಗಳು ತಮ್ಮ ಶಾಲಾ ಅನುಭವಗಳನ್ನು ಸಭಿಕರೊಂದಿಗೆ ಹಂಚಿಕೊಂಡರು. ವಿದ್ಯಾರ್ಥಿಗಳ ಪೋಷಕರು ಮತ್ತು ಶಾಲಾ ಶಿಕ್ಷಕ ವೃಂದ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವಂದೇ ಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಸಮಾಪ್ತವಾಯಿತು. ಶಾಲಾ ಶಿಕ್ಷಕಿ ಶ್ರೀಮತಿ ಸೋಹಿನಿ ಭಟಾಚಾರ್ಯ ಕಾರ್ಯಕ್ರಮ ನಿರೂಪಿಸಿದರು.

ದಿನಾಂಕ 21ನೇ ಫೆಬ್ರವರಿ 2012ರ ಮಂಗಳವಾರದಂದು ಶ್ರೀಮಾತೆಯವರ ಜನ್ಮದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7 ರಿಂದ 7.30ರ ವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸುವುದರೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ತತ್ಸಂಬಂಧ (ಇಕೇಬಾನ) ಆಧ್ಯಾತ್ಮಿಕ ವೈಶಿಷ್ಟತೆಯನ್ನು ಹೊಂದಿರುವ ಹೂವುಗಳ ಪ್ರದರ್ಶನ ಹಾಗೂ ಶ್ರೀಯುತ ಎ.ಎಸ್. ಪಾಟೀಲರವರು ಬಿಡಿಸಿದ ಆಧ್ಯಾತ್ಮಿಕ ವೈಶಿಷ್ಟತೆಯನ್ನು ಹೊಂದಿರುವ ಹೂವುಗಳ ವರ್ಣ ಚಿತ್ರಗಳನ್ನು ಪ್ರದರ್ಶಿಸಲಾಯಿತು. ಅದೇ ದಿನ ಸಾಯಂಕಾಲ 4.30 ರಿಂದ 6.00 ಗಂಟೆಯವರೆಗೆ ಶ್ರೀಯುತರಾದ ಭಾಸ್ಕರ ರೆಡ್ಡಿಯವರು ಚಿತ್–ಶಕ್ತಿ–ಎ–ಟೇಲ್ ಆಫ್ ಟೂ ವರ್ಡ್ಸ್ ಎಂಬ ವಿಷಯದ ಬಗ್ಗೆ ಪವರ್ ಪಾಯಿಂಟ್ ಪ್ರಸೆಂಟೇಷನ್ ಮುಖಾಂತರ ವಿವರಿಸಿದರು. ಈ ಕಾರ್ಯಕ್ರಮಕ್ಕೆ ಅನೇಕ ಗುರುಬಂಧುಗಳು, ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು.



26ನೇ ಫೆಬ್ರವರಿ 2012ರ ಭಾನುವಾರದಂದು "ಟು ವರ್ಡ್ಸ್ ದ ಸೂಪರ್ ಮೈಂಡ್" ಎಂಬ ವಿಷಯದ ಬಗ್ಗೆ ವರ್ಣಚಿತ್ರ ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಬೆಳಿಗ್ಗೆ 10.30 ರಿಂದ 11.30ರ ವರೆಗೆ ಆಧ್ಯಾತ್ಮಿಕ ವೈಶಿಷ್ಟ್ಯತೆಯನ್ನು ಹೊಂದಿರುವ ಹೂವುಗಳ ಬಗ್ಗೆ ಶ್ರೀಯುತ ಎ.ಎಸ್. ಪಾಟೀಲರವರು ವಿವರಿಸಿದರು. ನಂತರ 11.30 ರಿಂದ 12.00 ಗಂಟೆಯವರೆಗೆ "ದಿ ಸ್ಪಿರಿಚ್ಯುಲ್ ಸಿಗ್ನಿಫಿಕೆನ್ಸ್ ಆಫ್ ಫ್ಲವರ್ಸ್" ಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು. "ಟು ವರ್ಡ್ಸ್ ದ ಸೂಪರ್ ಮೈಂಡ್" ಎಂಬ ವಿಷಯದ ಬಗ್ಗೆ ಚಿತ್ರಕಲಾ ಪ್ರದರ್ಶನವನ್ನು ಆಯೋಜಿಸಲಾಗಿತ್ತು.

29ನೇ ಫೆಬ್ರವರಿ 2012ರ ಬುಧವಾರರಂದು ಬೆಳಿಗ್ಗೆ 7 ರಿಂದ 7.30ರ ವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ಹಂಚುವುದರೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಸಾವಿತ್ರಿ ಆಯ್ದ ವಾಕ್ಯಗಳ ಕುರಿತು ಪ್ರಾಕೃತಿಕ ಪುಷ್ಪ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಅದೇ ದಿನ ಸಾಯಂಕಾಲ 5 ರಿಂದ 5.40ರ ವರೆಗೆ "ಸಾವಿತ್ರಿಯ ಧ್ಯಾನ" ಎಂಬ ವಿಷಯದ ಬಗ್ಗೆ ಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

## ವಾರ್ತಾಪತ್ರ

**ಶ್ರೀ ಅರವಿಂದೋ ಸಂಕೀರ್ಣ,**

ಜೆ.ಪಿ. ನಗರ 1ನೇ ಹಂತ, ಬೆಂಗಳೂರು–78.

ಶ್ರೀ ಅರವಿಂದೋ ಸಂಕೀರ್ಣದ ಸಾಂಸ್ಕೃತಿಕ ಸಭಾಭವನದಲ್ಲಿ ಪ್ರತಿ ತಿಂಗಳ ಎರಡನೇ ಭಾನುವಾರ ಬೆಳಿಗ್ಗೆ 10.30 ರಿಂದ 12.00 ಗಂಟೆಯವರೆಗೆ ಉಪನಿಷತ್ ಬಗ್ಗೆ ಡಾ॥ ಆರ್. ಎಲ್. ಕಶ್ಯಪ್ ರವರು ಉಪನ್ಯಾಸ ನೀಡುವರು.



## REVISION OF THE SOCIETY'S MEMBERSHIP FEES IN INDIA

### With effect from 1st April, 2009

| Sl.No. | Membership Category | Amount in Rs. |
|---|---|---|
| 1. | Member with Magazine | |
| | For One Year | 150 |
| | For Three Years | 440 |
| | For Five Years | 730 |
| 2. | Donor Member | |
| | For 10 Years | 3000 |
| 3. | Contributing Member | |
| | For One Year | 300 |
| 4. | Contributing Donor Memeber | |
| | For 15 Years | 10,000 |